ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

47

ಮೇ 13 ಬುಧವಾರ 2026

ಸಂಪುಟ: 47 | ಸಂಚಿಕೆ: 27 | ಪುಟಗಳು: 12

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

ಮೈಸೂರು-ಹಜರತ್ ನಿಜಾಮುದ್ದೀನ್ ನಡುವೆ ವಿಶೇಷ ಎಕ್ಸ್‌ಪ್ರೆಸ್ ರೈಲು



ಮೇ 21ರಂದು ಮೈಸೂರು, ಮೇ 24ರಂದು ನಿಜಾಮುದ್ದೀನ್‌ನಿಂದ ಹೊರಡುವ ರೈಲು

ಮೈಸೂರು, ಮೇ12(ಬಿಎಲ್‌ಯು)– ಬೇಸಿಗೆ ರಜೆಯಲ್ಲಿ ಪ್ರಯಾಣಿಕರ ದಟ್ಟಣೆ ಹೆಚ್ಚಾಗಿರುವ ಹಿನ್ನೆಲೆಯಲ್ಲಿ ಮೈಸೂರು ಹಾಗೂ ಹಜರತ್ ನಿಜಾಮುದ್ದೀನ್ ನಿಲ್ದಾಣಗಳ ನಡುವೆ ಒಂದು ಟ್ರಿಪ್ ವಿಶೇಷ ಎಕ್ಸ್‌ಪ್ರೆಸ್ ರೈಲು ಸಂಚರಿಸಲಿದೆ ಎಂದು ನೈಋತ್ಯ ರೈಲ್ವೆಯ ಮೈಸೂರು ವಿಭಾಗದ ವಾಣಿಜ್ಯ ವ್ಯವಸ್ಥಾಪಕ ಗಿರೀಶ್ ಧರ್ಮರಾಜ ಕಲಗೊಂಡ ತಿಳಿಸಿದ್ದಾರೆ.

ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು, ಮೈಸೂರು– ಹಜರತ್ ನಿಜಾಮುದ್ದೀನ್ ಎಕ್ಸ್ ಪ್ರೆಸ್ ವಿಶೇಷ ರೈಲು ಮೇ 21ರ ಗುರುವಾರ ಮುಂಜಾನೆ 4 ಗಂಟೆಗೆ ಮೈಸೂರಿನಿಂದ ಹೊರಡಲಿದ್ದು, ಮೇ 23ರ ಶನಿವಾರ ಬೆಳಿಗ್ಗೆ 5.45 ಗಂಟೆಗೆ ಹಜರತ್ ನಿಜಾಮುದ್ದೀನ್ ತಲುಪಲಿದೆ ಎಂದು ಮಾಹಿತಿ ನೀಡಿದ್ದಾರೆ.

ತರುವಾಯ ಮರು ಪ್ರಯಾಣದಲ್ಲಿ ಹಜರತ್ ನಿಜಾಮುದ್ದೀನ್ ನಿಂದ ಮೇ 24ರ ಭಾನುವಾರ ರಾತ್ರಿ 9 ಗಂಟೆಗೆ ಹೊರಟು, ಮೇ 26ರ ಮಂಗಳವಾರ ರಾತ್ರಿ 11.45 ಗಂಟೆಗೆ ಮೈಸೂರಿಗೆ ಆಗಮಿಸಲಿದೆ ಎಂದು ತಿಳಿಸಿದ್ದಾರೆ.

ಈ ರೈಲು ಹಾಸನ, ಅರಸೀಕೆರೆ, ಬೀರೂರು, ಹಾವೇರಿ, ಹುಬ್ಬಳ್ಳಿ, ವಿಜಯಪುರ, ಸೋಲಾಪುರ, ದೌಂಡ್, ಬೇಲಾಪುರ, ಮನ್ಮಾಡ್, ಭೂಸಾವಲ್, ಇಟಾರ್ಸಿ, ರಾಣಿ ಕಮಲಾಪತಿ, ವೀರಾಂಗನಾ ಲಕ್ಷ್ಮಿಬಾಯಿ ಝಾನ್ಸಿ ಮತ್ತು ಆಗ್ರಾ ಕ್ಯಾಂಟ್ ನಿಲ್ದಾಣಗಳಲ್ಲಿ ನಿಲುಗಡೆಯಾಗಲಿದೆ. ಈ ವಿಶೇಷ ರೈಲಿನಲ್ಲಿ 18 ಸ್ಲೀಪರ್ ದರ್ಜೆಯ ಬೋಗಿಗಳು, 2 ಲಗೇಜ್ ಕಮ್ ಬ್ರೇಕ್ ವ್ಯಾನ್‌ಯೊಂದಿಗೆ ದಿವ್ಯಾಂಗ ಸ್ನೇಹಿ ಬೋಗಿ ಸೇರಿ 20 ಬೋಗಿಗಳಿರಲಿದೆ.

ಪಶ್ಚಿಮ ಬಂಗಾಳ, ಬಿಹಾರದಂತೆ ಅಧಿಕಾರ ಹಿಡಿಯಲು ಬಿಜೆಪಿ ಕುತಂತ್ರ

ಎಸ್‌ಐಆರ್ ಮೂಲಕ ಕರ್ನಾಟಕದ 86 ಲಕ್ಷ ಮತದಾರರಿಗೆ ಕೊಕ್!

● ಮೈಸೂರಲ್ಲಿ ಕಾಂಗ್ರೆಸ್ ರಾಜ್ಯ ವಕ್ತಾರ ಎಂ.ಲಕ್ಷ್ಮಣ್ ಅನುಮಾನ ● ನರಸಿಂಹರಾಜ ಕ್ಷೇತ್ರ ಒಂದರಲ್ಲೇ 43 ಸಾವಿರ ಮುಸ್ಲಿಂ ಮತದಾರರ ಕೈ ಬಿಡಲಾಗಿದೆ ● ಚಾಮುಂಡೇಶ್ವರಿ ಕ್ಷೇತ್ರದಲ್ಲಿ 71,512 ಮತದಾರರು ಪಟ್ಟಿಯಿಂದ ಹೊರಗೆ ● ತಾತ, ಮುತ್ತಾತನ ದಾಖಲಾತಿ ಹೇಗೆ ತರುವುದು ● ಹೀಗಾದರೆ ತನ್ವೀರ್ ಸೇಠ್ ಹೇಗೆ ಚುನಾವಣೆ ಎದುರಿಸುತ್ತಾರೆ

ಮೈಸೂರು, ಮೇ12(ಬಿಎಲ್ ಯು)– ಪಶ್ಚಿಮ ಬಂಗಾಳ, ಬಿಹಾರದಂತೆ ಕರ್ನಾಟಕದಲ್ಲಿ ಬಿಜೆಪಿ ಗೆಲವು ಸಾಧಿಸಲು ಈಗಾಗಲೇ ಎಸ್‌ಐಆರ್ (ವಿಶೇಷ ತೀವ್ರ ಪರಿಷ್ಕರಣೆ) ಮೂಲಕ 86 ಲಕ್ಷ ಮತದಾರರನ್ನು ಮತದಾರರ ಪಟ್ಟಿಯಿಂದ ಕೈ ಬಿಟ್ಟಿದ್ದಾರೆ ಎಂದು ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ಆರೋಪಿಸಿದ್ದಾರೆ.

ಮೈಸೂರಿನ ಜಲದರ್ಶಿನಿ ಅತಿಥಿ ಗೃಹದಲ್ಲಿ ಇಂದು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಎಸ್‌ಐಆರ್ ಮೂಲಕ ಮತದಾರರ ಪಟ್ಟಿಯಲ್ಲಿ 86 ಲಕ್ಷ ಮತದಾರರನ್ನು ಕೈಬಿಡುವಲ್ಲಿ ಬಿಜೆಪಿ ಎಲೆಕ್ಷನ್ ಮಾಸ್ಟರ್‌ಗಳು ಹುನ್ನಾರ ನಡೆಸಿದ್ದಾರೆ ಎಂದು ಆಪಾದಿಸಿದರು.

ರಾಜ್ಯದಲ್ಲಿ ಕಳೆದ 15 ದಿನದ ಹಿಂದೆ ಎಸ್‌ಐಆರ್ ಪ್ರಕ್ರಿಯೆ ಪೂರ್ಣಗೊಳಿಸಿದ್ದಾರೆ. ಬೇರೆ ಯಾವುದೇ ಪಕ್ಷ ಗೆಲ್ಲದಂತೆ ಮತದಾರರ ಪಟ್ಟಿಗೆ ಕನ್ನ ಹಾಕಿದ್ದಾರೆ. ಪಶ್ಚಿಮ ಬಂಗಾಳ, ಬಿಹಾರದಂತೆ ಕರ್ನಾಟಕದಲ್ಲೂ ವಾಮ ಮಾರ್ಗದಲ್ಲಿ ಗೆಲವು ಸಾಧಿಸಲು ಬಿಜೆಪಿಯವರು ಷಡ್ಯಂತ್ರ ರೂಪಿಸಿದ್ದಾರೆ ಎಂದು ಲಕ್ಷ್ಮಣ್ ದೂರಿದರು.



ಎಂ.ಲಕ್ಷ್ಮಣ್

ಎಸ್‌ಐಆರ್ ಪ್ರಕಾರ ಶೇಕಡ 15ರಷ್ಟು ಮತದಾರರನ್ನು ಮಾತ್ರ ಮ್ಯಾಪಿಂಗ್ ಮಾಡಬೇಕು. ಆದರೆ ಇವರು 86 ಲಕ್ಷ ಮತದಾರರನ್ನು ಮತದಾರರ ಪಟ್ಟಿಯಿಂದ ಹೊರಗಿಡುವ ಪ್ರಯತ್ನ ಮಾಡಿದ್ದಾರೆ. ಈ ಬಗ್ಗೆ ಆಕ್ಷೇಪಿಸಿದರೆ ಮತದಾರರ ಪಟ್ಟಿಯಿಂದ ಇವರನ್ನು ಕೈ ಬಿಟ್ಟಿಲ್ಲ, ಬದಲಿಗೆ ತಡೆಹಿಡಿದಿದ್ದೇವೆ. ಸೂಕ್ತ ದಾಖಲಾತಿ ನೀಡಿದರೆ ಮತ್ತೆ ಮತದಾರರ ಪಟ್ಟಿಗೆ ಸೇರಿಸುತ್ತೇವೆ ಎಂಬ ಸಬೂಬು ಹೇಳುತ್ತಿದ್ದಾರೆ. ಮತದಾರರ ಪಟ್ಟಿಯಿಂದ ಕೈ ಬಿಟ್ಟಿರುವವರು ಸೂಕ್ತ ದಾಖಲಾತಿ ಸಲ್ಲಿಸಲು ಸೂಚಿಸಿದ್ದಾರೆ. ಆದರೆ ಅವರ ತಾತ, ಮುತ್ತಾತನ ದಾಖಲಾತಿ ಕೊಡಲು ಅವರಿಗೆ ಹೇಗೆ ಸಾಧ್ಯವಾಗುತ್ತದೆ ಎಂದು ಪ್ರಶ್ನಿಸಿದರು. ಕರ್ನಾಟಕದಲ್ಲಿ 5.5 ಕೋಟಿ ಮತದಾರರಿದಿದ್ದಾರೆ. ಮೈಸೂರು ಜಿಲ್ಲೆಯ 11 ವಿಧಾನಸಭಾ ಕ್ಷೇತ್ರದಲ್ಲಿ 27,99,744 ಮತದಾರರಿದ್ದಾರೆ. ಇದರಲ್ಲಿ ಚಾಮುಂಡೇಶ್ವರಿ ಕ್ಷೇತ್ರದಲ್ಲಿ 71,512 ಮತದಾರರನ್ನು, ನರಸಿಂಹರಾಜ ಕ್ಷೇತ್ರದಲ್ಲಿ 59,749 ಮತದಾರರನ್ನು ಮತದಾರರ ಪಟ್ಟಿಯಿಂದ ಕೈ ಬಿಟ್ಟಿದ್ದಾರೆ ಎಂದು ಅಂಕಿ ಅಂಶಗಳ ಸಹಿತ ವಿವರಣೆ ನೀಡಿದರು.

ನರಸಿಂಹರಾಜ ಕ್ಷೇತ್ರ ಒಂದರಲ್ಲೇ 43 ಸಾವಿರ ಮುಸ್ಲಿಂ ಮತದರಾರರನ್ನು ಮತದಾರರ ಪಟ್ಟಿಯಿಂದ ಕೈ ಬಿಟ್ಟಿದ್ದಾರೆ. ಹೀಗಾದರೆ ಹಾಲಿ ಶಾಸಕ ತನ್ವೀರ್ ಸೇಠ್ ಅವರು ಯಾವ ರೀತಿ ಚುನಾವಣೆ ಎದುರಿಸಬೇಕು ಎಂದು ಮರು ಪ್ರಶ್ನಿಸಿದರು.

ಒಟ್ಟಾರೆ 2028ರ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಗೆಲುವು ಸಾಧಿಸಲು ಈಗಲೇ ತಯಾರಿ ಮಾಡಿಕೊಳ್ಳುತ್ತಿದೆ. ಇಂತಹ ಕುತಂತ್ರ ಪ್ರಜಾಪ್ರಭುತ್ವದ ವ್ಯವಸ್ಥೆಗೆ ಮಾರಕ ಎಂದು ಅಭಿಪ್ರಾಯಪಟ್ಟರು.

ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ.ಬಿ.ಜೆ. ವಿಜಯಕುಮಾರ್, ಪ್ರಧಾನ ಕಾರ್ಯದರ್ಶಿ ಎಂ.ಶಿವಣ್ಣ, ಜಿಪಂ ಮಾಜಿ ಅಧ್ಯಕ್ಷ ಬಿ.ಎಂ.ರಾಮು, ನಗರ ಕಾಂಗ್ರೆಸ್ ವಕ್ತಾರ ಕೆ.ಮಹೇಶ್ ಪತ್ರಿಕಾಗೋಷ್ಠಿಯಲ್ಲಿದ್ದರು.

ಮೋದಿ ಜನಸಾಮಾನ್ಯರ ದಿಕ್ಕು ತಪ್ಪಿಸುತ್ತಿದ್ದಾರೆ

"ಚಿನ್ನ ಖರೀದಿಸಬೇಡಿ, ಪೆಟ್ರೋಲ್, ಡೀಸೆಲ್ ಅನ್ನು ಮಿತವಾಗಿ ಬಳಸಿ ಎಂದು ಪ್ರಧಾನಿ ಮೋದಿ ಅವರು ಕರೆ ನೀಡುವ ಮೂಲಕ ಜನ ಸಾಮಾನ್ಯರನ್ನು ದಿಕ್ಕು ತಪ್ಪಿಸುತ್ತಿದ್ದಾರೆ ಎಂದು ಲಕ್ಷ್ಮಣ್ ಆರೋಪಿಸಿದರು.

ಆರ್ಥಿಕ ತುರ್ತು ಪರಿಸ್ಥಿತಿಯ ಹಿನ್ನೆಲೆಯಲ್ಲಿ ಬೆಂಗಳೂರಿಗೆ ಬಂದ ವೇಳೆ 9 ಅಂಶಗಳ ಕರೆ ನೀಡಿದ್ದಾರೆ. ದೇಶದ ಪ್ರಧಾನಿಯಾಗಿ ಹೀಗೆ ಹೇಳಬಹುದೇ ಎಂದು ಪ್ರಶ್ನಿಸಿದರು. ಎಲ್‌ಪಿಜಿ ಬೆಲೆ ಏರಿಕೆ ಸೇರಿದಂತೆ ಕೇಂದ್ರದ ಬಿಜೆಪಿ ಸರ್ಕಾರದ ಇತರೆ ಜನ ವಿರೋಧಿ ನೀತಿಗಳು ಸಾರ್ವಜನಿಕವಾಗಿ ಚರ್ಚೆಗೆ ಬರುತ್ತಿಲ್ಲ. ಆದರೆ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕೂತರು, ನಿಂತರೂ ದಿನಪೂರ್ತಿ ಚರ್ಚೆ ಮಾಡುತ್ತಿದ್ದಾರೆ ಎಂದು ಲಕ್ಷ್ಮಣ್ ಆಕ್ರೋಶ ವ್ಯಕ್ತಪಡಿಸಿದರು.

ಭೂ ಮಾಪನ ಇಲಾಖೆಯಲ್ಲಿ ಮೂಲ ದಾಖಲೆ ನಕಲು ವಿತರಣೆಗೆ ವಿಧಿಸುವ ಶುಲ್ಕ ಪರಿಷ್ಕರಣೆ

ಮೈಸೂರು, ಮೇ 12(ಎಸ್‌ಪಿಎನ್)– ಭೂ ಮಾಪನ ಇಲಾಖೆಯಲ್ಲಿ 17 ಬಗೆಯ ಮೂಲ ದಾಖಲೆಯ ನಕಲುಗಳ ವಿತರಣೆ ಶುಲ್ಕಗಳ(10ರಿಂದ 35 ರೂ.ವರೆಗೆ) ಪರಿಷ್ಕರಣೆ ಮಾಡಿ ಭೂಮಾಪನ ಕಂದಾಯ ವ್ಯವಸ್ಥೆ ಮತ್ತು ಭೂ ದಾಖಲೆಗಳ ಇಲಾಖೆ ಆಯುಕ್ತ ವೆಂಕಟರಾಜ ಸುತ್ತೋಲೆ ಹೊರಡಿಸಿದ್ದಾರೆ.

ರಾಜ್ಯ ಸರ್ಕಾರವು ಭೂ ಮಾಪನ ಇಲಾಖೆಯ ಸರ್ವೆ ದಾಖಲೆಗಳ ನಕಲು ವಿತರಣಾ ಶುಲ್ಕವನ್ನು ಪರಿಷ್ಕರಿಸಿ ಈಗಾಗಲೇ ಅಧಿಸೂಚನೆ ಹೊರಡಿಸಿದೆ. ಭೂ ಮಾಪನ ಇಲಾಖೆಯಲ್ಲಿ ವಿತರಿಸಲಾಗುತ್ತಿರುವ ವಿವಿಧ ನಮೂನೆಯ ನಕಲುಗಳನ್ನು ಪರಿಷ್ಕೃತ ದರಗಳಂತೆ ಯಾವ ನಮೂನೆಗೆ ಎಷ್ಟು ದರ ವಸೂಲು ಮಾಡಬೇಕು ಎಂಬುದರ ಬಗ್ಗೆ ಹೋಬಳಿ, ತಾಲೂಕು ಹಾಗೂ ಜಿಲ್ಲಾ ಹಂತದ ಇಲಾಖೆಗಳಲ್ಲಿ ನಕಲು ವಿತರಣಾ ಪರಿಷ್ಕೃತ ಶುಲ್ಕದಿಂದಾಗಿ ಗೊಂದಲ ಉಂಟಾಗಿರುವ ವಿಷಯ ಆಯುಕ್ತರ ಗಮನಕ್ಕೆ ಬಂದಿರುವ ಹಿನ್ನೆಲೆಯಲ್ಲಿ ಪರಿಷ್ಕೃತ ಆದೇಶ ಹೊರಡಿಸಲಾಗಿದೆ. ಆದ್ದರಿಂದ ಇಲಾಖೆಯಲ್ಲಿ ನೀಡಲಾಗುವ ದಾಖಲೆಗಳ ನಕಲುಗಳಿಗೆ ಏಕರೂಪದ ನಕಲು ಶುಲ್ಕ ಪಾವತಿ ಮಾಡುವಂತೆ ಸೂಚಿಸಿದ್ದಾರೆ.

ಪರಿಷ್ಕೃತ ಶುಲ್ಕಗಳು ಇಂತಿವೆ: ಪ್ರತಿ ಸರ್ವೆ, ಹಿಸ್ಸಾ ನಂಬರಿನ ಟಿಪ್ಪಣಿ ಅಟ್ಲಾಸ್ ನಕಲು, ಕರ್ದಾ ಉತಾರ ಅಥವಾ ಖರಾಜು ಉತಾರ ಇಲ್ಲವೇ ನೀರಿನ ಆಶ್ರಯದ ವಿವರದ ನಕಲಿಗೆ 35 ರೂ.

ನಕಾಶೆಯಲ್ಲಿ ಹೊರಡಿಸಲಾದ ಪ್ರತಿ ಸರ್ವೆ ನಂಬರಿನ ನಕಲಿಗೆ, ನೋಟೀಸ್ ಕಾಪಿ, ಅರ್ಜಿ ನಕಲು, ಹೇಳಿಕೆ, ಮಹಜರು ಕಾಪಿ, ಒಂದು ಪುಟಕ್ಕೆ 10 ರೂ., ಪ್ರತಿ ಸರ್ವೆ, ಹಿಸ್ಸಾ ನಂಬರ್‌ನ ಆಕಾರ್ ಬಂದ್ ನಕಲಿಗೆ 20 ರೂ., ಗ್ರಾಮ ನಕಾಶೆ ನಕಲಿನ ವಿಸ್ತೀರ್ಣ 500 ಚದರ ಇಂಚು ಮೀರಿದ್ದಲ್ಲಿ 21/23–9–92 ರಂತೆ ಇರುವ ದರಗಳ ದುಪ್ಪಟ್ಟು ವಸೂಲು ಮಾಡತಕ್ಕದ್ದು. ಆದೇಶದ ನಕಲಾದ ಪ್ರತಿ 100 ಪದಗಳಿಗೆ ಅಥವಾ 100ರ ಅಂಶಕ್ಕೆ 10 ರೂ., ಹಾಗೂ ಆದೇಶಕ್ಕೆ ಅನ್ವಯಿಸುವ ನಕ್ಷೆ ಇದ್ದಲ್ಲಿ ಪ್ರತಿ ಸರ್ವೆ, ಹಿಸ್ಸಾ ನಂಬರಿಗೆ 35 ರೂ., ವಸೂಲಿಗೆ ಆದೇಶಿಸಿದೆ. ಹೀಗೆ ಬೇರೆ ದಾಖಲಾತಿಗಳ ನಕಲುಗಳ ಪಡೆಯಲು 10ರಿಂದ 35 ರೂ.ಗಳಿಗೆ ಪರಿಷ್ಕರಣೆ ಮಾಡಿ ಭೂ ಮಾಪನ ಇಲಾಖೆ ಆದೇಶಿಸಿದೆ

ಜೂನ್ ತಿಂಗಳಲ್ಲಿ ಮೆಗಾ ವಿಶ್ವ ಪರಿಸರ ಮಾಸಾಚರಣೆ



'ವಿಶ್ವ ಪರಿಸರ ಮಾಸಾಚರಣೆ' ಪೋಸ್ಟರ್ ಅನ್ನು ಬಿಡುಗಡೆ ಮಾಡಲಾಯಿತು.

ಮೈಸೂರು, ಮೇ12(ಎಂಕೆ)– ಭಾರತದ ಬಿಲ್ಡರ್ಸ್ ಅಸೋಸಿಯೇಷನ್ ಆಫ್ ಇಂಡಿಯಾ ಮೈಸೂರು ಕೇಂದ್ರ ಹಾಗೂ ಮೈಸೂರು ಬಿಲ್ಡರ್ಸ್ ಚಾರಿಟೇಬಲ್ ಟ್ರಸ್ಟ್ ಸಹಯೋಗದೊಂದಿಗೆ ಜೂ.5ರಿಂದ 30ರವರೆಗೆ 'ವಿಶ್ವ ಪರಿಸರ ಮಾಸಾಚರಣೆ' ಹಮ್ಮಿಕೊಳ್ಳಲಾಗಿದೆ ಎಂದು ಮಾಸಾಚರಣೆಯ ಅಧ್ಯಕ್ಷ ಸಿ.ಡಿ.ಕೃಷ್ಣ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಸಭಾಂಗಣದಲ್ಲಿ ಮಂಗಳವಾರ ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು, 2014ರಿಂದಲೂ ಜೂನ್ ತಿಂಗಳಿನಲ್ಲಿ 'ವಿಶ್ವ ಪರಿಸರ ಮಾಸಾಚರಣೆ' ನಡೆಸಲಾಗುತ್ತಿದೆ. ಅದರಂತೆ ಈ ವರ್ಷವೂ ಜೂನ್ ತಿಂಗಳ ಪೂರ್ತಿ ವಿವಿಧ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ ಎಂದರು.

ಜೂ.5ರಂದು 'ವಿಶ್ವ ಪರಿಸರ ಮಾಸಾಚರಣೆ' ಉದ್ಘಾಟನೆಯಾಗಲಿದ್ದು, ಜೂ.7ರಂದು ವಿವಿಧ ಸಂಸ್ಥೆಗಳ ಸಹಯೋಗದೊಂದಿಗೆ ಬೃಹತ್ 'ಗ್ರೀನ್ ಮೈಸೂರು ವಾಕ್‌ಥಾನ್' ನಡೆಯಲಿದೆ. ಹಾಗೆಯೇ ಜೂ.12ರಂದು ಮೈಸೂರು ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಗಿಡ ನೆಡುವ ಕಾರ್ಯಕ್ರಮ. ಜೂ.14ರಂದು ಬಿಎಐ ಸೈಕ್ಲೋಥಾನ್ ಮತ್ತು ಶಾಲಾ ಮಕ್ಕಳಿಗೆ ಚಿತ್ರಕಲೆ ಮತ್ತು ರೇಖಾ ಚಿತ್ರ ಸ್ಪರ್ಧೆ ನಡೆಯಲಿದೆ ಎಂದು ತಿಳಿಸಿದರು.

ಜೂ.17ರಂದು ಗೃಹಿಣಿಯರಿಗಾಗಿ ಪರಿಸರ ಸ್ನೇಹಿ ಗೃಹೋಪಯೋಗಿ ಉತ್ಪನ್ನಗಳು ಹಾಗೂ ಉಪಕರಣಗಳ ಬಳಕೆ ಕುರಿತು ಕಾರ್ಯಾಗಾರ, ಜೂ.20 ಮತ್ತು 21ರಂದು ಪರಿಸರ ಸ್ನೇಹಿ ಎಕ್ಸ್‌ಪೋ, ಜೂ.21ರಂದು ಅಂತರರಾಷ್ಟ್ರೀಯ ಯೋಗ ದಿನಾಚರಣೆ, ಜೂ.25ರಂದು ಮೈಸೂರು ಮತ್ತು ಸುತ್ತಮುತ್ತಲಿನ ಪ್ರದೇಶದಲ್ಲಿ ಗಿಡ ನೆಡುವುದು, ಜೂ.28ರಂದು ಗ್ರೀನ್ ಟ್ರೆಷರ್ ಹಂಟ್ ಹಾಗೂ ಜೂ.30 ರಂದು 'ವಿಶ್ವ ಪರಿಸರ ಮಾಸಾಚರಣೆ' ಸಮಾರೋಪ ಸಮಾರಂಭ ನಡೆಯಲಿದೆ ಎಂದರು.

ಜೆಎಸ್‌ಎಸ್ ಸಂಸ್ಥೆಯ ಶ್ರೀಹರಿ ಮಾತನಾಡಿ, 5 ಕಿಲೋ ಮೀಟರ್ ದೂರದ 'ಗ್ರೀನ್ ಮೈಸೂರು ವಾಕ್‌ಥಾನ್'ನಲ್ಲಿ ಮೈಸೂರಿನ ವಿವಿಧ ಸಂಘ–ಸಂಸ್ಥೆಗಳಿಂದ ಸಾವಿರಾರು ಜನರು ಭಾಗವಹಿಸಲಿದ್ದಾರೆ. ವಾಕಥಾನ್ ಜೊತೆಗೆ ಶಾಲಾ–ಕಾಲೇಜು ವಿದ್ಯಾರ್ಥಿಗಳಿಗೆ ಗಿಡಗಳನ್ನು ವಿತರಣೆ ಮಾಡಲಿದ್ದು, ಈ ಕುರಿತ ಸಂಪೂರ್ಣ ಮಾಹಿತಿಯನ್ನು ಸದ್ಯದಲ್ಲಿಯೇ ನೀಡಲಾಗುವುದು ಎಂದರು.

ಅಭಿವೃದ್ಧಿ ಹೆಸರಿನಲ್ಲಿ ಹತ್ತಾರು ವರ್ಷಗಳಿಂದ ಬೆಳೆದು ನೆರಳಾಗಿರುವ ಮರಗಳನ್ನು ಕಡಿಯುವುದು ಸರಿಯಲ್ಲ. ಅಲ್ಲದೆ ಮರಗಳನ್ನು ಕಡಿದು ಮಾಡುವುದು ಅಭಿವೃದ್ಧಿಯೇ ಅಲ್ಲ. ಅಭಿವೃದ್ಧಿ ಪರಿಸರಕ್ಕೆ ಪೂರಕವಾಗಿರಬೇಕೇ ಹೊರತು ಮಾರಕವಾಗಿರಬಾರದು. ಈ ನಿಟ್ಟಿನಲ್ಲಿ ಮೈಸೂರಿನಲ್ಲಿ ಎಲ್ಲೇ ಮರಗಳನ್ನು ಕಡಿದರೂ ಖಂಡಿಸಲಾಗುವುದು ಎಂದರು. ಇದಕ್ಕೂ ಮುನ್ನ 'ವಿಶ್ವ ಪರಿಸರ ಮಾಸಾಚರಣೆ' ಪೋಸ್ಟರ್ ಬಿಡುಗಡೆ ಮಾಡಲಾಯಿತು.

ಇಂದು ಮೈಸೂರಿಗೆ ಸಿಎಂ ಸಿದ್ದರಾಮಯ್ಯ

ಮೈಸೂರು, ಮೇ 12(ಬಿಎಲ್‌ಯು)– ಎರಡು ದಿನಗಳ ಪ್ರವಾಸಕ್ಕಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ನಾಳೆ(ಬುಧವಾರ) ತವರು ಜಿಲ್ಲೆ ಮೈಸೂರಿಗೆ ಆಗಮಿಸಲಿದ್ದಾರೆ.



ನಾಳೆ ಸಂಜೆ 5 ಗಂಟೆಗೆ ಬೆಂಗಳೂರಿನ ಹೆಚ್‌ಎಎಲ್ ವಿಮಾನ ನಿಲ್ದಾಣದಿಂದ ವಿಶೇಷ ವಿಮಾನದಲ್ಲಿ ಹೊರಡುವ ಸಿದ್ದರಾಮಯ್ಯ ಅವರು 5.25 ಗಂಟೆಗೆ ಮೈಸೂರು ವಿಮಾನ ನಿಲ್ದಾಣಕ್ಕೆ ಆಗಮಿಸುವರು. ತರುವಾಯ ರಾತ್ರಿ 7 ಗಂಟೆ ಹಾಗೂ 8 ಗಂಟೆಗೆ ಖಾಸಗಿ ಕಾರ್ಯಕ್ರಮಗಳಲ್ಲಿ ಭಾಗವಹಿಸಿ, ನಾಳೆ ಮೈಸೂರಿನಲ್ಲೆ ವಾಸ್ತವ್ಯ ಹೂಡಲಿದ್ದಾರೆ. ನಾಡಿದ್ದು ಅಂದರೆ ಮೇ 14ರಂದು ಬೆಳಿಗ್ಗೆ 9 ಗಂಟೆಗೆ ಖಾಸಗಿ ಕಾರ್ಯಕ್ರಮದಲ್ಲಿ ಪಾಲ್ಗೊಂಡು, ನಂತರ ಜಿಲ್ಲಾ ಮಟ್ಟದ ಅಧಿಕಾರಿಗಳೊಂದಿಗೆ ಸಭೆ ನಡೆಸಲಿದ್ದಾರೆ. ನಂತರ 11.30 ಗಂಟೆಗೆ ಮೈಸೂರು ವಿಮಾನ ನಿಲ್ದಾಣದಿಂದ ವಿಶೇಷ ವಿಮಾನದಲ್ಲಿ ಬೆಂಗಳೂರಿಗೆ ತೆರಳಲಿದ್ದಾರೆ.

ಹೊನಲು ಬೆಳಕಿನ ಕ್ರಿಕೆಟ್ ಪಂದ್ಯಾವಳಿ ವಿಜೇತರು



ಮೈಸೂರಿನ ಶ್ರೀ ಸುಶಮೀಂದ್ರ ಸೇವಾ ಪ್ರತಿಷ್ಠಾನ ಆಯೋಜಿಸಿದ್ದ ದಶಮಾನೋತ್ಸವ ಅಂಗವಾಗಿ ಎರಡು ದಿನದ ಶ್ರೀಸುಶಮೀಂದ್ರ ಟ್ರೋಫಿ ಕ್ರಿಕೆಟ್ ಪಂದ್ಯದಲ್ಲಿ ಜಯಗಳಿಸಿದ ಐ.ಜಿ.ಕೃಷ್ಣಾಮಾಚಾರ್ ನೇತೃತ್ವದ ರಾಷ್ಟ್ರಕೂಟ ತಂಡಕ್ಕೆ ಕೃಷ್ಣರಾಜ ಕ್ಷೇತ್ರದ ಶಾಸಕ ಟಿ.ಎಸ್.ಶ್ರೀವತ್ಸ ಟ್ರೋಫಿ ವಿತರಿಸಿದರು. ಬ್ರಾಹ್ಮಣ ಮಹಾಸಭಾ ರಾಜ್ಯ ಸಂಘಟನಾ ಕಾರ್ಯದರ್ಶಿ ನಂ.ಶ್ರೀಕಂಠಕುಮಾರ್, ರಾಷ್ಟ್ರೀಯ ಕ್ರಿಕೆಟ್ ಮಹಿಳಾ ಆಟಗಾರ್ತಿ ಶುಭ ಸತೀಶ್, ಪತ್ರಕರ್ತ ರಾಜೇಶ್ ಬೋರೆ, ರಾಜ ಶ್ರೀನಿವಾಸಾಚಾರ್ ಇದ್ದರು.

ಉಚಿತ ಕಣ್ಣಿನ ತಪಾಸಣೆ, ಶಸ್ತ್ರಚಿಕಿತ್ಸಾ ಶಿಬಿರ

ಮೈಸೂರು: ಆರೋಗ್ಯ ಭಾರತಿ, ಮೈಸೂರು ಮತ್ತು ಮಣಿಪಾಲ್ ಆಸ್ಪತ್ರೆ, ಜಿಲ್ಲಾ ಅಂಧತ್ವ ನಿಯಂತ್ರಣ ಸಂಸ್ಥೆ, ಮೈಸೂರು ಜಿಲ್ಲಾ ಸಂಚಾರಿ ನೇತ್ರ ಚಿಕಿತ್ಸಾ ಘಟಕ ಮತ್ತು ಕೆ.ಆರ್.ಆಸ್ಪತ್ರೆ ಸಂಯುಕ್ತಾಶ್ರಯದಲ್ಲಿ ಮೇ 14ರ ಗುರುವಾರ ಬೆಳಗ್ಗೆ 10 ರಿಂದ ಮಧ್ಯಾಹ್ನ 1ರವರೆಗೆ #136, 2ನೇ ಮುಖ್ಯ ರಸ್ತೆ, 11ನೇ ಅಡ್ಡ ರಸ್ತೆ, ಜಯನಗರ ಇಲ್ಲಿ ಏರ್ಪಡಿಸಲಾಗಿದೆ. ಶಿಬಿರದಲ್ಲಿ ಕಣ್ಣಿನಪೊರೆ, ಹತ್ತಿರ ಮತ್ತು ದೂರದೃಷ್ಟಿ, ಗ್ಲೋಕೋಮಾ, ವಾರೆಕಣ್ಣು, ನೀರು ಸೋರುವಿಕೆ, ಕಣ್ಣಿನಲ್ಲಿ ಬಿರುಕು ಉಂಟಾಗುವುದು, ರಾತ್ರಿ ಕುರುಡುತನ, ಸಮಸ್ಯೆಗಳನ್ನು ಪರೀಕ್ಷಿಸಲಾಗುವುದು. ಮಣಿಪಾಲ್ ಆಸ್ಪತ್ರೆಯಲ್ಲಿ ಉಚಿತವಾಗಿ ಬಿಪಿ, ಶುಗರ್, ಇಸಿಜಿ ಟೆಸ್ಟ್ ಮಾಡುತ್ತಾರೆ. ಶಿಬಿರಾರ್ಥಿಗಳು ಆಧಾರ್ ಕಾರ್ಡ್, ಬಿಪಿಎಲ್ ಕಾರ್ಡ್ ಜೆರಾಕ್ಸ್‌ಗಳನ್ನು ತರತಕ್ಕದ್ದು. ಉಚಿತವಾಗಿ ಆಯುಷ್ಮಾನ್ ಕಾರ್ಡ್ ಮಾಡಿಕೊಡಲಾಗುವುದು. ವಿವರಗಳಿಗೆ ಮೊ. 9945270646, 9742634110 ಸಂಪರ್ಕಿಸಬಹುದು.

ಎಸಿಪಿ ಕೆ.ಸಿ.ಪ್ರಕಾಶ್‌ಗೆ ಅಭಿನಂದನೆ....



ಕೆ.ಆರ್. ವಿಭಾಗದ ನೂತನ ಎಸಿಪಿಯಾಗಿ ಅಧಿಕಾರ ವಹಿಸಿಕೊಂಡ ಕೆ.ಸಿ.ಪ್ರಕಾಶ್ ಅವರನ್ನು ಪೊಲೀಸ್ ಇಲಾಖೆಯ ಆರಾಧ್ಯ, ಲೋಕೇಶ್, ಯೋಗೇಶ್, ದಿ ಮೈಸೂರು ಕೋಆಪರೇಟಿವ್ ಬ್ಯಾಂಕ್ ನಿರ್ದೇಶಕ ಕೆ.ಗಿರೀಶ್ ಇತರರು ಅಭಿನಂದಿಸಿದರು.


ಜೋಯಾಲುಕ್ಕಾಸ್ ಪ್ರೈಡ್ ಪಾಲುದಾರಿಕೆ ಗುರುತಿಸುವಿಕೆ, ವಿನ್ಯಾಸ ಶ್ರೇಷ್ಠತೆಯಲ್ಲಿ ನಾವೀನ್ಯತೆ–2026



ಜೋಯಾಲುಕ್ಕಾಸ್ ಪ್ರೈಡ್ ಪಾಲುದಾರಿಕೆ ಗುರುತಿಸುವಿಕೆ ಮತ್ತು ವಿನ್ಯಾಸ ಶ್ರೇಷ್ಠತೆಯಲ್ಲಿ ನಾವೀನ್ಯತೆ–2026 ಸಮಾರಂಭವನ್ನು ಡಾ. ಜೋಯ್ ಆಲ್ಲುಕ್ಕಾಸ್ ಮತ್ತು ಶ್ರೀಮತಿ ಜೊಲ್ಲಿ ಜೋಯ್ ಆಲ್ಲುಕ್ಕಾಸ್ ಅವರು ಆಡಲಕ್ಸ್ ಕನ್ವೆನ್ಷನ್ ಮತ್ತು ಎಕ್ಸಿಬಿಷನ್ ಸೆಂಟರ್‌ನಲ್ಲಿ ಉದ್ಘಾಟಿಸಿದರು. ನ್ಯಾಷನಲ್ ಜೆಮ್ಸ್ ಮತ್ತು ಜ್ಯುವೆಲ್ಲರಿ ಕೌನ್ಸಿಲ್ ಆಫ್ ಇಂಡಿಯಾದ ಅಧ್ಯಕ್ಷ ಪ್ರಮೋದ್ ಅಗರ್‌ವಾಲ್, ದಿ ಆರ್ಟ್ ಜ್ಯೂವೆಲ್ಲರಿ ಮ್ಯಾಗಜೈನ್‌ನ ಎಂಡಿ ಮತ್ತು ಪ್ರಧಾನ ಸಂಪಾದಕ ಸುಮೇಶ್ ವಢೇರಾ, ಪಿಜಿಐ ಇಂಡಿಯಾದ ಎಂಡಿ ವೈಶಾಲಿ ಬ್ಯಾನರ್ಜಿ, ನಟಿ ಅಪರ್ಣಾ ಬಾಲಮುರಳಿ, ಜೋಯಾಲ್ಲುಕ್ಕಾಸ್ ಸಿಇಓ ಜಾನ್ ಪೌಲ್, ಜೋಯಾಲ್ಲುಕ್ಕಾಸ್ ಕಾರ್ಯಕಾರಿ ನಿರ್ದೇಶಕರಾದ ಥಾಮಸ್ ಮ್ಯಾಥ್ಯೂ ಮತ್ತು ಆಂಟೋನಿ ಜೋಸ್, ಜೋಯಾಲುಕ್ಕಾಸ್‌ನ ನಿರ್ದೇಶಕರಾದ ಸೋನಿಯಾ ಆಲ್ಲುಕ್ಕಾಸ್ ಮತ್ತು ಎಲ್ಲಾ ಜೋಯ್ ಆಲ್ಲುಕ್ಕಾಸ್ ಸಿಬ್ಬಂದಿ, ಇತರರು ಉಪಸ್ಥಿತರಿದ್ದರು.

ಇಂದು ಹಲವೆಡೆ ವಿದ್ಯುತ್ ವ್ಯತ್ಯಯ

ಮೈಸೂರು, ಮೇ 12–ವಿ.ವಿ ಮೊಹಲ್ಲಾ ವಿಭಾಗ ವ್ಯಾಪ್ತಿಯ ಇಲವಾಲ (ಕರಕನ ಹಳ್ಳಿ) ಹಾಗೂ ಎಂ.ಜಿ.ಕೊಪ್ಪಲು ವಿದ್ಯುತ್ ಮಾರ್ಗದಲ್ಲಿ ತುರ್ತು ಕಾರ್ಯನಿಮಿತ್ತ ಮೇ 13 ರ ಬೆಳಗ್ಗೆ 10 ಗಂಟೆಯಿಂದ ಸಂಜೆ 5 ಗಂಟೆಯವರೆಗೆ ಚಿಕ್ಕನಹಳ್ಳಿ, ಮೇಗಳಾಪುರ, ಕರಕನಹಳ್ಳಿ, ರಟ್ನಹಳ್ಳಿ, ಇಲವಾಲ, ಹೊಸ ಕಾಮನಕೊಪ್ಪಲು, ಈರಪ್ಪನ ಕೊಪ್ಪಲು, ಭದ್ರೇಗೌಡನಕೊಪ್ಪಲು, ಚಿಕ್ಕೇಗೌಡನ ಕೊಪ್ಪಲು, ಗುಂಗ್ರಾಲ್‌ಛತ್ರ, ಯಲಚನಹಳ್ಳಿ, ಯಾಚೇಗೌಡನಹಳ್ಳಿ, ದಡದ ಕಲ್ಲಹಳ್ಳಿ, ಹನುಮಂತಪುರ, ಸಾಗರಕಟ್ಟೆ, ರಾಮೇನಹಳ್ಳಿ, ಯಡಹಳ್ಳಿ, ಕಲ್ಲೂರು, ನಾಗನಹಳ್ಳಿ, ಆನಂದೂರು ಮತ್ತು ಸುತ್ತಮುತ್ತ ಹಾಗೂ ಅಭಿಷೇಕ್ ವೃತ್ತ, ಮಾದೇಗೌಡ ಸರ್ಕಲ್, ಹೊಂಡಾ ಶೋರೋಂ, ಕೃಷ್ಣ ಬೇಕರಿ, ಹೆಬ್ಬಾಳ್ ಛತ್ರ ವೃತ್ತ ಕನ್ವ ಮಾರ್ಟ್, ಹೆಬ್ಬಾಳ್ 1ನೇ ಹಂತ ಸುತ್ತಮುತ್ತ ವಿದ್ಯುತ್ ವ್ಯತ್ಯಯವಾಗಲಿದೆ.



ಸಶಸ್ತ್ರ ಮೀಸಲು ಪಡೆ ಡಿವೈಎಸ್ಪಿಗಳ ವರ್ಗಾವರ್ಗಿ

ಮೈಸೂರು, ಮೇ 12(ಎಸ್‌ಪಿಎನ್)– ಸಶಸ್ತ್ರ ಮೀಸಲು ಪಡೆಯಲ್ಲಿ ವಿವಿಧ ಜಿಲ್ಲೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ 17 ಮಂದಿ ಡಿವೈಎಸ್ಪಿ (ಸಶಸ್ತ್ರ)ಗಳನ್ನು ರಾಜ್ಯ ಸರ್ಕಾರ ವರ್ಗಾವಣೆ ಮಾಡಿದೆ.

ಮೈಸೂರು ನಗರ ಸಿಎಆರ್‌ನಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಜಿ.ಎನ್.ಕುಮಾರಸ್ವಾಮಿ ಅವರನ್ನು ಹಾಸನದ ಡಿಎಆರ್‌ಗೆ, ಹಾಸನ ಡಿಎಆರ್‌ನಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಟಿ.ಆರ್.ಪಾಲಾಕ್ಷ ಅವರನ್ನು ಬೆಂಗಳೂರು ನಗರದ ಡಿಎಆರ್(ಉತ್ತರ)ಗೆ, ಬೆಂಗಳೂರು ನಗರ ಸಿಎಆರ್(ಉತ್ತರ)ನಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಎಚ್.ಎಂ.ಹರೀಶ್ ಅವರನ್ನು ಮೈಸೂರು ನಗರ ಸಿಎಆರ್‌ಗೆ, ಮೈಸೂರು ನಗರ ಸಿಎಆರ್‌ನಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಎಚ್.ಪಿ.ಸತೀಶ್ ಅವರನ್ನು ಮಂಡ್ಯ ಡಿಎಆರ್‌ಗೆ, ಮಂಡ್ಯ ಡಿಎಆರ್‌ನಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಎಸ್.ರಾಚಯ್ಯ ಅವರನ್ನು ಮೈಸೂರು ಕೆಪಿಎಗೆ, ಮೈಸೂರು ಕೆಪಿಎನಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಕೆ.ಎಂ.ಸೋಮಶೇಖರ್ ಅವರನ್ನು ಮೈಸೂರು ನಗರ ಸಿಎಆರ್‌ಗೆ ವರ್ಗಾವಣೆ ಮಾಡಿ ಪೊಲೀಸ್ ಮಹಾನಿರ್ದೇಶಕರ ನಿರ್ದೇಶನದ ಮೇರೆಗೆ ಹಿರಿಯ ಪೊಲೀಸ್ ಅಧಿಕಾರಿ ಸೌಮೇಂದು ಮುಖರ್ಜಿ ಆದೇಶ ಹೊರಡಿಸಿದ್ದಾರೆ.

ನಾಳೆ ಉಚಿತ ಕ್ಯಾನ್ಸರ್ ತಪಾಸಣಾ ಶಿಬಿರ

ಮೈಸೂರು: ಲಕ್ಷ್ಮೀಪುರಂನ ಪ್ರೀತಿ ಕ್ಯಾನ್ಸರ್ ಸೆಂಟರ್‌ನಲ್ಲಿ ಮೇ 14ರಂದು ಬೆಳಗ್ಗೆ 10 ರಿಂದ ರಾತ್ರಿ 8 ಗಂಟೆಯವರೆಗೆ ಉಚಿತ ಕ್ಯಾನ್ಸರ್ ತಪಾಸಣಾ ಶಿಬಿರ ಹಮ್ಮಿಕೊಳ್ಳಲಾಗಿದೆ. ಮಾಹಿತಿಗೆ ದೂ. 0821–4259259 ಸಂಪರ್ಕಿಸಬಹುದು.

ನಿಧನ

ನಾಗಲಕ್ಷ್ಮೀ



ಮೈಸೂರು, ಮೇ 12– ನಗರದ ವಿದ್ಯಾರಣ್ಯಪುರಂ ನಿವಾಸಿ ನಾಗಲಕ್ಷ್ಮೀ(76) ಅವರು ಮಂಗಳವಾರ ಬೆಳಗ್ಗೆ ನಿಧನರಾದರು. ಇವರು ಪತಿ, ಪುತ್ರ, ಸೊಸೆ, ಮೊಮ್ಮಗಳು ಸೇರಿದಂತೆ ಅಪಾರ ಬಂಧು–ವರ್ಗ ಅಗಲಿದ್ದಾರೆ. ಚಾಮುಂಡಿಬೆಟ್ಟ ತಪ್ಪಲಿನ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನೆರವೇರಿತು ಎಂದು ಕುಟುಂಬ ವರ್ಗ ತಿಳಿಸಿದೆ.

ಆಲೂರ್ ಹೆಗ್ಡೆ



ಮೈಸೂರು ಬನ್ನಿಮಂಟಪದ ಹನುಮಂತನಗರ ನಿವಾಸಿ ಆಲೂರ್ ಹೆಗ್ಡೆ(72) ಅವರು ಮಂಗಳವಾರ ಮುಂಜಾನೆ ನಿಧನರಾದರು. ಇವರು ಪತ್ನಿ, ಪುತ್ರ, ಇಬ್ಬರು ಪುತ್ರಿಯರು, ಅಳಿಯಂದಿರು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು–ವರ್ಗ ಅಗಲಿದ್ದಾರೆ. ಸಂಜೆ ಬನ್ನಿಮಂಟಪದ ಜೋಡಿ ತೆಂಗಿನಮರ ಸ್ಮಶಾನದಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

13.5.2026 ಬುಧವಾರ, ಮಳೆ ನಕ್ಷತ್ರ: ಕೃತ್ತಿಕ 11.05.2026ರಿಂದ 24.05.2026ರವರೆಗೆ
ಪರಾಭವ ನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ವೈಶಾಖ ಮಾಸ, ಕೃಷ್ಣ ಪಕ್ಷ,
ತಿಥಿ: ಏಕಾದಶಿ, ನಕ್ಷತ್ರ: ಉತ್ತರಭಾದ್ರ, ರಾಹುಕಾಲ: ಮಧ್ಯಾಹ್ನ 12ರಿಂದ 1.30ರವರೆಗೆ

■ **ರಾಮ್‌ಸನ್ಸ್ ಕ್ರೀಡಾ ಕೌಶಲ್ಯ** : ಪಾರಂಪರಿಕ ಹಾಸು ಆಟಗಳ 11 ನೇ ದ್ವೈವಾರ್ಷಿಕ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್, ಬೆಳಗ್ಗೆ 10 ರಿಂದ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಬೆಳಗ್ಗೆ 6.30ರಿಂದ ದೇಹ–ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾಭ್ಯಾಸ ತರಗತಿ, ಬೆಳಗ್ಗೆ 9ರಿಂದ ಚರ್ಮ, ಬೆನ್ನುಮೂಳೆ ಮತ್ತು ಕೀಲು ನೋವು ಸಮಸ್ಯೆ, ಬೊಜ್ಜು, ಸಕ್ಕರೆ ಕಾಯಿಲೆ, ಬಿಪಿ, ಒತ್ತಡ, ಆತಂಕ, ಬಾಲನೆರೆ, ದೃಷ್ಟಿಮಾಂದ್ಯ, ತಲೆನೋವು, ಕೆಮ್ಮು, ಅಸ್ತಮಾ, ಪಿಸಿಓಡಿ, ಪುರುಷ ಹಾಗೂ ಸ್ತ್ರೀ ಬಂಜೆತನ, ಅರ್ಥರೈಟಿಸ್, ಸಂಧಿವಾತ, ಆಮವಾತ, ಗೌಟ್, ಕುತ್ತಿಗೆನೋವು ತಪಾಸಣೆ ಮತ್ತು ಚಿಕಿತ್ಸಾ ಶಿಬಿರ, ವೆರಿಕೋಸ್ ವೇನ್ಸ್ ಚಿಕಿತ್ಸಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿಪುರ ರಸ್ತೆ, ಆಲನಹಳ್ಳಿ.

■ **ಸೂತ್ರ ಆಯುರ್ಧಾಮ:** ವೇರಿಕೋಸ್ ವೇನ್ಸ್ ಉಚಿತ ತಪಾಸಣೆ ಮತ್ತು ಸಲಹಾ ಶಿಬಿರ, ಕಾಲಿನ ರಕ್ತನಾಳ ಊತ, ಕಾಲಿನ ನೋವು, ಉಬ್ಬರೆ, ಚರ್ಮದ ಬಣ್ಣ ಬದಲಾವಣೆ, ಕಾಲಿನಲ್ಲಿ ಜೋಮು ಹಿಡಿಯುವುದು, ವಾಸಿಯಾಗದ ಗಾಯಗಳ ತಪಾಸಣೆ ಮತ್ತು ಸಲಹಾ ಶಿಬಿರ, ಸ್ಥಳ: ಸೂತ್ರ ಆಯುರ್ಧಾಮ, ಜೆಎಲ್‌ಬಿ ರಸ್ತೆ, ಚಾಮುಂಡಿಪುರಂ. ಬೆಳಗ್ಗೆ 10 ರಿಂದ.

■ **ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮುದ್ದುರಾಮ ಬಳಗ** : ಬೆಳಗ್ಗೆ 10.15ಕ್ಕೆ ಕೆಸಿಎಸ್ ಕಾವ್ಯ ಕುತೂಹಲ ವಿಚಾರ ಸಂಕಿರಣ, ಉದ್ಘಾಟನೆ : ನಿವೃತ್ತ ಪ್ರಾಧ್ಯಾಪಕ ಡಾ. ಟಿ.ವಿ. ವೆಂಕಟಾಚಲ ಶಾಸ್ತ್ರಿ, ಮುಖ್ಯ ಅತಿಥಿಗಳು : ಎಚ್‌ಎಂಟಿ ನಿವೃತ್ತ ಅಧ್ಯಕ್ಷ ಎನ್. ರಾಮಾನುಜ, ಅಧ್ಯಕ್ಷತೆ : ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ನಿರ್ದೇಶಕರಾದ ಡಾ. ಎನ್.ಕೆ. ಲೋಲಾಕ್ಷಿ, ಆಶಯ ನುಡಿ : ಮುದ್ದುರಾಮ ಪ್ರತಿಷ್ಠಾನ ಉಪಾಧ್ಯಕ್ಷ ಡಾ. ನೀಲಗಿರಿ ತಳವಾರ; ಸಂಜೆ 4.30ಕ್ಕೆ ಸಮಾರೋಪ ಸಮಾರಂಭ, ಉಪಸ್ಥಿತರು : ಸಾಹಿತಿ, ವಾಗ್ಮಿ ಪ್ರೊ. ಎಂ. ಕೃಷ್ಣೇಗೌಡ, ಸ್ಥಳ: ಬಿ.ಎಂ.ಶ್ರೀ ಸಭಾಂಗಣ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ.

■ **ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಕನ್ನಡ ಓದುಗರ ಒಕ್ಕೂಟ, ಸಂಸ್ಕೃತಿ ಪ್ರಕಾಶನ** : ಪ್ರವೀಣ್ ಬಿ.ಎಂ. ಅವರ ಮಾತಿಲ್ಲ ಗುರುತು ಇದೆ ಪುಸ್ತಕ ಲೋಕಾರ್ಪಣೆ ಸಮಾರಂಭ, ಕೃತಿ ಬಿಡುಗಡೆ : ಸಾಹಿತಿ ಪ್ರೊ. ಕಾಳೇಗೌಡ ನಾಗವಾರ, ಅಧ್ಯಕ್ಷತೆ : ವಿಶ್ರಾಂತ ಕನ್ನಡ ಪ್ರಾಧ್ಯಾಪಕ ರಾಗೌ, ಕೃತಿ ಕುರಿತು : ಕರಾ ಮುವಿವಿ ಸಹ ಪ್ರಾಧ್ಯಾಪಕ ಡಾ. ಪಿ. ಮಣಿ, ಮುಖ್ಯ ಅತಿಥಿಗಳು : ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಮೈಸೂರು ಬುಕ್ ಕ್ಲಬ್ಸ್ ಚಾರಿಟಬಲ್ ಟ್ರಸ್ಟ್ ಅಧ್ಯಕ್ಷೆ ಶ್ರೀಮತಿ ಶುಭ ಸಂಜಯ್ ಅರಸ್, ಸ್ಥಳ: ವನರಂಗ ರಂಗಾಯಣ, ಕಲಾಮಂದಿರ, ಸಂಜೆ 6ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಗೀತಾರಾಧನ, 6.30 ಚಿಂತನ, 6.35 ಮತ್ತು ಸಂಜೆ 6.10 ವಚನ ಬಾನುಲಿ ಸರಣಿ, ಪ್ರಸ್ತುತಿ–ಪ್ರೊ. ಓ.ಎಲ್.ನಾಗಭೂಷಣ ಸ್ವಾಮಿ, 6.40 ಪದಸಂಸ್ಕೃತಿ –ಕನ್ನಡ ಪದಗಳ ಬಳಕೆ ಕಲಿಕೆಯ ವಿಶಿಷ್ಟ ಬಾನುಲಿ ಸರಣಿ, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 7.45 ಕನ್ನಡ ಚಿತ್ರಗೀತೆಗಳು, 8.30 ಮತ್ತು ಸಂಜೆ 5.30– ಚೂಟಿ ಚೂಟಿ ಚುಟುಕ್ ಗುಳುಂ ಗುಟುಕ್ –ಶಿಶು ಗೀತೆಗಳ ಕಾರ್ಯಕ್ರಮ, 8.35 ಚಿತ್ರಗೀತೆಗಳು, 10.00 ಹಿಂದೂ ಸ್ಥಾನಿ ಶಾಸ್ತ್ರೀಯ ಸಂಗೀತ – ಬಿಸ್ಮಿಲ್ಲಾ ಖಾನ್ –ಶಹನಾಯಿ ವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ಹಾಗೂ ಪತ್ರೋತ್ತರ

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ–ಸುಧಾ ಮಂಜುನಾಥ್, 12.45 ಜನಪದ ಸಂಗೀತ, 1.00 ಪ್ರಗತಿ ಪಥ – ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಕುರಿತು ಸರಣಿ, 1.20 ಭಾವಗೀತೆಗಳು– ಡಾ. ಸ್ನೇಹಶ್ರೀ, 2.40 ಚಿತ್ರಗೀತೆಗಳು, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ, ಮೈಸೂರು ಎ.ಚಂದನ್ ಕುಮಾರ್ – ಕೊಳಲು ವಾದನ, 4.00 ಮಹಿಳಾರಂಗ– ಸಾಧನಾ ಶಿಖರ, 4.30 ಹಿಂದಿ ಚಿತ್ರಗೀತೆಗಳು, 4.45 ಹಿಂದಿ ಪಾಠ, 5.00 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.50 ಕೃಷಿರಂಗ, ರೇಷ್ಮೆರಂಗ– ರೇಷ್ಮೆ ತಂತ್ರಜ್ಞಾನಗಳ ಕುರಿತ ಬಾನುಲಿ ಸರಣಿ – ಭಾರತೀಯ ರೇಷ್ಮೆ ಉದ್ಯಮದ ಅಭಿವೃದ್ಧಿಯಲ್ಲಿ ದ್ವಿತಳಿ ರೇಷ್ಮೆ ಕೃಷಿಯ ಪಾತ್ರ ಈ ಕುರಿತು ಮೈಸೂರಿನ ಕೇಂದ್ರೀಯ ರೇಷ್ಮೆ ಸಂಶೋಧನೆ ಹಾಗೂ ತರಬೇತಿ ಸಂಸ್ಥೆಯ ಹಿರಿಯ ವಿಜ್ಞಾನಿ ಡಾ. ದಯಾನಂದ ಅವರೊಂದಿಗೆ ಸಂದರ್ಶನ. ಸಂದರ್ಶಕರು–ಎನ್. ಕೇಶವ ಮೂರ್ತಿ, 7.45 ಕನ್ನಡ ಚಿತ್ರಗೀತೆಗಳು, 8.00 ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ, ಹಿರಣ್ಮಯಿ .ಎಸ್ – ಹಾಡುಗಾರಿಕೆ, 8.30 ಹಿಂದಿ ಚಿತ್ರಗೀತೆಗಳು, 9.30 ಕ್ರೀಡಾಲೋಕ, 10.00 ಜನಪದ ಸಂಗೀತ, 10.30 ಸವಿನೆನಪು

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮೇ 13 ಬುಧವಾರ 2026

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 47 | ಸಂಚಿಕೆ: 27 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ದೇಶದ ವಿವಿಧೆಡೆ ಪ್ರಶ್ನೆ ಪತ್ರಿಕೆ ಸೋರಿಕೆ ಹಿನ್ನೆಲೆ

ಮೇ 3ರಂದು ನಡೆದಿದ್ದ ನೀಟ್ ರದ್ದು

● ಸಾಮಾಜಿಕ ಮಾಧ್ಯಮಗಳಲ್ಲಿ ಎನ್‌ಟಿಎ ಅಧಿಕೃತ ಘೋಷಣೆ
● ಪ್ರಕರಣ ಸಂಬಂಧ ಸಿಬಿಐ ತನಿಖೆಗೆ ಆದೇಶಿಸಿದ ಕೇಂದ್ರ

ಬೆಂಗಳೂರು, ಮೇ 12(ಕೆಎಂಶಿ)– ವೈದ್ಯಕೀಯ ಕೋರ್ಸ್‌ಗಳ ಪ್ರವೇಶಕ್ಕೆ ಮೇ 3ರಂದು ನಡೆದ ನೀಟ್ ಪ್ರಶ್ನೆ ಪತ್ರಿಕೆ ಸೋರಿಕೆ ಹಿನ್ನೆಲೆಯಲ್ಲಿ ಪರೀಕ್ಷೆಯನ್ನು ರದ್ದುಪಡಿಸಲಾಗಿದೆ.

ಈ ಸಂಬಂಧ ರಾಷ್ಟ್ರೀಯ ಪರೀಕ್ಷಾ ಸಂಸ್ಥೆ (ಎನ್‌ಟಿಎ) ಸಾಮಾಜಿಕ ಮಾಧ್ಯಮಗಳಲ್ಲಿ ಪರೀಕ್ಷೆ ರದ್ದಾಗಿರುವುದಾಗಿ ಪ್ರಕಟಿಸಿದೆ.

ಕರ್ನಾಟಕದಲ್ಲಿನ 15,000 ವೈದ್ಯಕೀಯ ಸೀಟುಗಳಿಗಾಗಿ 1.50 ಲಕ್ಷ ವಿದ್ಯಾರ್ಥಿಗಳು ಮೇ 3ರಂದು ಪರೀಕ್ಷೆ ಬರೆದಿದ್ದರು.

ರಾಜಾಸ್ತಾನ ಮತ್ತು ಕೇರಳಂ ಸೇರಿದಂತೆ ದೇಶದ ಕೆಲವು ಭಾಗಗಳಲ್ಲಿ ಪ್ರಶ್ನೆ



ಪತ್ರಿಕೆ ಸೋರಿಕೆ ಆಗಿದ್ದರಿಂದ ನಮ್ಮ ರಾಜ್ಯದ ವಿದ್ಯಾರ್ಥಿಗಳೂ ಮತ್ತೊಮ್ಮೆ ಪರೀಕ್ಷೆ ಬರೆಯುವಂತಾಗಿದೆ.

ಪ್ರಶ್ನೆ ಪತ್ರಿಕೆ ಸೋರಿಕೆಯನ್ನು ಗಂಭೀರವಾಗಿ ತೆಗೆದುಕೊಂಡಿರುವ ಕೇಂದ್ರ ಸರ್ಕಾರ ಸಿಬಿಐ ತನಿಖೆಗೆ ಆದೇಶಿಸಿರುವುದಲ್ಲದೆ, ಎನ್‌ಟಿಎಯಿಂದ ವಿವರಣೆ ಕೇಳಿದೆ.

ಪ್ರಶ್ನೆ ಪತ್ರಿಕೆ ಸೋರಿಕೆ ಆರೋಪಕ್ಕೆ ಸಂಬಂಧಿಸಿದಂತೆ ಕೇಂದ್ರ ತನಿಖಾ ಸಂಸ್ಥೆಗಳ ಪ್ರಾಥಮಿಕ ವರದಿ ಆಧಾರದಲ್ಲಿ ಪಾರದರ್ಶಕತೆ ಕಾಯ್ದುಕೊಳ್ಳಲು ನೀಟ್–ಯುಜಿ ಪರೀಕ್ಷೆ ರದ್ದುಗೊಳಿಸಲು ನಿರ್ಧರಿಸಲಾಯಿತು ಎಂದು ಎನ್‌ಟಿಎ ಟ್ವೀಟ್ ಮೂಲಕ ತಿಳಿಸಿದೆ.

ನೀಟ್ ಮರುಪರೀಕ್ಷೆ ದಿನಾಂಕವನ್ನು ಶೀಘ್ರದಲ್ಲೇ ಪ್ರಕಟಿಸಲಾಗುವುದು, ಪ್ರಕರಣವನ್ನು ಕೇಂದ್ರ ಸರ್ಕಾರ ಸಿಬಿಐಗೆ ವಹಿಸಿರುವುದರಿಂದ ಈ ಸಂಬಂಧದ ವಿಚಾರಣೆಗೆ ಬೇಕಾದ ಸಂಪೂರ್ಣ ■6ನೇ ಪುಟಕ್ಕೆ

ಮರುನೋಂದಣಿ ಅಗತ್ಯವಿಲ್ಲ: ಹೊಸ ಪ್ರವೇಶ ಪತ್ರ; ಎಕ್ಸಾಂ ಫೀಸ್ ವಾಪಸ್!

ನವದೆಹಲಿ, ಮೇ 12– ನೀವು ನೀಟ್ ಪರೀಕ್ಷೆ ಬರೆದಿದ್ದರೆ ಮರುನೋಂದಣಿ ಅಗತ್ಯವಿಲ್ಲ. ಹೊಸ ಪ್ರವೇಶ ಪತ್ರ ಕೊಡುತ್ತಾರೆ. ಜೊತೆಗೆ ಈಗಾಗಲೇ ನಿಮ್ಮ ಪರೀಕ್ಷಾ ಶುಲ್ಕವನ್ನು ಮರುಪಾವತಿ ಮಾಡಲಾಗಿದೆ ಎಂದು ರಾಷ್ಟ್ರೀಯ ಪರೀಕ್ಷಾ ಏಜೆನ್ಸಿಯ ಮಹಾನಿರ್ದೇಶಕ ಅಭಿಷೇಕ್ ಸಿಂಗ್ ತಿಳಿಸಿದ್ದಾರೆ.



ಮುಂದಿನ ಮೂರು ವಾರಗಳಲ್ಲಿ ಮರು ಪರೀಕ್ಷೆ ನಡೆಯಲಿದೆ. ವಿದ್ಯಾರ್ಥಿಗಳು ಹೊಸದಾಗಿ ನೋಂದಣಿ ಮಾಡಿಕೊಳ್ಳಬೇಕಿಲ್ಲ. ಮತ್ತೆ ಪರೀಕ್ಷಾ ಶುಲ್ಕ ಕಟ್ಟಿಸಿಕೊಳ್ಳಲ್ಲ. ಈಗಾಗಲೇ ವಿದ್ಯಾರ್ಥಿಗಳಿಗೆ ಪರೀಕ್ಷಾ ಶುಲ್ಕವನ್ನು ಮರುಪಾವತಿ ಮಾಡಲಾಗಿದೆ. ಶೀಘ್ರದಲ್ಲೇ ಹೊಸ ದಿನಾಂಕ ಪ್ರಕಟಿಸುವುದಾಗಿ ಹೇಳಿದ್ದಾರೆ. ಇನ್ನು, ಪ್ರಶ್ನೆಪತ್ರಿಕೆ ಸೋರಿಕೆ ಹಿಂದೆ ಓರ್ವ ಡಾಕ್ಟರ್, ಎಂಬಿಬಿಎಸ್ ಸ್ಟೂಡೆಂಟ್ ಹಾಗೂ ಸಿಕಾರ್‌ನ ಪಿಜಿ ಕೈವಾಡ ಇದೆ. ಮಹಾರಾಷ್ಟ್ರದ ನಾಸಿಕ್‌ನಲ್ಲಿ ಪೇಪರ್ ಲೀಕ್ ಆಗಿದ್ದು, ಬಳಿಕ ನಾಸಿಕ್‌ನಿಂದ ಹರ್ಯಾಣದ ಗುರುಗ್ರಾಮಕ್ಕೆ, ಅಲ್ಲಿಂದ ರಾಜಸ್ಥಾನದ ಜೈಪುರ, ಜಾಮ್ ವಾರಾಮ್‌ಗಢ, ಸಿಕಾರ್‌ಕ್ಕೆ ರವಾನೆಯಾಗಿದೆ. ರಾಜಸ್ಥಾನದ ಸಿಕಾರ್‌ನಿಂದ ದೇಶದ ಹಲವೆಡೆಗೆ ಪ್ರಶ್ನೆ ಪತ್ರಿಕೆ ಹಂಚಿಕೆಯಾಗಿದೆ. ಸಿಕಾರ್‌ನಿಂದ ಜಮ್ಮು & ಕಾಶ್ಮೀರ, ಬಿಹಾರ, ಕೇರಳಂ, ಉತ್ತರಾಖಂಡ್‌ಗೆ ಹಾಗೂ ಸಿಕಾರ್‌ನಿಂದ ಕೋಚಿಂಗ್, ಕೌನ್ಸಿಲಿಂಗ್, ವಿದ್ಯಾರ್ಥಿ ವಾಟ್ಸಪ್ ಗುಂಪುಗಳಿಗೆ ಹಂಚಿಕೆಯಾಗಿದೆ. ಒಂದು ಪ್ರಶ್ನೆಪತ್ರಿಕೆಗೆ 5,000 ರೂ.ಯಿಂದ 28 ಲಕ್ಷ ರೂ.ವರೆಗೆ ಪೇಪರ್ ಡೀಲ್ ಆಗಿದೆ ಎಂದು ತಿಳಿದುಬಂದಿದೆ. ಪರೀಕ್ಷಾ ಅಕ್ರಮ ತಡೆಗೆ ವಿಶಿಷ್ಟವಾದ, ಪತ್ತೆ ಹಚ್ಚಬಹುದಾದ ವಾಟರ್‌ಮಾರ್ಕ್ ಗುರುತಿಸುವಿಕೆಗಳನ್ನು ಹೊಂದಿರುವ ■6ನೇ ಪುಟಕ್ಕೆ

ಯುವ ಜನತೆಗೆ ಕ್ರೂರ ದ್ರೋಹ

ಬೆಂಗಳೂರು, ಮೇ 12– ದೇಶದಾದ್ಯಂತ 22 ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳು ಬರೆದಿದ್ದ 'ನೀಟ್–ಯುಜಿ 2026' ಪರೀಕ್ಷೆಯನ್ನು ರದ್ದುಗೊಳಿಸಿರುವ ಕೇಂದ್ರ ಸರ್ಕಾರದ ನಿರ್ಧಾರವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತೀವ್ರವಾಗಿ ಖಂಡಿಸಿದ್ದಾರೆ. ಇದೊಂದು ಆಡಳಿತಾತ್ಮಕ ವೈಫಲ್ಯ ಮಾತ್ರವಲ್ಲ, ದೇಶದ ಯುವ ಜನತೆಗೆ ಬಗೆದ ಕ್ರೂರ ದ್ರೋಹ ಎಂದಿದ್ದಾರೆ. ಈ ಕುರಿತು ಸುದೀರ್ಘವಾಗಿ ಎಕ್ಸ್ ಖಾತೆಯಲ್ಲಿ ಪೋಸ್ಟ್ ಹಂಚಿಕೊಂಡಿರುವ ಅವರು, ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದ್ದಾರೆ.



ಕರ್ನಾಟಕದ ಒಂದು ಲಕ್ಷಕ್ಕೂ ಅಧಿಕ ವಿದ್ಯಾರ್ಥಿಗಳು ಸೇರಿದಂತೆ ದೇಶದ ಲಕ್ಷಾಂತರ ವಿದ್ಯಾರ್ಥಿಗಳು ತಿಂಗಳುಗಟ್ಟಲೆ ಶ್ರಮಪಟ್ಟು ಈ ಪರೀಕ್ಷೆ ಬರೆದಿದ್ದರು. ಪೋಷಕರು ತಮ್ಮ ಮಕ್ಕಳ ಭವಿಷ್ಯಕ್ಕಾಗಿ ಕೋಚಿಂಗ್, ಪ್ರಯಾಣ ಸೇರಿದಂತೆ ಸಾಕಷ್ಟು ಖರ್ಚುಗಳನ್ನು ಮಾಡಿದ್ದರು. ಆದರೆ ಕೇಂದ್ರದ ಒಂದು ನಿರ್ಧಾರ ಇಡೀ ವಿದ್ಯಾರ್ಥಿ ಸಮುದಾಯವನ್ನು ಅನಿಶ್ಚಿತತೆ ಮತ್ತು ಸಂಕಷ್ಟಕ್ಕೆ ■6ನೇ ಪುಟಕ್ಕೆ

ಕೆಪಿಎಸ್‌ಸಿ ಹಾಳಾಗೋಕೆ ಕಾಂಗ್ರೆಸ್ ಕಾರಣ: ಇವರ ಅವಧಿಯಲ್ಲಿ ಎಷ್ಟು ಬಾರಿ ಪೇಪರ್ ಲೀಕ್ ಆಗಿದೆ?

ಬೆಂಗಳೂರು, ಮೇ 12– ಕೆಪಿಎಸ್‌ಸಿ ಹಾಳಾಗೋಕೆ ಕಾಂಗ್ರೆಸ್ ಕಾರಣ. ಇವರ ಅವಧಿಯಲ್ಲಿ ಎಷ್ಟು ಬಾರಿ ಪೇಪರ್ ಲೀಕ್ ಆಗಿದೆ ಎಂದು ಕೇಂದ್ರ ಸಚಿವ ಹೆಚ್‌ಡಿ ಕುಮಾರಸ್ವಾಮಿ ಕಿಡಿಕಾರಿದ್ದಾರೆ.



ನೀಟ್ ಮರು ಪರೀಕ್ಷೆ ವಿಚಾರವಾಗಿ ವಿಪಕ್ಷಗಳ ಟೀಕೆ ವಿಚಾರಕ್ಕೆ ಪ್ರತಿಕ್ರಿಯೆ ನೀಡಿದ ಅವರು, ನಮ್ಮ ರಾಜ್ಯದಲ್ಲಿ ಎಷ್ಟು ಬಾರಿ ಪರೀಕ್ಷೆ ಮುಂದೆ ಹಾಕಿದ್ದೀರಾ. ಕಾಂಗ್ರೆಸ್ ಕಾಲದಲ್ಲಿ ಎಷ್ಟು ಅನಾಹುತ ಆಗಿಲ್ಲ. ನಮ್ಮ ರಾಜ್ಯದಲ್ಲಿ ಕೆಪಿಎಸ್‌ಸಿ ಸಂಸ್ಥೆಯನ್ನು ಸರಿಪಡಿಸಲು ಆಗಲಿಲ್ಲ. ಕೆಪಿಎಸ್‌ಸಿ ಬಗ್ಗೆ ಜನ ಯಾವ ರೀತಿ ಮಾತಾಡ್ತಾರೆ. ಕಾಂಗ್ರೆಸ್‌ನಿಂದಲೇ ಕೆಪಿಎಸ್‌ಸಿ ಹಾಳಾಗೋಕೆ ಪ್ರಾರಂಭ ಆಗಿದ್ದು. ಸಿಎಂ ಅವರು ಎಲ್ಲಾ ತೊಳೆಯುತ್ತೇವೆ ಅಂದರು ಯಾವ ರೀತಿ ತೊಳೆದ್ರು. ಪಬ್ಲಿಕ್‌ನಲ್ಲಿ ಪೋಸ್ಟ್‌ಗೆ ಹಣ ನಿಗದಿ ಮಾಡಿ ಬೀದಿ ಬೀದಿಯಲ್ಲಿ ಚರ್ಚೆ ಆಯ್ತು ■6ನೇ ಪುಟಕ್ಕೆ

ನೀಟ್ ಪ್ರಶ್ನೆ ಪತ್ರಿಕೆ ಸೋರಿಕೆ ದೊಡ್ಡ ಅಪಮಾನ

ಈ ಬಗ್ಗೆ ಬಿಜೆಪಿ ಸಂಸದರು, ಸಚಿವರು ಮಾತನಾಡಲಿ

ಬೆಂಗಳೂರು, ಮೇ 12– ಪ್ರಶ್ನೆ ಪತ್ರಿಕೆ ಸೋರಿಕೆ ಹಿನ್ನಲೆಯಲ್ಲಿ ನೀಟ್ ಪರೀಕ್ಷೆ ರದ್ದಾಗಿರುವುದು ದೊಡ್ಡ ಅಪಮಾನ. ಇದರ ಬಗ್ಗೆ ಸಂಸದರು ಹಾಗೂ ಕೇಂದ್ರ ಸಚಿವರು ಮಾತನಾಡಬೇಕು ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಆಗ್ರಹಿಸಿದ್ದಾರೆ.

ಮಂಗಳವಾರ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಪ್ರಶ್ನೆ ಪತ್ರಿಕೆ ಸೋರಿಕೆಯಿಂದ ನೀಟ್ ಪರೀಕ್ಷೆ ರದ್ದುಗೊಳಿಸಿರುವುದು ನಮ್ಮೆಲ್ಲರಿಗೂ ದೊಡ್ಡ ಅವಮಾನ. ಮಕ್ಕಳು ಜೀವನದಲ್ಲಿ ಏನಾದರೂ ಆಗಬೇಕು ಎಂಬ ಕನಸು ಕಟ್ಟಿಕೊಂಡು ಕಷ್ಟಪಟ್ಟು ಓದಿರುತ್ತಾರೆ. ಪ್ರಶ್ನೆ ಪತ್ರಿಕೆ ಸೋರಿಕೆಯಿಂದ ಅವರಿಗೆ ತುಂಬಾ ತೊಂದರೆಯಾಗುತ್ತದೆ. ಇಂತಹ ಪ್ರಕರಣಗಳು ನಂಬಿಕೆಯನ್ನೇ ಹಾಳು ಮಾಡುತ್ತವೆ ಎಂದರು. ಈ ಹಿಂದೆ ಪಿಎಸ್‌ಐ ಹಗರಣ ಸೇರಿದಂತೆ ಅನೇಕ ಪ್ರಕರಣಗಳನ್ನು ನೋಡಿದ್ದೇವೆ. ಇದಕ್ಕೆ ಬಿಜೆಪಿ ಸಂಸದರು ಉತ್ತರ ನೀಡಬೇಕು. ಅಶ್ವತ್ ನಾರಾಯಣ ಅವರ ಹೇಳಿಕೆ ನೋಡಿದೆ. ■6ನೇ ಪುಟಕ್ಕೆ



ಅಧಿಕಾರ ಹಸ್ತಾಂತರ ಗೊಂದಲ

ಎರಡ್ಮೂರು ದಿನದಲ್ಲಿ ರಾಹುಲ್ ಗಾಂಧಿ ಜೊತೆ ಚರ್ಚೆ

● ಡಿ.ಕೆ.ಶಿವಕುಮಾರ್‌ಗೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಭರವಸೆ ● ಕೇರಳಂ ನಾಯಕನ ಆಯ್ಕೆ ಇಂದು ನಿರ್ಧಾರ

ಬೆಂಗಳೂರು, ಮೇ 12(ಕೆಎಂಶಿ)– ಕರ್ನಾಟಕ ಕಾಂಗ್ರೆಸ್‌ನಲ್ಲಿನ ಅಧಿಕಾರ ಹಸ್ತಾಂತರ ಗೊಂದಲ ನಿವಾರಿಸಲು ಎರಡು–ಮೂರು ದಿನದಲ್ಲಿ ರಾಹುಲ್ ಗಾಂಧಿ ಜೊತೆ ಚರ್ಚೆ ನಡೆಸುವುದಾಗಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ತಿಳಿಸಿದ್ದಾರೆ.



ಎರಡು ದಿನಗಳ ರಾಜ್ಯ ಪ್ರವಾಸದಲ್ಲಿದ್ದ ಖರ್ಗೆ ಅವರು ಮಂಗಳವಾರ ದೆಹಲಿಗೆ ತೆರಳುವುದಕ್ಕೂ ಮುನ್ನ ಡಿಸಿಎಂ ಡಿ.ಕೆ.ಶಿವಕುಮಾರ್ ಅವರನ್ನು ಭೇಟಿ ಮಾಡಿದ ವೇಳೆ ಈ ಭರವಸೆ ನೀಡಿದ್ದಾರೆ. ■6ನೇ ಪುಟಕ್ಕೆ

ಕ್ಯಾಬಿನೆಟ್‌ನಲ್ಲಿ ಕನಿಷ್ಠ ಐದು ಪರಿಷತ್ ಸದಸ್ಯರಿಗೆ ಅವಕಾಶ ನೀಡಿ

ರಣದೀಪ್ ಸುರ್ಜೇವಾಲಾಗೆ ಎಂಎಲ್‌ಸಿಗಳಿಂದ ಮನವಿ

ನವದೆಹಲಿ, ಮೇ 12– ಪಂಚ ರಾಜ್ಯಗಳ ಚುನಾವಣೆ ಬಳಿಕ ರಾಜ್ಯ ರಾಜಕೀಯದಲ್ಲಿ ಮಹತ್ವದ ಬೆಳವಣಿಗೆಗಳಾಗುತ್ತಿವೆ. ಹಿರಿಯ ಶಾಸಕರು ಸಚಿವ ಸ್ಥಾನಕ್ಕಾಗಿ ಲಾಬಿ ಮಾಡಿದ ಬೆನ್ನಲ್ಲೇ ಈಗ ಪರಿಷತ್ ಸದಸ್ಯರು ಮಂತ್ರಿಗಿರಿ ಗಿಟ್ಟಿಸಿಕೊಳ್ಳಲು ದೆಹಲಿಯಲ್ಲಿ ಪ್ರಯತ್ನ ಆರಂಭಿಸಿದ್ದಾರೆ.

ಪರಿಷತ್ ಸದಸ್ಯರಾದ ಪುಟ್ಟಣ್ಣ, ಮಧು ಜಿ ಮಾದೇಗೌಡ, ಬಸಣ್ಣಗೌಡ ಬಾದರ್ಲಿ, ಚಂದ್ರಶೇಖರ್ ಪಾಟೀಲ್, ಡಿ.ಟಿ ಶ್ರೀನಿವಾಸ್ ದೆಹಲಿಯಲ್ಲಿ ಉಸ್ತುವಾರಿ ರಣದೀಪ್ ಸುರ್ಜೇವಾಲಾ ಭೇಟಿಯಾಗಿ ಈ ಬಗ್ಗೆ ಮಾತುಕತೆ ನಡೆಸಿದ್ದಾರೆ. ಶೀಘ್ರವಾಗಿ ಸಚಿವ ಸಂಪುಟ ಪುನರ್ ರಚನೆ ಮಾಡಬೇಕು, ಹಿರಿಯ ಶಾಸಕರಿಗೆ ಆದ್ಯತೆ ನೀಡುವಂತೆ ಪರಿಷತ್ ಸದಸ್ಯರಿಗೂ ಆದ್ಯತೆ ನೀಡಬೇಕು. ಕನಿಷ್ಠ ಐದು ■6ನೇ ಪುಟಕ್ಕೆ

ಸಾರಿಗೆ ನೌಕರರ ವೇತನ ಶೇ.12.50 ಹೆಚ್ಚಳ; ಮೇ 20 ರಂದು ಮುಷ್ಕರ!

ಬೆಂಗಳೂರು, ಮೇ 12– ಸಾರಿಗೆ ನೌಕರರಿಗೆ ರಾಜ್ಯ ಸರ್ಕಾರ ಶೇ.12.50ರಷ್ಟು ವೇತನ ಪರಿಷ್ಕರಿಸಿದ್ದು, ಹೊಸ ವೇತನವು ಜು.1ರಿಂದ ಜಾರಿಗೆ ಸರ್ಕಾರ ಆದೇಶ ಹೊರಡಿಸಿದೆ.



2025 ಮಾರ್ಚ್ 31 ರ ಮೂಲ ವೇತನದ ಮೇಲೆ 12.5% ನಷ್ಟು ವೇತನ ಹೆಚ್ಚಳ ಮಾಡಲಾಗಿದೆ. ಸಾರಿಗೆ ನೌಕರರು ಹಲವು ವರ್ಷಗಳಿಂದ ವೇತನ ಪರಿಷ್ಕರಣೆಗೆ ಬೇಡಿಕೆ ಇಟ್ಟಿದ್ದರು. ಈಗ ಸರ್ಕಾರ ನೌಕರರಿಗೆ ಸಿಹಿ ಸುದ್ದಿ ಕೊಟ್ಟಿದೆ.

ಶೇ.25 ರಷ್ಟು ವೇತನ ಪರಿಷ್ಕರಣೆಗೆ ಸಾರಿಗೆ ಸಂಘಟನೆಗಳು ಒತ್ತಾಯಿಸಿದ್ದವು. ವೇತನ ಪರಿಷ್ಕರಣೆ ಮಾಡದಿದ್ದರೆ ಮುಷ್ಕರ ಮಾಡಲು ನಿರ್ಧರಿಸಿದ್ದವು. ಸದ್ಯ ಸಾರಿಗೆ ಇಲಾಖೆ ಶೇ.12.5 ರಷ್ಟು ವೇತನ ಪರಿಷ್ಕರಿಸಿದೆ. ಆದರೆ, ಇದಕ್ಕೆ ಸಾರಿಗೆ ನೌಕರರ ಸಂಘಟನೆಗಳು ಒಪ್ಪಿಗೆ ಸೂಚಿಸಿಲ್ಲ. 20ರಂದು ಮುಷ್ಕರ ಮಾಡಲು ನಿರ್ಧರಿಸಿವೆ. ನಾಲ್ಕು ನಿಗಮದ ಸಾರಿಗೆ ನೌಕರರು ಮುಷ್ಕರಕ್ಕೆ ಕರೆ ನೀಡಿದ್ದಾರೆ. 2024 ಜನವರಿಯಿಂದ 25% ವೇತನ ಹೆಚ್ಚಳಕ್ಕೆ ನೌಕರರು ಪಟ್ಟು ಹಿಡಿದಿದ್ದಾರೆ.

ಭಾರತದಲ್ಲಿ 60 ದಿನಗಳಿಗೆ ಆಗುವಷ್ಟು ಕಚ್ಚಾ ತೈಲ ದಾಸ್ತಾನಿದೆ

ನವದೆಹಲಿ, ಮೇ 12–ಭಾರತ ಕಳೆದ 4 ವರ್ಷಗಳಲ್ಲಿ ಇಂಧನ ಬೆಲೆಗಳನ್ನು ಹೆಚ್ಚಿಸಿಲ್ಲ ಈಗಲೂ ಕಚ್ಚಾ ತೈಲ, ಎಲ್‌ಎನ್‌ಜಿ ಮತ್ತು ಎಲ್‌ಪಿಜಿಯ ಸಾಕಷ್ಟು ದಾಸ್ತಾನನ್ನು ಹೊಂದಿದೆ ಎಂದು ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವ ಹರ್ದೀಪ್ ಸಿಂಗ್ ಪುರಿ ಹೇಳಿದ್ದಾರೆ.



ಹಾರ್ಮುಜ್ ಬಿಕ್ಕಟ್ಟಿನಿಂದ ವಿವಿಧ ದೇಶಗಳು ಎದುರಿಸುತ್ತಿರುವ ತೈಲ ಬಿಕ್ಕಟ್ಟು ಕುರಿತು ಮಾತನಾಡಿದ ಅವರು, ಹಾರ್ಮುಜ್ ಬಿಕ್ಕಟ್ಟಿನಿಂದ ಹಲವು ದೇಶಗಳು ಇಂಧನ ಬೆಲೆ ಏರಿಕೆ ಮತ್ತು ತೈಲ ಕೊರತೆ ಎದುರಿಸುತ್ತಿದ್ದರೂ ಭಾರತ ಸ್ಥಿರ ಸ್ಥಿತಿಯಲ್ಲಿದೆ. ಕಳೆದ 4 ವರ್ಷಗಳಲ್ಲಿ ಇಂಧನ ಬೆಲೆ ಏರಿಕೆ ಮಾಡಿಲ್ಲ. ಬೆಲೆ ಏರಿಕೆ ವಿಷಯದಲ್ಲೂ ವಿಶ್ವದ ಇತರ ರಾಷ್ಟ್ರಗಳಿಗಿಂತ ನಾವು ಭಿನ್ನವಾಗಿದ್ದೇವೆ ಎಂದು ಪುರಿ ತಿಳಿಸಿದ್ದಾರೆ.

ಹಾರ್ಮುಜ್ ಜಲಸಂಧಿ ನಿರ್ಬಂಧ 75ನೇ ದಿನಕ್ಕೆ ಕಾಲಿಟ್ಟಿದೆ. ಈ ಬಿಕ್ಕಟ್ಟು ಶುರುವಾದಾಗ ಭಾರತಕ್ಕೂ ಕಳವಳ ಇತ್ತು. ಆದರೆ, ದೇಶೀಯ ಎಲ್‌ಪಿಜಿ ಉತ್ಪಾದನೆ ಹೆಚ್ಚಿಸುವ ಮೂಲಕ ಭಾರತ ಸವಾಲನ್ನೇ ಅವಕಾಶವನ್ನಾಗಿ ಪರಿವರ್ತಿಸಿಕೊಂಡಿದೆ. ದಿನಕ್ಕೆ 36,000 ಮೆಟ್ರಿಕ್ ಟನ್‌ಗಳಷ್ಟಿದ್ದ ದೇಶೀಯ ಎಲ್‌ಪಿಜಿ ಉತ್ಪಾದನೆಯನ್ನು 54,000 ಮೆಟ್ರಿಕ್ ಟನ್‌ಗಳಿಗೆ ಹೆಚ್ಚಿಸಿದ್ದೇವೆ. ಸದ್ಯ ಭಾರತ 60 ದಿನಗಳಿಗೆ ಆಗುವಷ್ಟು ತೈಲ ದಾಸ್ತಾನನ್ನು ಹೊಂದಿದೆ. 60 ದಿನಗಳಿಗಾಗುವಷ್ಟು ಎಲ್‌ಎನ್‌ಜಿ, 45 ದಿನಗಳಿಗಾಗುವಷ್ಟು ಎಲ್‌ಪಿಜಿ ಸೇರಿದಂತೆ ಸಾಕಷ್ಟು ಇಂಧನ ಮೀಸಲು ಹೊಂದಿದೆ, ತೈಲ ಪೂರೈಕೆಯಲ್ಲೂ ಯಾವುದೇ ಸಮಸ್ಯೆಗಳಿಲ್ಲ ಎಂದು ವಿವರಿಸಿದ್ದಾರೆ.

ಸೈಕಲ್‌ನಲ್ಲೇ ಕೋರ್ಟ್‌ಗೆ ಬಂದ ಹೈಕೋರ್ಟ್ ನ್ಯಾಯಮೂರ್ತಿ!



ನವದೆಹಲಿ, ಮೇ 12– ಪಶ್ಚಿಮ ಏಷ್ಯಾದಲ್ಲಿ ಉಂಟಾಗಿರುವ ಬಿಕ್ಕಟ್ಟಿನಿಂದಾಗಿ ಇಂಧನ ಉಳಿಸಲು ಪ್ರಧಾನಿ ನರೇಂದ್ರಮೋದಿ ಮನವಿ ಮಾಡಿದ್ದರು. ಎಲೆಕ್ಟ್ರಿಕ್ ವಾಹನ, ಸರ್ಕಾರಿ ಸಾರಿಗೆಯನ್ನು ಬಳಸಲು ಕರೆನೀಡಿದ್ದರು. ಅವರ ಮನವಿಗೆ ದೇಶಾದ್ಯಂತ ಸಾಕಷ್ಟು ಉತ್ತಮ ಸ್ಪಂದನೆ ಬರುತ್ತಿದೆ. ಮಧ್ಯ ಪ್ರದೇಶದ ಹೈಕೋರ್ಟ್ ■6ನೇ ಪುಟಕ್ಕೆ

ಮದ್ಯಪ್ರಿಯರಿಗೆ ಶಾಕ್: ಇಂದಿನಿಂದ 20% ಹೆಚ್ಚಳ

ಬೆಂಗಳೂರು, ಮೇ 12– ರಾಜ್ಯ ಸರ್ಕಾರ ಮದ್ಯಪ್ರಿಯರಿಗೆ ಶಾಕ್ ನೀಡಿದೆ. ಆಲ್ಕೋಹಾಲ್ ಪ್ರಮಾಣದ ಆಧಾರದ ಮೇಲೆ 20% ತೆರಿಗೆ ಹೆಚ್ಚಿಸಿ, ಇಂದಿನಿಂದಲೇ ಹೊಸ ನೀತಿ ಜಾರಿಗೊಳಿಸಿದೆ. ಆಲ್ಕೋಹಾಲ್ ಇನ್ ಬೇವರೇಜ್ ನೀತಿಯಿಂದ ದರ ಶೇ.20ರಿಂದ ಶೇ.30ರಷ್ಟು ಏರಿಕೆಯಾಗಿದೆ. ಈ ಹೊಸ ನೀತಿಯ ಪ್ರಕಾರ, ಮದ್ಯದ ಬಾಟಲ್‌ನಲ್ಲಿ ಇರುವ ಆಲ್ಕೋಹಾಲ್ ಅಂಶವನ್ನು ಆಧರಿಸಿ ತೆರಿಗೆ ನಿಗದಿಯಾಗಲಿದೆ. ಅಂದರೆ ಹೆಚ್ಚು ಆಲ್ಕೋಹಾಲ್ ಹೊಂದಿರುವ ಮದ್ಯಕ್ಕೆ ಹೆಚ್ಚಿನ ತೆರಿಗೆ, ಕಡಿಮೆ ಆಲ್ಕೋಹಾಲ್ ಇದ್ದರೆ ಕಡಿಮೆ ತೆರಿಗೆ ವಿಧಿಸಲಾಗುತ್ತದೆ. ವಿಸ್ಕಿ, ರಮ್, ಬ್ರಾಂಡಿ ಮತ್ತು ಜಿನ್ ಸೇರಿದಂತೆ ಭಾರತೀಯ ಮದ್ಯದ ದರಗಳು ಶೇ.20ರಷ್ಟು ಏರಿಕೆಯಾಗಿದ್ದು, ಕರ್ನಾಟಕದಲ್ಲಿ 180 ಮಿಲಿ ಟೆಟ್ರಾ ಪ್ಯಾಕ್‌ಗಳ ವಿಸ್ಕಿ, ರಮ್, ಬ್ರಾಂಡಿ, ಜಿನ್ ಮತ್ತು ವೋಡ್ಕಾ ಬೆಲೆಯು ಕನಿಷ್ಠ ಶೇ.20ರಷ್ಟು ಹೆಚ್ಚಾಗಲಿದೆ. ಕಡಿಮೆ ಆದಾಯ ವರ್ಗದವರು ಬಳಸುವ ಮೊದಲ 4 ಸ್ಲ್ಯಾಬ್‌ಗಳ ಮದ್ಯ ಹೆಚ್ಚು ದುಬಾರಿಯಾಗಿದ್ದು, ಸರಾಸರಿ ಆಲ್ಕೋಹಾಲ್ ಪ್ರಮಾಣ ಶೇ.42ರಷ್ಟಿದೆ. 4 ಸ್ಲ್ಯಾಬ್‌ಗಳು ಎಕ್ಸೈಸ್ ಆದಾಯದಲ್ಲಿ ಒಟ್ಟು ಶೇ.80ರಷ್ಟು ಪಾಲು ಹೊಂದಿದ್ದು, ಬಾರ್ ಅಂಡ್ ರೆಸ್ಟೋರೆಂಟ್‌ಗಳಲ್ಲಿ ಎಂಆರ್‌ಪಿಗಿಂತ ದರ ಮತ್ತಷ್ಟು ಏರಿಕೆಯಾಗುವ ಸಾಧ್ಯತೆಯಿದೆ.




ಮೈಸೂರು ಮಹಾನಗರ ಪಾಲಿಕೆ ಮಳಿಗೆಗಳ ಬಾಡಿಗೆ 23 ವರ್ಷದ ನಂತರ ಪರಿಷ್ಕರಣೆ!

■ ಪಾಲಿಕೆ ನೀಡಿದ ಸ್ವಯಂ ಪರಿಷ್ಕರಣೆ ಸಲಹೆಗೆ ಮಳಿಗೆದಾರರ ಸಮ್ಮತಿ ■ 300 ರೂ., 5 ಸಾವಿರ ಇದ್ದ ಬಾಡಿಗೆ, ಈಗ 1500 ರಿಂದ 27 ಸಾವಿರ ■ ಪಾಲಿಕೆ ಅಧಿಕಾರಿಗಳು, ಮಳಿಗೆದಾರರ ನಡುವೆ ಸೌಹಾರ್ದಯುತ ಸ್ಪಂದನೆ

ಮೈಸೂರು, ಮೇ.12(ಎಂಟಿವೈ)– ಮೈಸೂರು ಮಹಾನಗರ ಪಾಲಿಕೆಯ ವಾಣಿಜ್ಯ ಮಳಿಗೆಗಳಿಗೆ 23 ವರ್ಷದ ಬಳಿಕ ಬಾಡಿಗೆ ದರ ಪರಿಷ್ಕರಣೆಯಾಗಿದೆ. ಅದು ಮಹಾನಗರ ಪಾಲಿಕೆ ಮಾಡಿದ ಪರಿಷ್ಕರಣೆ ಅಲ್ಲ ಬದಲಾಗಿ ಪಾಲಿಕೆ ನೀಡಿದ ಸಲಹೆನುಸಾರ ಮಳಿಗೆದಾರರು ನಿರ್ಧರಿಸಿದ್ದು!

ಮೈಸೂರು ಮಹಾನಗರ ಪಾಲಿಕೆಗೆ ಸೇರಿದ ಮಳಿಗೆಗಳು ಕೆ.ಆರ್.ವೃತ್ತದ ವಿಶ್ವೇಶ್ವರಯ್ಯ ಭವನ, ದೇವರಾಜ ಮಾರುಕಟ್ಟೆ, ಸಯ್ಯಾಜಿ ರಾವ್ ರಸ್ತೆ, ಧನ್ವಂತರಿ ರಸ್ತೆ, ಮಂಡಿ ಮಾರುಕಟ್ಟೆ, ವಾಣಿವಿಲಾಸ ಮಾರುಕಟ್ಟೆ ಸೇರಿದಂತೆ ವಿವಿಧೆಡೆ ಒಟ್ಟು 1980 ಮಳಿಗೆಗಳಿದ್ದು, ಅವುಗಳಿಗೆ 23 ವರ್ಷದಿಂದ ಬಾಡಿಗೆ ಪರಿಷ್ಕರಣೆ ಮಾಡಿರಲಿಲ್ಲ.

ಇದರಿಂದ ಮೈಸೂರು ಮಹಾನಗರ ಪಾಲಿಕೆಗೆ ನಷ್ಟವಾದರೆ, ಮಳಿಗೆದಾರರಿಗೆ ನಿರಾಳ ಎನಿಸಿತ್ತು. ಮಹಾನಗರ ಪಾಲಿಕೆ ಆಯಾ ಸ್ಥಳದ ಭೂ ಮೌಲ್ಯಕ್ಕೆ ಅನುಗುಣವಾಗಿ ಬಾಡಿಗೆ ಹೆಚ್ಚಳ ಮಾಡಲು ಮುಂದಾಗಿತ್ತು. ಇದಕ್ಕೆ ಮಳಿಗೆದಾರರಿಂದ ತೀವ್ರ ವಿರೋಧ ವ್ಯಕ್ತವಾಗಿತ್ತು ಹಾಗಾಗಿ ಪಾಲಿಕೆ ಬಾಡಿಗೆ ಪರಿಷ್ಕರಣೆ ಪ್ರಸ್ತಾಪದಿಂದ ಹಿಂದೆ ಸರಿದಿತ್ತು. ಇದೀಗ ಮಳಿಗೆದಾರರನ್ನು ವಿಶ್ವಾಸಕ್ಕೆ ತೆಗೆದುಕೊಂಡು 'ಸ್ವಯಂ ಬಾಡಿಗೆ ಪರಿಷ್ಕರಣೆ' ಪ್ರಸ್ತಾಪ ಮುಂದಿಟ್ಟ ಹಿನ್ನೆಲೆಯಲ್ಲಿ ಈಗ ಮಳಿಗೆಗಳ ಬಾಡಿಗೆದಾರರೇ ಪರಿಷ್ಕರಣೆ ಮಾಡಿ ಕೊಂಡು ಚೆಕ್ ಮೂಲಕ ಬಾಡಿಗೆ ಕಟ್ಟಲಾರಂಭಿಸಿದ್ದಾರೆ.



ಮೈಸೂರು ಮಹಾನಗರ ಪಾಲಿಕೆಯ ಕಂದಾಯ ವಿಭಾಗದ ಉಪ ಆಯುಕ್ತ ಸೋಮಶೇಖರ್ ಜಿಗನಿ ಅವರಿಗೆ ದೇವರಾಜ ಮಾರುಕಟ್ಟೆ ಬಾಡಿಗೆದಾರರ ಸಂಘದ ಅಧ್ಯಕ್ಷ ಪೈಲ್ವಾನ್ ಎಸ್.ಮಹದೇವ, ಮಂಡಿಮೊಹಲ್ಲಾ ಮಾರುಕಟ್ಟೆ ಮಳಿಗೆದಾರರ ಸಂಘದ ಅಧ್ಯಕ್ಷ ಮೊಹಮದ್ ಇಬ್ರಾಹಿಂ, ಸಿ.ಕೆ.ಪ್ರೇಮ್‌ಕುಮಾರ್, ಪರಿಷ್ಕೃತ ಬಾಡಿಗೆ ದರದ ಚೆಕ್ ಸಲ್ಲಿಸಿದರು. ಈ ವೇಳೆ ವಲಯ ಕಚೇರಿ 6ರ ಎಸಿ ಪ್ರತಿಭಾ ಉಪಸ್ಥಿತರಿದ್ದರು

ನೀವೇ ಬಾಡಿಗೆ ಹೆಚ್ಚಿಸಿ: ಮಹಾನಗರ ಪಾಲಿಕೆಗೆ ಸೇರಿದ ಮಳಿಗೆಗಳ ಬಾಡಿಗೆ ಹೆಚ್ಚಳ ಮಾಡಲು 2014–15ರಲ್ಲಿ ಸಬ್‌ರಿಜಿಸ್ಟ್ರಾರ್ ಕಚೇರಿಯಿಂದ ಮಾಹಿತಿ ಪಡೆದು ಆಯಾ ಪ್ರದೇಶದ ಭೂಮಿ ಮೌಲ್ಯಕ್ಕೆ ಅನುಗುಣವಾಗಿ ಬಾಡಿಗೆ ಪರಿಷ್ಕರಣೆ ಮಾಡಲಾಗಿತ್ತು. ಅದರಲ್ಲಿ ವಿಶ್ವೇಶ್ವರಯ್ಯ ಭವನದ ಮಳಿಗೆಗಳಿಗೆ ಒಂದು ■6ನೇ ಪುಟಕ್ಕೆ

3 ವರ್ಷಕ್ಕೊಮ್ಮೆ ಪರಿಷ್ಕರಿಸಿದ ಲೆಕ್ಕದಂತೆ ಬಾಡಿಗೆ ಹೆಚ್ಚಳ

ದೇವರಾಜ ಮಾರುಕಟ್ಟೆಯ ಸಂರಕ್ಷಿಸಿಕೊಳ್ಳುವಂತೆ ಸುಪ್ರೀಂಕೋರ್ಟ್ ಸೂಚಿಸಿದೆ. ಈ ಮಧ್ಯೆ ಕಳೆದ 23 ವರ್ಷದಿಂದ ಬಾಡಿಗೆ ಪರಿಷ್ಕರಣೆಯನು ಪಾಲಿಕೆ ಮಾಡಿಲ್ಲ. ನಾವೂ ಹೆಚ್ಚಳ ಮಾಡಿಲ್ಲ. ಈಗ ಏ.1ರಿಂದ ಪೂರ್ವಾನ್ವಯವಾಗುವಂತೆ ಬಾಡಿಗೆದಾರರೇ ಬಾಡಿಗೆ ಹೆಚ್ಚಳ ಮಾಡಿ, ಪಾಲಿಕೆಗೆ ಚೆಕ್ ಮೂಲಕ ಪಾವತಿಸುತ್ತಿದ್ದೇವೆ. 3 ವರ್ಷಕ್ಕೊಮ್ಮೆ ಪರಿಷ್ಕರಣೆ ಮಾಡಿದ್ದರೆ ಎಷ್ಟಾಗುತ್ತಿತ್ತು, ಸ್ಥಳೀಯ ಪ್ರದೇಶದಲ್ಲಿ ಬಾಡಿಗೆ ಎಷ್ಟಿದೆ ಎಂಬ ಅಂಶವನ್ನು ಮನಗಂಡು ಪಾಲಿಕೆಗೂ ನಷ್ಟವಾಗಬಾರದು, ಬಾಡಿಗೆದಾರರಿಗೂ ಹೊರೆಯಾಗಬಾರದು ಎಂಬ ಲೆಕ್ಕಾಚಾರದಲ್ಲಿ ಪರಿಷ್ಕೃತ ದರವನ್ನು ನಾವೇ ನಿರ್ಧರಿಸಿದ್ದೇವೆ. ಮುಂದಿನ ದಿನಗಳಲ್ಲಿ ಪಾಲಿಕೆ ಕಾಲ ಕಾಲಕ್ಕೆ ಬಾಡಿಗೆ ಪರಿಷ್ಕರಿಸಬೇಕು. ನಾವು ಬಾಡಿಗೆದಾರರು, ಮೈಸೂರಿನ ನಿವಾಸಿಗಳೇ ಆಗಿದ್ದೇವೆ. ಆ ಕಾರಣದಿಂದ ಪಾಲಿಕೆಗೆ ನಮ್ಮಿಂದ ನಷ್ಟವಾಗಬಾರದು. ಆ ಕಾರಣದಿಂದ ಪರಿಷ್ಕೃತ ಬಾಡಿಗೆ ದರ ಪಾವತಿಸುತ್ತಿದ್ದೇವೆ. ಯಾವ ಬಾಡಿಗೆದಾರರು ಇದುವರೆಗೂ ಬಾಡಿಗೆ ಕಟ್ಟದೇ ಬಾಕಿ ಉಳಿಸಿಕೊಂಡಿದ್ದಾರೋ ಅವರೆಲ್ಲಾ, ಶೀಘ್ರವೇ ಬಾಡಿಗೆ ಕಟ್ಟಬೇಕು.

–ಪೈಲ್ವಾನ್ ಎಸ್.ಮಹದೇವ, ಅಧ್ಯಕ್ಷರು, ದೇವರಾಜ ಮಾರುಕಟ್ಟೆ ಬಾಡಿಗೆದಾರರ ಸಂಘ

ಮಾದಪ್ಪನ ಬೆಟ್ಟಕ್ಕೆ ವರ್ಷವಿಡೀ ಪಾದಯಾತ್ರೆ ನಿಷೇಧ!

ಯುಗಾದಿ, ಶಿವರಾತ್ರಿಗೆ ಮಾತ್ರ ಭಕ್ತರಿಗೆ ಅವಕಾಶ!



ಚಾಮರಾಜನಗರ, ಮೇ 12– ಮಹದೇಶ್ವರ ಬೆಟ್ಟದಲ್ಲಿ ಚಿರತೆ ದಾಳಿಗೆ ಬಾಲಕ ಸಾವು ಪ್ರಕರಣ ಹಿನ್ನೆಲೆ ಅರಣ್ಯ ಇಲಾಖೆ ಮಹತ್ವದ ನಿರ್ಧಾರ ತೆಗೆದುಕೊಂಡಿದ್ದಾರೆ. ಇನ್ಮುಂದೆ ಮಾದಪ್ಪನ ಬೆಟ್ಟಕ್ಕೆ ವರ್ಷವಿಡೀ ಪಾದಯಾತ್ರೆ ನಿಷೇಧ ಹೇರಲಾಗಿದೆ. ಯುಗಾದಿ ಮತ್ತು ಶಿವರಾತ್ರಿ ವೇಳೆ ಮಾತ್ರ ಪಾದಯಾತ್ರೆಗೆ ಅವಕಾಶ ಎಂದು ಅರಣ್ಯ ಸಚಿವ ಈಶ್ವರ್ ಖಂಡ್ರೆ ಆದೇಶ ಹೊರಡಿಸಿದ್ದಾರೆ.



ಮಹದೇಶ್ವರ ಬೆಟ್ಟದಲ್ಲಿ ಚಿರತೆ ದಾಳಿಗೆ ಬಾಲಕ ಬಲಿ ಹಿನ್ನೆಲೆಯಲ್ಲಿ ಸಚಿವ ಈಶ್ವರ್ ಖಂಡ್ರೆ ಅವರು ಹಿರಿಯ ಅಧಿಕಾರಿಗಳು ಹಾಗೂ ಚಾಮರಾಜನಗರ ಅರಣ್ಯಾಧಿಕಾರಿಗಳೊಂದಿಗೆ ಇಂದು ವರ್ಚುವಲ್ ಸಭೆ ನಡೆಸಿದರು.

ಈ ಸಭೆಯಲ್ಲಿ ಚರ್ಚೆ ನಡೆಸಿದ ಸಚಿವರು, ಭಕ್ತರಲ್ಲಿ ವನ್ಯಮೃಗಗಳ ಅಪಾಯದ ಬಗ್ಗೆ ಜಾಗೃತಿ ಮೂಡಿಸ ಬೇಕು, ಬೆಟ್ಟಕ್ಕೆ ಬಸ್ ಮೂಲಕವೇ ತೆರಳುವಂತೆ ಸೂಚನಾಫಲಕ ಅಳವಡಿಸ ಬೇಕು. ಬೆಟ್ಟದಿಂದ ನಾಗಮಲೆಗೆ 14 ಕಿ.ಮೀ ಬದಲು ಕೇವಲ 3 ಕಿ.ಮೀ ಪಾದಯಾತ್ರೆಗೆ ಅವಕಾಶ ನೀಡಿ, ವಾಕಿಟಾಕಿ ಮತ್ತು ಅಗತ್ಯ ಸುರಕ್ಷತಾ ಸಲಕರಣೆಗಳೊಂದಿಗೆ ಭದ್ರತಾ ಸಿಬ್ಬಂದಿಯಿಂದ ಪಾದಯಾತ್ರಿಗಳಿಗೆ ರಕ್ಷಣೆ ಒದಗಿಸಿ ಎಂದು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಅರಣ್ಯ ಇಲಾಖೆಯಿಂದ ಹೊಸ ಸುತ್ತೋಲೆ: ಅರಣ್ಯ ಇಲಾಖೆಯಿಂದ ಹೊಸ ಸುತ್ತೋಲೆ ಹೊರಡಿಸಿದೆ. ವನ್ಯಜೀವಿ ಸಂಚಾರ ಇರುವ ಎಲ್ಲ ಚಾರಣಪಥ ಮತ್ತು ಸಂಚಾರಪಥಗಳನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಿ ಅರಣ್ಯ ಇಲಾಖೆ ಸಚಿವ ಈಶ್ವರ ಖಂಡ್ರೆ ಸೂಚನೆ ಹೊರಡಿಸಿದ್ದಾರೆ. ಸಾರ್ವಜನಿಕರು ಮತ್ತು ಚಾರಣಿಗರ ಸುರಕ್ಷತೆಯನ್ನು ಹಿತದೃಷ್ಟಿಯಿಂದ ಮುಂದಿನ ಆದೇಶದವರೆಗೆ ಚಿರತೆ, ಹುಲಿ, ಆನೆ, ಕರಡಿ ಸೇರಿದಂತೆ ವನ್ಯಜೀವಿಗಳು ಸಂಚರಿಸುವ ಕಡೆ ಮತ್ತು ಮಾನವ–ವನ್ಯಜೀವಿ ಸಂಘರ್ಷ ಸಂಭವಿಸಿರುವ ಕಡೆಗಳಲ್ಲಿ ಚಾರಣ ಮತ್ತು ಸಂಚಾರ ಪಥಗಳನ್ನು ತಕ್ಷಣದಿಂದಲೇ ಸ್ಥಗಿತಗೊಳಿಸಲು ಸೂಚನೆ ನೀಡಲಾಗಿದೆ.

ನಕ್ಕರೆ ಅದೇ ಸ್ವರ್ಗ

ರಾಮ : ಹುಡ್ಗೀರ್ನಾ ಎಷ್ಟು ಪ್ರೀತಿಸಬೇಕು?
ಭೀಮ : ನಾವು ಅಕ್ಕನ ಪ್ರೀತಿಸೋದನ್ನ ನೋಡಿ ಅವಳ ತಂಗಿ ನಮ್ಮ ಜೊತೆ ಓಡಿ ಬರೋಕೆ ತಯಾರಾಗಬೇಕು. ಆ ತರ ಪ್ರೀತಿಸಬೇಕು!!

ಮೈಸೂರು ಮಿತ್ರ

ಬುಧವಾರ, ಮೇ 13, 2026

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ.........

ಯಾವಾಗ ನಿಮ್ಮ ಉದ್ದೇಶಗಳು ಶುದ್ಧವಾಗಿ ಇರುತ್ತವೆಯೋ ಅಂದು ನೀವು ಯಾರನ್ನು ಕಳೆದುಕೊಳ್ಳುವುದಿಲ್ಲ. ಬದಲಾಗಿ ಅವರೇ ನಿಮ್ಮನ್ನು ಕಳೆದುಕೊಳ್ಳುತ್ತಾರೆ. – ಸಿದ್ಧಗಂಗಾ ಸ್ವಾಮೀಜಿ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು } ಸಾಲಗಾರ ಸುಮ್ಮನಿದ್ರು ಸಾಕ್ಷಿಗಾರ ಸುಮ್ಮನಿರ.

ನಿಮ್ಮ ಪತ್ರಗಳು

ಖಾಲಿ ನಿವೇಶನಗಳ ಸ್ವಚ್ಛತೆ ಕಾಪಾಡಲು ಟಾಸ್ಕ್ ಫೋರ್ಸ್ ರಚಿಸಿ

ಮಾನ್ಯರೆ,

ಸಾಂಸ್ಕೃತಿಕ ನಗರ ಮೈಸೂರನ್ನು ಸ್ವಚ್ಛತೆಯಲ್ಲಿ ನಂಬರ್ ಒನ್ ನಗರಿ ಮಾಡಲು ಶ್ರಮಿಸಿದ ಮೈಸೂರು ಮಹಾನಗರ ಪಾಲಿಕೆ ಅಧಿಕಾರಿಗಳು ಮೊದಲು ಮೈಸೂರಿನಲ್ಲಿರುವ ಖಾಲಿ ನಿವೇಶನಗಳು, ಉದ್ಯಾನವನಗಳು ಮತ್ತು ಪ್ರಮುಖ ವೃತ್ತಗಳಲ್ಲಿ ತ್ಯಾಜ್ಯ ಸ್ವಚ್ಛಗೊಳಿಸಲು ಸಮಿತಿ ರಚಿಸಿ ಕಾರ್ಯರೂಪಕ್ಕೆ ತರಲು ಮುಂದಾಗಬೇಕು.

ನೂತನ ಬಡಾವಣೆಗಳು ಮತ್ತು ಸುಮಾರು ವರ್ಷಗಳಿಂದ ಮನೆ ನಿರ್ಮಿಸದೇ ಖಾಲಿ ಬಿಟ್ಟಿರುವ ನಿವೇಶನಗಳ ಮಾಲೀಕರು ತಮ್ಮ ಜಾಗಗಳಲ್ಲಿ ಸ್ವಚ್ಛತೆ ಕಾಪಾಡುತ್ತಿಲ್ಲ. ಇದರ ಬಗ್ಗೆ ಆರೋಗ್ಯಾಧಿಕಾರಿಗಳು ನೋಟಿಸ್ ಜಾರಿಗೊಳಿಸಲು ಮುಂದಾಗಬೇಕು. ಮುಂದಿನ ದಿನಗಳಲ್ಲಿ ಮಳೆ ಹೆಚ್ಚಾಗುವುದರಿಂದ ಸಾಂಕ್ರಾಮಿಕ ರೋಗ-ರುಜಿನ ಹರಡುವಿಕೆಯನ್ನು ತಡೆಗಟ್ಟುವ ಬಗ್ಗೆ ನಗರಪಾಲಿಕೆ ಅಧಿಕಾರಿಗಳು ಟಾಸ್ಕ್ ಫೋರ್ಸ್ ರಚಿಸಬೇಕು ಮತ್ತು ಸರ್ಕಾರದ ವತಿಯಿಂದ ಬಡಾವಣೆಗಳಲ್ಲಿ ಖಾಲಿ ನಿವೇಶನ ಸ್ವಚ್ಛಗೊಳಿಸಲು ನಗರಪಾಲಿಕೆ ಮತ್ತು ಮೈಸೂರು ಅಭಿವೃದ್ಧಿ ಪ್ರಾಧಿಕಾರ (ಎಂಡಿಎ) ಒಂದಷ್ಟು ತೆರಿಗೆ ಹಣವನ್ನು ವಾರ್ಷಿಕವಾಗಿ ಸಂದಾಯ ಮಾಡಬೇಕು. ಜನಸಾಮಾನ್ಯರಿಗೆ ಸೇವೆ ಮತ್ತು ಸುರಕ್ಷತೆ ನೀಡಲು ಮೊದಲ ಆದ್ಯತೆ ನೀಡಬೇಕು ಇಲ್ಲವಾದಲ್ಲಿ ಮೈಸೂರು ಸ್ವಚ್ಛ ನಗರಿ ಎಂಬುದು ಕೇವಲ ಪ್ರಚಾರಕ್ಕೆ ಮಾತ್ರ ಸೀಮಿತವಾಗುತ್ತದೆ.

–ವಿಕ್ರಂ ಅಯ್ಯಂಗಾರ್, ಸಾಮಾಜಿಕ ಹೋರಾಟಗಾರ, ಮೈಸೂರು

ಬಾತ್ಮೀದಾರರಿಗೆ ಗೌರವ ಧನ ನೀಡಿ!

ಮಾನ್ಯರೆ,

ಎಲ್ಲೆಂದರಲ್ಲಿ ಕಾರುಗಳನ್ನು ನಿಲ್ಲಿಸಿ ಕಾಡುವವರ ಸಂಖ್ಯೆ ಹೆಚ್ಚಾಗಿದೆ. ಅಂತಹವರನ್ನು ಬೇಟೆಯಾಡುವಷ್ಟು ಸಂಖ್ಯೆಯಲ್ಲಿ ಪೊಲೀಸರಿಲ್ಲ. ಸಂಚಾರ ನಿಯಮ ಉಲ್ಲಂಘಿಸಿ ಎಲ್ಲೆಂದರಲ್ಲಿ ನಿಂತಿರುವ ವಾಹನಗಳ ಫೋಟೋ ಕ್ಲಿಕ್ಕಿಸಿ, ಸ್ಥಳ, ಸಮಯ, ದಿನಾಂಕ, ವಾಹನ ಸಂಖ್ಯೆಯೊಂದಿಗೆ ಮಾಹಿತಿ ನೀಡುವ ಬಾತ್ಮೀದಾರರಿಗೆ ಪ್ರೋತ್ಸಾಹ ನೀಡಿದರೆ ಪೊಲೀಸರ ಕಾರ್ಯ ಸುಗಮವಾಗುತ್ತದೆ. ಬಾತ್ಮೀದಾರರ ಮಾಹಿತಿಯ ಆಧಾರದ ಮೇಲೆ ವಸೂಲಾದ ದಂಡದ ಮೊತ್ತದಲ್ಲಿ 50% ಹಣವನ್ನು ಗೌರವ ಧನದ ರೂಪದಲ್ಲಿ ಬಾತ್ಮೀದಾರರಿಗೆ ನೀಡಿದರೆ ಬಾತ್ಮೀದಾರರ ಸಂಖ್ಯೆಯೂ ಹೆಚ್ಚಾಗಿ ನಗರದಲ್ಲಿ ಸಂಚಾರ ನಿಯಮ ಉಲ್ಲಂಘನೆಯಾಗುವ ಪ್ರಕರಣಗಳ ಸಂಖ್ಯೆ 100% ನಿಯಂತ್ರಣವಾಗಿ ವಾಹನಗಳ ಹಾಗೂ ಸಾರ್ವಜನಿಕರ ಸುಗಮ ಸಂಚಾರಕ್ಕೆ ಅನುಕೂಲವಾಗಬಹುದು. ಈ ವಿಚಾರವಾಗಿ ಸರಕಾರ ಹಾಗೂ ಪೊಲೀಸ್ ಇಲಾಖೆ ಚಿಂತಿಸಲಿ! –ಪಿ.ಜೆ.ರಾಘವೇಂದ್ರ ಮೈಸೂರು

ಸ್ಟಾಲಿನ್ ನಡೆ ಪ್ರಶಂಸಾರ್ಹ

ಮಾನ್ಯರೆ,

ತಮಿಳುನಾಡಿನ ನೂತನ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿರುವ ಜೋಸೆಫ್ ವಿಜಯ್ ಅವರನ್ನು ಮಾಜಿ ಮುಖ್ಯಮಂತ್ರಿ ಡಿಎಂಕೆ ಪಕ್ಷದ ಸರ್ವೋಚ್ಚ ನಾಯಕ ಸ್ಟಾಲಿನ್ ಅಭಿನಂದಿಸಿರುವುದು ಮಾಧ್ಯಮಗಳಲ್ಲಿ ಪ್ರಕಟವಾಗಿದೆ. ಅದಕ್ಕೂ ಮುಂಚೆ ವಿಜಯ್ ಅವರು ನೂತನ ಸರ್ಕಾರ ರಚಿಸಬೇಕೆಂದು ಸ್ಟಾಲಿನ್ ಪ್ರತಿಪಾದಿಸಿದ್ದರಲ್ಲದೇ, ತಾವು ಎಐಎಡಿಎಂಕೆ ಜೊತೆ ಸೇರಿ ಸರ್ಕಾರ ರಚಿಸುವ ಪ್ರಸ್ತಾವನೆಯನ್ನು ತಿರಸ್ಕರಿಸಿದ್ದರು. ಸ್ಟಾಲಿನ್ ಅವರ ನಿಲುವು ಶ್ಲಾಘನೀಯವಾಗಿದೆ. ಪ್ರಜಾತಂತ್ರ ವ್ಯವಸ್ಥೆಯಲ್ಲಿ ಪ್ರಜೆಗಳ ತೀರ್ಪೇ ಅಂತಿಮ. ಅದನ್ನು ಗೌರವಿಸಿರುವ ಸ್ಟಾಲಿನ್, ನೂತನ ಮುಖ್ಯಮಂತ್ರಿ ವಿಜಯ್ ಅವರಿಗೆ ಸಹಕಾರ ನೀಡುವುದಾಗಿ ಹೇಳಿರುವುದು ಒಳ್ಳೆಯ ಬೆಳವಣಿಗೆ.

–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು.

ಪ್ರಧಾನಿ ನರೇಂದ್ರ ಮೋದಿ ಹೇಳಿಕೆಯಲ್ಲಿ ತಪ್ಪೇನಿದೆ?

ಮಾನ್ಯರೆ,

ಕೊಲ್ಲಿ ಯುದ್ಧದಿಂದ ಉಂಟಾಗಿರುವ ಪೆಟ್ರೋಲ್ ಮತ್ತು ಡೀಸೆಲ್ ಕೊರತೆಯು ಈಗ ಬಹು ದೊಡ್ಡ ಜಾಗತಿಕ ಸಮಸ್ಯೆಯಾಗಿ ಪರಿಣಮಿಸಿರುವುದು ಸುಳ್ಳಲ್ಲ. ಅದಕ್ಕೆಂದೇ ಮೋದಿಯವರು 'ಪೆಟ್ರೋಲ್ ಮತ್ತು ಡೀಸೆಲ್' ಬಳಕೆಯನ್ನು ಸಾರ್ವಜನಿಕರು ಮಿತಗೊಳಿಸಬೇಕು ಎಂದು ಹೇಳಿದ್ದಾರೆ. ಪೆಟ್ರೋಲ್ ಮತ್ತು ಡೀಸೆಲ್ ಇವುಗಳನ್ನು ಒಂದು ವರ್ಷ ಮಿತವಾಗಿ ಬಳಸುವಂತೆ ಹೇಳಿರುವುದರಲ್ಲಿ ತಪ್ಪೇನೂ ಕಾಣುತ್ತಿಲ್ಲ. ಈ ಮಿತ ಬಳಕೆಯಿಂದ ಸಾಕಷ್ಟು ವಿದೇಶಿ ವಿನಿಮಯವು ಉಳಿಯುತ್ತದೆ ಎಂದು ಹೇಳಿದ್ದಾರೆ. ಈ ಹೇಳಿಕೆಯಲ್ಲಿ ತಪ್ಪೇನಿದೆ? ಈ ಹೇಳಿಕೆಯನ್ನು ಮಾರುಕಟ್ಟೆ ತಜ್ಞರು, ಆಭರಣಗಳ ತಯಾರಕರು ಸ್ವಾಗತಿಸಿದ್ದಾರೆ. ಅಗತ್ಯವಿದ್ದಷ್ಟು ಚಿನ್ನಾಭರಣಗಳನ್ನು ಖರೀದಿಸಿ ಎಂಬ ಹೇಳಿಕೆಯಲ್ಲಿ ತಪ್ಪೇನಿದೆ. ಚಿನ್ನವನ್ನು ಖರೀದಿಸಬೇಡಿ ಎಂಬ ಪ್ರಧಾನಿಯವರ ಹೇಳಿಕೆಯನ್ನು ನಮ್ಮ ರಾಜ್ಯದ ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯನವರು: ಇದು ಯಾವ ಅಭಿವೃದ್ಧಿಯ ಸಂಕೇತ ಎಂದು ಪ್ರಶ್ನಿಸಿರುವುದು ಹಾಸ್ಯಾಸ್ಪದವಾಗಿದೆ. ಏಕೆ? ಅವರಿಗೆ ಚಿನ್ನಾಭರಣಗಳನ್ನು ಹೆಚ್ಚಿಗೆ ಖರೀದಿಸುವುದರಿಂದ ಅದರ ಬೆಲೆ ತಾನೇತಾನಾಗಿ ಹೆಚ್ಚಾಗುತ್ತದೆ ಎಂಬ ವಿಚಾರವು ತಿಳಿಯುವುದಿಲ್ಲವೆ?

ಆದರೆ 'ಮೊಸರಿನಲ್ಲಿ ಕಲ್ಲು ಹುಡುಕುವಂತೆ' ಪ್ರಧಾನಿಯವರ ಮಾತುಗಳು ಕೇವಲ ಮಾತುಗಳಲ್ಲ, ಇದು ಸರ್ಕಾರದ ವೈಫಲ್ಯಕ್ಕೆ ಹಿಡಿದ ಕನ್ನಡಿ ಎಂದು ಕಾಂಗ್ರೆಸ್ ಪಕ್ಷದ ನಾಯಕ ರಾಹುಲ್ ಗಾಂಧಿಯವರು 'ವಿದೇಶಗಳೊಂದಿಗೆ ರಾಜಿ ಮಾಡಿಕೊಂಡಿರುವ ಪ್ರಧಾನಿಯವರು ಏನನ್ನು ಸಾಧಿಸಲು ಹೊರಟಿದ್ದಾರೆ' ಎಂದು ಹೇಳಿ ತಮ್ಮ ಆಕ್ರೋಶವನ್ನು ಹೊರ ಹಾಕಿದ್ದಾರೆ. ಪ್ರಪಂಚದಲ್ಲಿಯೇ ಉತ್ತಮ ಪ್ರಧಾನಿ ಎಂದು ಹೆಸರು ಪಡೆದಿರುವ ಮೋದಿಯವರನ್ನು ಟೀಕಿಸುವುದೇ ಕಾಂಗ್ರೆಸ್ ಪಕ್ಷದ ಏಕೈಕ ಗುರಿಯಾಗಿದೆ. ದೇಶವನ್ನು ಸಮರ್ಥವಾಗಿ ನಡೆಸುವ ಶಕ್ತಿಯನ್ನು ಪ್ರಧಾನಿಯವರು ಕಳೆದುಕೊಂಡಿದ್ದಾರೆ ಎಂದೂ ಹೇಳಿರುವುದು ಪ್ರಮುಖ ಮಾಧ್ಯಮಗಳಲ್ಲಿ ಪ್ರಕಟವಾಗಿದೆ. ಇತ್ತೀಚಿನ ಚುನಾವಣೆಗಳಲ್ಲಿ ಹೀನಾಯವಾಗಿ ಸೋತು, ಮಕಾಡೆ ಮಲಗಿರುವ ಆ ಪಕ್ಷದ ನಾಯಕರಿಗೆ ಇನ್ನೂ ಬುದ್ಧಿ ಬಂದಿಲ್ಲ ಎಂಬುದೇ ವಿಪರ್ಯಾಸವಾಗಿದೆ!!


ಕಚ್ಚಾ ತೈಲ ಮತ್ತು ಎಲ್‌ಪಿಜಿಗೆ ಕೊರತೆಯ ವಿಷಯ ವಾಸ್ತವ ಸಂಗತಿಯಾಗಿದೆ. ದೇಶದ ಅಭಿವೃದ್ಧಿಗೆ ವಿದೇಶಿ ವಿನಿಮಯವನ್ನು ಉಳಿಸಲೇಬೇಕಾಗಿರುವುದು ಕಟು ವಾಸ್ತವ ಸಂಗತಿಯಾಗಿದೆ. 'ಬೆಲೆ ಏರಿಕೆಗೆ ಕಾರಣ ಯಾರು' ಎಂದು ಉಪ ಮುಖ್ಯ ಮಂತ್ರಿ ಡಿ.ಕೆ. ಶಿವಕುಮಾರ್ ಪ್ರಶ್ನಿಸಿದ್ದಾರೆ ! ಇಂಧನಗಳ ಬೆಲೆ ಏರಿಕೆಯು ಜಾಗತಿಕ ಸಮಸ್ಯೆಯಾಗಿದೆ ಎಂಬ ವಿಚಾರವು ಅವರಿಗೆ ತಿಳಿದಿಲ್ಲವೇ? ಇಂತಹ ಪ್ರಮುಖ ವಿಷಯಗಳ ಬಗ್ಗೆ ಬೇಜವಾಬ್ದಾರಿ ಹೇಳಿಕೆಗಳನ್ನು ಕೊಡುವುದರ ಬದಲು ರಾಜ್ಯದಲ್ಲಿ ಇರುವ ಸಮಸ್ಯೆಗಳ ಬಗ್ಗೆ ಗಮನಹರಿಸುವುದು ಒಳಿತು.

–ಬೇಲೂರು ದ.ಶಂ. ಪ್ರಕಾಶ್, ಮೈಸೂರು

ಅಮೂಲ್ಯ ನೆನಪುಗಳ ಫ್ರೇಂ....

–ಆರ್.ಜಿ.ಸಿಂಗ್
ಕಾರ್ಯದರ್ಶಿ, ರಾಮಸನ್ಸ್ ಕಲಾ ಪ್ರತಿಷ್ಠಾನ





1903ರ ಜನವರಿ 1ರಂದು ನಡೆದ ದೆಹಲಿ ಪಟ್ಟಾಭಿಷೇಕ ದರ್ಬಾರ್, ಆ ಕಾಲದ ವಸಾಹತುಶಾಹಿ ಆಡಳಿತದ ಪರಮಾಧಿಕಾರದ ಘೋಷಣೆಯಂತಿತ್ತು. ಭಾರತದ ಅಂದಿನ ಸಾಮ್ರಾಟ ಎಡ್ವರ್ಡ್ VII ಮತ್ತು ರಾಣಿ ಅಲೆಕ್ಸಾಂಡ್ರಾ ಅವರ ಪಟ್ಟಾಭಿಷೇಕಕ್ಕಾಗಿ ದೆಹಲಿಯಲ್ಲಿ ಈ ದರ್ಬಾರ್ ನಡೆಸಲಾಯಿತು. 1904ರಲ್ಲಿ ಈ ದರ್ಬಾರ್ ಸ್ಮರಣಾರ್ಥವಾಗಿ 250 ಪ್ರತಿಗಳ ವಿಶೇಷ ಸಂಪುಟ ಪ್ರಕಟಿಸಲಾಯಿತು.

ಸದರಿ ಸಂಪುಟದಲ್ಲಿದ್ದ ಹಲವು ಭಾವಚಿತ್ರಗಳ ಪೈಕಿ ಬೆಂಗಳೂರಿನ ಬಾರ್ಟನ್, ಸನ್ ಮತ್ತು ಕಂಪನಿಯಿಂದ ತೆಗೆದ ಛಾಯಾಚಿತ್ರ ಆಧರಿಸಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಅಧಿಕೃತ ಭಾವಚಿತ್ರವನ್ನು ಇಲ್ಲಿ ಮರು ಮುದ್ರಿಸಲಾಗಿದೆ. ಈ ಜನಪ್ರಿಯ ಛಾಯಾಚಿತ್ರವನ್ನು ನಂತರ ಹಲವು ತೈಲಚಿತ್ರಗಳ ಮಾದರಿಯಾಗಿ ಬಳಸಲಾಗಿದ್ದು, ಇಲ್ಲಿ ಪ್ರಕಟಿಸಲಾದ ಚಿತ್ರವು ಅರಮನೆ ಕಲಾವಿದ ಕೆ.ಕೇಶವಯ್ಯ ಅವರ ರಚನೆಯಾಗಿದೆ.

ಚಿತ್ರಗಳಲ್ಲಿ ಹತ್ತೊಂಬತ್ತು ವರ್ಷದ ಸುಂದರ ಯುವಕರಾದ ಮಹಾರಾಜ ನಾಲ್ವಡಿಯವರು ಸಾಲ್ಮನ್ ಪಿಂಕ್ ಬಣ್ಣದ ರೇಷ್ಮೆ ಜಾಕ್ವಾರ್ಡ್ ಕೋಟ್ ಅನ್ನು ಧರಿಸಿದ್ದಾರೆ. ಅವರು ಯುರೋಪಿಯನ್ ಶೈಲಿಯ ಆಭರಣಗಳಿಂದ ಅಲಂಕರಿಸಲ್ಪಟ್ಟಿದ್ದು, ಇದು ಭಾರತೀಯ ರಾಜ ಮನೆತನದವರಲ್ಲಿ ಅಂದು ಜನಪ್ರಿಯವಾಗಿತ್ತು.

ನಾಲ್ವಡಿಯವರು ಧರಿಸಿರುವ ರಿವಿಯರ್ ಹಾರದ ವಿಶೇಷ ವಿನ್ಯಾಸವು ಮೆರಗುಗೊಳಿಸಿರುವುದನ್ನು ಕಾಣಬಹುದು. ಅವರ ಪೇಟದ ಮಧ್ಯದಲ್ಲಿ ವೃತ್ತಾಕಾರದ ಯುರೋಪಿಯನ್ ಶೈಲಿಯ ಆಭರಣಗಳು ಇವೆ. ಅವುಗಳನ್ನು ವಿಶಿಷ್ಟವಾದ ಭಾರತೀಯ ಶೈಲಿಯ ಅಡ್ಡಪಟ್ಟಿ ಮತ್ತು ಅಗಲ, ದೃಢವಾದ ಹೊಂದಿಕೊಳ್ಳುವ ಚಿನ್ನದ ಬೆಲ್ಟ್ ಜೊತೆಗೆ ಮೈಸೂರು ರಾಜ ಲಾಂಛನ ಹೊಂದಿಸಿರುವುದನ್ನು ಕಾಣಬಹುದು. ಇಲ್ಲಿ ಚಿತ್ರಿಸಿದ ಛಾಯಾಚಿತ್ರವು ಚೋಕರ್ ವಜ್ರಗಳು, ಕತ್ತರಿಸಿದ ಪಚ್ಚೆಗಳು, ಹನಿ ಮುತ್ತುಗಳನ್ನು ಒಳಗೊಂಡಿದೆ ಎಂಬುದು ಕಾಣುತ್ತಿದೆ. ಇಲ್ಲಿನ ಅವರ ಶಾಂತಚಿತ್ತ ಮುಖಭಾವವು ಹದಿಹರೆಯದಿಂದ ಇತ್ತೀಚೆಗೆ ದಾಟಿದ ಯುವಕರು ಎಂಬುದನ್ನು ಪ್ರತಿಬಿಂಬಿಸುತ್ತಿದ್ದು, ಜೊತೆಗೆ ಅವರು ಕೇವಲ ಆರು ತಿಂಗಳ ಹಿಂದೆಯಷ್ಟೇ ಆಡಳಿತ ಚುಕ್ಕಾಣಿ ಹಿಡಿದಿದ್ದಾರೆ ಎಂಬ ಸಂಗತಿಗೆ ಬದಲು ಅವರೊಬ್ಬ ಅನುಭವಿಯಂತೆ ಕಂಡುಬರುವುದನ್ನು ಕಾಣಬಹುದು.



ಡಾ. ಹೆಚ್.ವಿ. ನಾಗರಾಜ ರಾವ್
ಮೈಸೂರು.

ಸಂಸ್ಕೃತಿ ಚಿಂತನಾ

ಬಾಳೊಂದು ಗಾಳಿಪಟ ಮುದ್ದುರಾಮ

ಮನುಷ್ಯನ ಬಾಳು ಗಾಳಿಪಟದಂತೆ. ಗಾಳಿ ಸರಿಯಾಗಿ ಬೀಸಿದರೆ ಮೇಲೆ ಮೇಲೆ ಏರುತ್ತದೆ. ಆಕಾಶದಲ್ಲಿ ಯಥೇಚ್ಛವಾಗಿ ಹಾರಾಡುತ್ತದೆ. ತನಗೆ ಸಮಾನರಾರೆಂದು ಕೇಳುತ್ತಾ ಮೆರೆಯುತ್ತದೆ. ಆದರೆ ಗಾಳಿಯ ವೇಗ ಕಡಿಮೆಯಾದಾಗ ವೇಗದಿಂದ ಕೆಳಗೆ ಬೀಳುತ್ತದೆ. ಎಷ್ಟೋ ಜನರನ್ನು ನೋಡಿದಾಗ 'ಹಾಗಿದ್ದವರು ಹಿಗಾದರೆ! ಪಾಪ' ಎಂದು ಜನರು ಉದ್ಗರಿಸುವುದುಂಟು. ನೆನ್ನೆ ರಾಜ್ಯದ ಮುಖ್ಯಮಂತ್ರಿ ಯಾಗಿದ್ದವರು. ಇಂದು ಶೂನ್ಯ, ಸಾಮಾನ್ಯ ಶಾಸಕರೂ ಅಲ್ಲ. ಅದೇ ರೀತಿಯಾಗಿ ಕೆಳಗಿದ್ದವರೂ ಮೇಲೆ ಏರಿದ್ದಾರೆ. ಈ ಏರಾಟ, ತೂರಾಟ, ಹಾರಾಟ, ಪರದಾಟ ಎಲ್ಲವನ್ನೂ ನೋಡಿದ ಮುದ್ದುರಾಮ ನುಡಿದ–

ಯಾವುದಿಳಿವುದೋ ಇಂದು ಮೇಲೇರುವುದು ನಾಳೆ
ಮೇಲೇರಿದುದು ಮತ್ತೆ ಬೀಳುವುದು ಕೆಳಗೆ
ನಿಲ್ಲದೋ ಅಂಬರದಿ ಗಾಳಿಪಟ ಒಂದೆಡೆಗೆ
ಬಾಳೊಂದು ಗಾಳಿಪಟ ಮುದ್ದುರಾಮ

ಇಳಿದಿದ್ದು ನೆಲದ ಮೇಲೆ ಬಿದ್ದಿತೆಂದು ಅಳಬೇಕಾಗಿಲ್ಲ. ಮತ್ತೆ ಗಾಳಿ ಬೀಸಿದಾಗ ಹಾರಿಸಿದರೆ ಅದೇ ಗಾಳಿಪಟ ಮುಗಿಲಿನಲ್ಲಿ ತೇಲಾಡಬಲ್ಲದು. ಒಂದು ಪಂದ್ಯದಲ್ಲಿ ಸೊನ್ನೆ ಓಟ ಗಳಿಸಿದವರು ಮತ್ತೊಂದು ಪಂದ್ಯದಲ್ಲಿ ಶತಕ ವೀರರಾದುದನ್ನು ನಾವು ಕಂಡಿಲ್ಲವೆ? ಗಾಳಿಪಟ ಆಕಾಶದಲ್ಲಿ ಒಂದೇ ಕಡೆ ನಿಲ್ಲದು. ಮೇಲೇರಿ ಕೆಳಗೆ ಬೀಳುವುದು, ಕೆಳಗಿಳಿದು ಮೇಲೇರುವುದು ಇದನ್ನೇ ಕಾಳಿದಾಸನು ಮೇಘದೂತದಲ್ಲಿ–

'ಕಸ್ಯಾತ್ಯಂತಂ ಸುಖಮುಪನತಂ ದುಃಖಮೇಕಾಂತತೋವಾ
ನೀಚೈರ್ಗಚ್ಛತ್ಯುಪರಿ ಚ ದಶಾ ಚಕ್ರ ನೇಮಿಕ್ರಮೇಣ'

ಎಂದು ಹೇಳಿದ್ದಾನೆ. ಯಾರಿಗೆ ತಾನೆ ಸುಖವಾಗಲಿ ದುಃಖವಾಗಲಿ ಸದಾ ಇದ್ದೀತು? ಮನುಷ್ಯನ ಸ್ಥಿತಿ ಬಂಡಿಯ ಚಕ್ರದ ಪಟ್ಟಿಯಂತೆ ಮೇಲೆ ಹೋಗುತ್ತದೆ, ಕೆಳಗೆ ಇಳಿಯುತ್ತದೆ – ಎಂದು ಅವನ ಮಾತಿನ ಅರ್ಥ.

ಚಕ್ರದ ಒಂದು ಭಾಗ ಮೇಲಿರುವಾಗ ಇನ್ನೊಂದು ಭಾಗ ಕೆಳಗೆ ಇರುವುದು ಅನಿವಾರ್ಯ. ಆದರೆ ಚಕ್ರ ಎಂದ ಮೇಲೆ ಅದು ತಿರುಗಲೇಬೇಕು. ಆಗ ಮೇಲಿದ್ದ ಅರ್ಧ ಕೆಳಗೆ, ಕೆಳಗಿದ್ದ ಅರ್ಧ ಮೇಲೆ. ಆದ್ದರಿಂದ ಸೋತವರು ನಿರಾಶರಾಗಬಾರದು, ಗೆದ್ದವರು ಗರ್ವಪಡಬಾರದು ಎಂಬುದು ಮುದ್ದುರಾಮನ ಆಶಯ. ಹೀಗಿದ್ದರೂ ಜೀವನದಲ್ಲಿ ಒಳ್ಳೆಯದು ಬಂದಾಗ ಮನುಷ್ಯ ಹಿಗ್ಗುತ್ತಾನೆ, ಕೆಟ್ಟದ್ದು ಬಂದಾಗ ಕುಗ್ಗುತ್ತಾನೆ. ಅವನನ್ನು ಕಂಡು ಮುದ್ದುರಾಮ ನುಡಿಯುತ್ತಾನೆ–

ಬಂದಾಗ ಸಿರಿಭೋಗ, ಕಳೆದಾಗ ಉದ್ವೇಗ
ಗುಣಿಸುವಿಕೆ ಆಮೋದ ವಿಭಜನೆಯೆ ನೋವು.
ಸಂಕಲನದಂತೆ ಇದೆ ಬಾಳಿನಲಿ ಕಳೆಯುವಿಕೆ
ಗಣಿತ ತೂಗುಯ್ಯಾಲೆ ಮುದ್ದುರಾಮ.

ಐಶ್ವರ್ಯ, ಧನ, ಸಂಪತ್ತು ಬಂದಾಗ ಸಿರಿವಂತಿಕೆಯ ಭೋಗ, ಸುಪ್ಪತ್ತಿಗೆಯಲ್ಲಿ ಶಯನ, ಅದು ಹೋದಾಗ ಮನಸ್ಸಿಗೆ ಉದ್ವೇಗ, ಅಶಾಂತಿ ಕೋಪ.

ಗುಣಾಕಾರ ಮಾಡಿದಾಗ ನಾಲ್ಕು ನಲವತ್ತಾಗುತ್ತದೆ, ನಾನೂರಾಗುತ್ತದೆ. ಆಗ ಆಮೋದ, ಹರ್ಷ, ಆನಂದ, ಆದರೆ ವಿಭಜನೆ ಮಾಡಿದಾಗ, ಭಾಗಾಕಾರ ಮಾಡಿದಾಗ, ಶೇಷ ಸಣ್ಣ ಸಂಖ್ಯೆ ಅಥವಾ ಸೊನ್ನೆ. ಅಯ್ಯೋ, ಮಾಡಿದ್ದೆಲ್ಲ ಶೂನ್ಯವಾಯಿತಲ್ಲ ಎಂದು ನೋವು. ಸಂಕಲನ ಎಂದರೆ ಕೂಡುವಿಕೆ. ನಾಲ್ಕಕ್ಕೆ ನಾಲ್ಕನ್ನು ಕೂಡಿದರೆ ಎಂಟಾಯಿತು ಎಂದು ಖುಷಿಯೋ ಖುಷಿ. ಆದರೆ ಕೂಡುವಿಕೆ ಇರುವಂತೆ ಕಳೆಯುವಿಕೆಯೂ ಇದೆ ಬಾಳಿನಲ್ಲಿ. ಆಗ ಎಲ್ಲ ಕಡಿಮೆಯಾಗುವುದೂ ಅನಿವಾರ್ಯ. ಇವೆಲ್ಲ ಎಲ್ಲರ ಬದುಕಿನಲ್ಲಿ ಇದ್ದೇ ಇವೆ. ಆದ್ದರಿಂದ ಬದುಕು ಗಣಿತದ ತೂಗುಯ್ಯಾಲೆ. ಉಯ್ಯಾಲೆ ಮುಂದೆ ಹೋಗಿ ಹಿಂದಿರುಗುವುದು ಅನಿವಾರ್ಯ ಎಂದು ಇಲ್ಲಿ ಮುದ್ದುರಾಮ ಗಣಿತದ ಪರಿಭಾಷೆಯನ್ನಿಟ್ಟು ತಿಳಿಸಿದ್ದಾನೆ.

ಬದುಕು ಎಷ್ಟು ಸುಂದರವಾದರೂ ಸಾಹಸಮಯವಾದರೂ ಅದಕ್ಕೆ ಕೊನೆ ಇದ್ದೇ ಇದೆ. ಎಷ್ಟು ದೊಡ್ಡ ಪ್ರಾಣಿಯಾದರೂ ಸಾಯುತ್ತದೆ, ಎಷ್ಟು ದೊಡ್ಡ ಮರವಾದರೂ ಉರುಳಿ ಬೀಳುತ್ತದೆ. ಹಾಗಿರುವಾಗ ಹುಲು ಮನುಜರ ಪಾಡೇನು? ನಾವು ಯಾವ ಲೆಕ್ಕ ಕಾಲ ಪುರುಷನಿಗೆ? 'ಕಾಲೋ ಜಗದ್‌ಭಕ್ಷಕಃ'. ಇದನ್ನು ಮುದ್ದುರಾಮ ತಿಳಿಯಾಗಿ ಹೇಳುತ್ತಾನೆ–

ಕಣ್ಣ ಮುಚ್ಚಲೆಬೇಕು ಒಂದಲ್ಲ ಒಂದು ದಿನ
ಮಣ್ಣಿನಲಿ ಒಂದಾಗಿ ಹೋಗಲೇಬೇಕು ।
ಒಂದೊಂದು ದಿನ ನಮಗೆ ಅವನ ಜೀವನದಾನ;
ಕಾಲ ನರಭಕ್ಷಕನೊ ಮುದ್ದುರಾಮ ॥

ರಾಜನಾಗಿರಲಿ, ಚಕ್ರವರ್ತಿ ಸಾರ್ವಭೌಮನಾಗಿರಲಿ, ಪಂಡಿತನಾಗಿರಲಿ, ವಿಶ್ವ ಗುರುವಾಗಿರಲಿ, ಜಗಜಟ್ಟಿಯೇ ಆಗಿರಲಿ, ಯೋಗಿರಾಜನಾಗಿರಲಿ, ಇಂದೋ ನಾಳೆಯೋ ಒಂದು ದಿನ ಕಣ್ಣ ಮುಚ್ಚಲೇಬೇಕು. ಅಲೆಕ್ಸಾಂಡರ್, ವಿಕ್ರಮಾದಿತ್ಯ, ಪಾಣಿನಿ, ಪತಂಜಲಿ ಎಲ್ಲರೂ ಸಾವಿಗೆ ಈಡಾದರು. ಮಣ್ಣಾದರು, ಬೂದಿಯಾದರು ಎಂಬುದು ಸತ್ಯ. ಅವರು ಸ್ವರ್ಗಕ್ಕೆ ಹೋದರು, ಬ್ರಹ್ಮೀಭೂತರಾದರು ಇತ್ಯಾದಿಗಳೆಲ್ಲ ಸಮಾಧಾನದ ಮಾತು ಅಷ್ಟೆ. ಆದ್ದರಿಂದ ಬದುಕಿದ್ದಾಗ ಒಂದೊಂದು ದಿನವೂ ಆ ಕಾಲ ಪುರುಷನು ಮಾಡಿದ ದಾನ ಅಷ್ಟೆ. ಆದುದರಿಂದ ಒಂದೊಂದು ದಿನವೂ ಅಮೂಲ್ಯವೆಂದು ಅದನ್ನು ಸಾರ್ಥಕಪಡಿಸಿಕೊಳ್ಳಲು ಪ್ರಯತ್ನಿಸಬೇಕು. ಕಾಳಿದಾಸನಂತೂ ಒಂದೊಂದು ಕ್ಷಣ ಬದುಕಿದ್ದರೂ ಅದನ್ನು ದೊಡ್ಡ ಲಾಭವೆಂದುಕೊಳ್ಳಬೇಕು ಎಂದಿದ್ದಾನೆ.

ಈ ಜಗತ್ತಿನ ವ್ಯವಹಾರವೆಲ್ಲ ವ್ಯಕ್ತಿಯ ದೃಷ್ಟಿಯಿಂದ ತಾತ್ಕಾಲಿಕ. ನಡೆಯುತ್ತಿದ್ದಾಗ ಗದ್ದಲವೋ ಗದ್ದಲ. ಆಮೇಲೆ ನೀರವ ಮೌನ. ಆ ವ್ಯಕ್ತಿ ಬದುಕಿದ್ದಾಗ ಎಷ್ಟೋ ಜನ ಬಂದರು, ಹೋದರು. ಅವರವರ ಕೆಲಸಗಳಿಗೆ ಅವನನ್ನು ಆಶ್ರಯಿಸಿದರು. ಅವನ ಕಾಲ ಮುಗಿದ ಮೇಲೆ ಅಲ್ಲಿ ಯಾರೂ ಇಲ್ಲ. ಇದನ್ನು ಮುದ್ದುರಾಮ ಹೇಳುತ್ತಾನೆ.

ಸಂತೆಯಲಿ ಮುಂಜಾನೆ ಜನ ಸೇರಿ ಗದ್ದಲವೊ
ಬೈಗಿನಲಿ ಯಾರಿಲ್ಲ ಮುಗಿದು ವ್ಯಾಪಾರ.
ಬಾಳ ವಹಿವಾಟಿನಲಿ ಅಂತೆ ಈ ಚಟುವಟಿಕೆ
ಸಂತೆ ಮಾಳವೊ ಬದುಕು ಮುದ್ದುರಾಮ.

ಸಂತೆ ಎಂಬ ಕನ್ನಡ ಪದವು ಸಂಸ್ಥಾ ಎಂಬ ಸಂಸ್ಕೃತ ಶಬ್ದದ ತದ್ಭವ. ವಾರದಲ್ಲಿ ಒಂದು ದಿನ ಹಲವಾರು ರೈತರು ಮತ್ತು ವ್ಯಾಪಾರಿಗಳು ತಮ್ಮ ಸರಕುಗಳನ್ನು ತಂದು ನಿರ್ದಿಷ್ಟ ಸ್ಥಳದಲ್ಲಿ ಮಾರಾಟ ಮಾಡುತ್ತಿದ್ದ ವ್ಯವಸ್ಥೆಯೇ ಸಂತೆ. ಇದಕ್ಕೆ ನೂರಾರು ವರ್ಷಗಳ ಇತಿಹಾಸವಿದೆ. ಹನ್ನೆರಡನೆಯ ಶತಮಾನದಲ್ಲಿ ಶರಣರು 'ಸಂತೆಯೊಳಗೊಂದು ಮನೆಯ ಮಾಡಿ ಗದ್ದಲಕ್ಕೆ ಅಂಜಿದೊಡೆಂತಯ್ಯ' ಎಂದು ವಚನಗಳಲ್ಲಿ ಸಂತೆ ಎಂಬ ಪದವನ್ನುಪಯೋಗಿಸಿದ್ದಾರೆ. ನಾನು ಹುಟ್ಟಿದ ಹಳ್ಳಿಯಲ್ಲಿಯೂ ಭಾನುವಾರದ ಸಂತೆ ಸೇರುತ್ತಿತ್ತು. ಗ್ರಾಮದ ಚಿಕ್ಕ ಹುಡುಗರಿಗೆ ಅದು ಸಂಭ್ರಮದ ಸನ್ನಿವೇಶ. ಸಂತೆಗೆ ಹೋಗಿ ಪೆಪ್ಪರ್‌ಮೆಂಟ್, ಬಲೂನು ಇತ್ಯಾದಿಗಳನ್ನು ಕೊಂಡುಕೊಳ್ಳುವ ಸಡಗರ.

ಮುದ್ದುರಾಮ ಹೇಳುತ್ತಾನೆ –ಬೆಳಗ್ಗೆ ಸಂತೆ ಸೇರಿದಾಗ ಜನರ ಗದ್ದಲ. ಕೊಳ್ಳುವ, ಮಾರುವ ಭರಾಟೆ. ಬೈಗಿನಲ್ಲಿ, ಅಂದರೆ ಸಂಜೆಯಲ್ಲಿ ವ್ಯಾಪಾರ ಮುಗಿದು ಸದ್ದೆಲ್ಲ ಅಡಗಿ ನಿಶ್ಯಬ್ಧತೆ. ಯಾವ ಜನರೂ ಆ ಜಾಗದಲ್ಲಿಲ್ಲ. ಬಾಳ ವಹಿವಾಟಿನಲ್ಲೂ ಅಷ್ಟೆ, ಬದುಕಿದ್ದಾಗ ಅನೇಕ ಜನರೊಡನೆ ನಾನಾ ವ್ಯವಹಾರ. ಬಂಧು-ಮಿತ್ರರ, ನೆರೆಹೊರೆಯವರ ಜೊತೆ ಮಾತು, ಹಾಸ್ಯ, ಕಲಹ ಇತ್ಯಾದಿ. ಬಾಳು ಮುಗಿದಾಗ ಎಲ್ಲ ಸ್ತಬ್ಧ. ಆದ್ದರಿಂದ ಬಾಳನ್ನು ಕವಿ ಸಂತೆಮಾಳಕ್ಕೆ, ಸಂತೆ ನಡೆಯುವ ಮೈದಾನಕ್ಕೆ ಹೋಲಿಸಿದ್ದಾರೆ.

ಸಂತೆಯಂತೆ ಈ ಬಾಳು ಸ್ವಲ್ಪ ಕಾಲದ್ದು, ನಶ್ವರ, ಅಶಾಶ್ವತ ಎಂಬುದು ಸತ್ಯವೇ. ಆದರೂ ಇದರ ಸವಿಯನ್ನು ಸವಿಯದೆ ಬಿಡಬಾರದು. ರಾಮ, ಕೃಷ್ಣ ಇತ್ಯಾದಿಗಳ ಬಾಳೂ ಕೆಲಕಾಲ ಮಾತ್ರ ಇದ್ದದ್ದು. ಅದರಲ್ಲೇ ಅವರು ಅದ್ಭುತಗಳನ್ನು ಸಾಧಿಸಿದರೆಂದು ಅವರನ್ನು ಇಂದೂ ಸ್ಮರಿಸುತ್ತೇವೆ. ಹಾಗೆ ಬಾಳಬೇಕು ಎಂಬುದು ಮುದ್ದುರಾಮನ ನಿಲುವು. ಅವನೆನ್ನುತ್ತಾನೆ–

ಲೋಕನಶ್ವರವೆಂದು, ಸಾವು ಕೊನೆಗಿದೆಯೆಂದು
ಹುಳಿಯಾಗಬೇಕಿಲ್ಲ ಅಧರದಲಿ ಮಾವು
ಇರುವಷ್ಟು ದಿನ ನಿನದು ಈ ಜಗದ ಲೀಲೆಯಲಿ
ಬಾಳೊಂದು ಮೆರವಣಿಗೆ ಮುದ್ದುರಾಮ ॥

ಜಗತ್ತು ನಶ್ವರ, ನಿಜ. ಪ್ರತಿಯೊಬ್ಬರಿಗೂ ಸಾವು ಕೊನೆಗಿದೆ, ನಿಜ. ಆದರೆ ಈ ಕಾರಣದಿಂದ ಬಾಯಲ್ಲಿ ಕಚ್ಚಿದ ಮಾವಿನ ಹಣ್ಣು ಹುಳಿ ಎನ್ನಬೇಕಾಗಿಲ್ಲ. ಇಲ್ಲಿ ಮಾವಿನಹಣ್ಣು ಉಪಲಕ್ಷಣ. ಬದುಕಿನ ಎಲ್ಲ ಸಿಹಿ ಕ್ಷಣಗಳಿಗೆ ಅದೊಂದು ಪ್ರತಿನಿಧಿ, ಉದಾಹರಣೆ.

ಒಂದೊಂದು ಕ್ಷಣದ ಸವಿಯೂ, ಅದು ಅಶಾಶ್ವತವಾದರೂ, ತ್ಯಾಜ್ಯವಲ್ಲ. ಅದನ್ನು ಅನುಭವಿಸಿ ಆನಂದಿಸಬೇಕು. ಈ ಜಗತ್ತಿನ ಲೀಲೆಯಲ್ಲಿ ಈ ದಿನ ನಿನ್ನದು. ದಿನವೆಂದರೆ ಕ್ಷಣಗಳ ಸರಣಿ. ಆ ಕ್ಷಣಗಳು ನಿನ್ನವು. ಅವುಗಳ ಕ್ಷಣಿಕತ್ವವನ್ನು ಮರೆತು ಅನುಭವಿಸಬೇಕು. ಪ್ರಪಂಚವನ್ನೇ ನಮ್ಮ ಅನುಭವ ಮಂಟಪವನ್ನಾಗಿ ಮಾಡಿಕೊಳ್ಳಬೇಕು – ಎಂದು ಮುದ್ದುರಾಮನ ಸಂದೇಶ.

ಅಂತರಂಗದೊಳಗೆ ಉಂಟಾಗುವ ಸಂತೋಷವೇ ದೊಡ್ಡದು, ಬಹಿರಂಗದ ಧನಕನಕವಲ್ಲ ಎಂದು ತಿಳಿಸುತ್ತಾನೆ ಮುದ್ದುರಾಮ–

ಸಾಧನೆಯ ಮೆಟ್ಟಲಿನ ತುದಿಯಲಿದೆ ಉತ್ಕರ್ಷ
ಒಳಮನದ ಸಂತಸವೆ ನಿಜದಿ ಅಭ್ಯುದಯ.
ಮರೆತೊಳಗಿ ಬರಿ ಹೊರಗ ಕಂಡರೆಲ್ಲಿದೆ ಶಾಂತಿ?
ಭಾವದಂತಿದೆ ಬದುಕು ಮುದ್ದುರಾಮ॥

ಸಿದ್ಧಿ ದೊರಕಬೇಕಾದರೆ ಸಾಧನೆಯ ಮೆಟ್ಟಲುಗಳನ್ನು ಏರಬೇಕು. ಎಷ್ಟೋ ಮೆಟ್ಟಲುಗಳ ತುದಿಯಲ್ಲಿ ಉತ್ಕರ್ಷ, ಅತಿಶಯ, excellence ಎಂಬ ಸಿದ್ಧಿ ಇರುವುದು. ಅದನ್ನು ತಲುಪಿದಾಗ ಒಳಗಿನ ಮನಸ್ಸಿಗೆ ಸಿಕ್ಕುವ ಸಂತೋಷವೇ ಸತ್ಯವಾದ ಅಭ್ಯುದಯ. ಒಳಗಿನ ಅಭ್ಯುದಯವನ್ನು ಮರೆತು ಕೇವಲ ಹೊರಗೆ ನೋಡುತ್ತಿದ್ದರೆ ಶಾಂತಿ ಎಲ್ಲಿದೆ? ಆ ಶಾಂತಿ ಎಂದೂ ದೊರಕುವುದಿಲ್ಲ. ಯದ್‌ಭಾವಂ ತದ್‌ಭವತಿ. ಭಾವನೆಯಂತೆಯೇ ಬದುಕು. ಬದುಕಿನಂತೆಯೇ ಭಾವನೆ. ಇವೆರಡರದು ಅವಿನಾಭಾವ ಸಂಬಂಧ.

ಮುದ್ದುರಾಮನ ಮಾತು ಕಿವಿಗಳಿಗೆ ಭೂಷಣವು
ಸದ್ದುಗದ್ದಲದನಿಯು ಕಿವಿಗೆ ನೋವು
ವಿದ್ಯೆ ಬೇಕಾದವರು ಮುದ್ದುರಾಮನ ಕವಿತೆ
ಬುದ್ಧಿಯಿಂದಲೇ ಓದಿ ಸಿದ್ಧರಾಗಿ.

ಪೆಟ್ರೋಲ್, ಡೀಸೆಲ್ ಮಿತ ಬಳಕೆ ಮಹತ್ವ ಅರಿಯದ ಕಾಂಗ್ರೆಸಿಗರು!

- ಮಾಜಿ ಸಿಎಂ, ಹಾಲಿ ಸಂಸದ ಬಸವರಾಜ ಬೊಮ್ಮಾಯಿ ಟೀಕೆ
- ದೇಶ ಭಕ್ತಿ, ತ್ಯಾಗದ ಅರಿವೇ ಇಲ್ಲದೆ ಟೀಕೆಗೆ ಆಕ್ಷೇಪ

ಬೆಂಗಳೂರು, ಮೇ 12(ಕೆಎಂಶಿ)–ದೇಶದ ಜನತೆ ಸ್ವಯಂ ಪ್ರೇರಿತರಾಗಿ ಪೆಟ್ರೋಲ್, ಡೀಸೆಲ್ ಬಳಕೆ ಕಡಿಮೆ ಮಾಡಲು ಸಲಹೆ ನೀಡಿರುವುದನ್ನು ದೇಶ ಭಕ್ತಿ, ತ್ಯಾಗ ಏನೆಂಬುದನ್ನು ಗೊತ್ತಿಲ್ಲದ ಕಾಂಗ್ರೆಸ್ ನಾಯಕರು ಟೀಕೆ ಮಾಡುತ್ತಿದ್ದಾರೆ ಎಂದು ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ ಇಂಧನ ಮಿತ ವ್ಯಯಕ್ಕೆ ಯಾವುದೇ ಕಡಿವಾಣ ಹಾಕಿಲ್ಲ. ದೇಶದ ಒಬ್ಬ ನಾಯಕನಾಗಿ ನೈತಿಕತೆ ಹಿನ್ನೆಲೆಯಲ್ಲಿ ಕರೆ ಕೊಟ್ಟಿದ್ದಾರೆ. ಆದರೆ, ಕಾಂಗ್ರೆಸ್‌ನವರು ಬೇರೆ ರೀತಿ ವ್ಯಾಖ್ಯಾನ ಮಾಡುತ್ತಿದ್ದಾರೆ ಎಂದು ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಾಂಗ್ರೆಸ್ ನಾಯಕರ ಹೇಳಿಕೆಗಳು ದೇಶದ ಹಿತಾಸಕ್ತಿಗೆ ವಿರುದ್ಧವಾಗಿವೆ. ಇದು ಜವಾಬ್ದಾರಿಯುತ ಪಕ್ಷದ ಹೇಳಿಕೆಯಲ್ಲ, ಅವರಿಗೆ ನಾಚಿಕೆ ಆಗಬೇಕು ಎಂದರು.



ಬಸವರಾಜ ಬೊಮ್ಮಾಯಿ

ಅಮೆರಿಕ-ಇಸ್ರೇಲ್ ಮತ್ತು ಇರಾನ್ ನಡುವಿನ ಯುದ್ಧದಿಂದಾಗಿ ಹಲವು ರಾಷ್ಟ್ರಗಳು ಆರ್ಥಿಕ ಸಂಕಷ್ಟ ಎದುರಿಸುತ್ತಿರುವ ಸಮಯದಲ್ಲಿ ಪ್ರಧಾನಿ ನರೇಂದ್ರ ಮೋದಿ ಪೆಟ್ರೋಲ್, ಡೀಸೆಲ್, ಅಡುಗೆ ಎಣ್ಣೆ ಮಿತವ್ಯಯ ಬಳಕೆಗೆ ಮಾಡಿರುವ ಮನವಿಗೆ ದೇಶದ ಪ್ರಜೆಯಾಗಿ ಮಾಡ ಬೇಕಾದ ಕರ್ತವ್ಯವಾಗಿದೆ. ಲಾಲ್ ಬಹದ್ದೂರ್ ಶಾಸ್ತ್ರಿ ಪ್ರಧಾನಿ ಆಗಿದ್ದಾಗ ದೇಶದಲ್ಲಿ ಆಹಾರದ ಕೊರತೆ ಉಂಟಾಗಿದ್ದರಿಂದ ಒಂದು ದಿನ ಉಪವಾಸ ಮಾಡಲು ಸಲಹೆ ನೀಡಿದ್ದರು. ಪ್ರಧಾನಿ ನರೇಂದ್ರ ಮೋದಿ ಶ್ರೀಮಂತರಿಗೆ ಗ್ಯಾಸ್ ಸಬ್ಸಿಡಿ ಬಿಡುವಂತೆ ಈ ಹಿಂದೆ ಮನವಿ ಮಾಡಿದ್ದರು, ಆಗ 6 ಕೋಟಿ ಗ್ರಾಹಕರು ಸಬ್ಸಿಡಿ ಬಿಟ್ಟಿದ್ದರು, ಕೋವಿಡ್ ಸಂದರ್ಭದಲ್ಲೂ ಹಲವು ಸಲಹೆಗಳನ್ನು ನೀಡಿದ್ದರು, ದೇಶದ ಜನತೆ ಸಲಹೆಗಳನ್ನು ಪಾಲಿಸಿದ್ದರಿಂದ ಮಹಾಮಾರಿ ಕೋವಿಡ್ ಎದುರಿಸಲು ಸಾಧ್ಯವಾಯಿತು. ಪಿ.ಚಿದಂಬರಂ ಹಣಕಾಸು ಸಚಿವರಾಗಿದ್ದಾಗ ಬಂಗಾರದ ಬಗ್ಗೆ ವ್ಯಾಮೋಹ ಬೇಡ ಎಂದಿದ್ದರು. ಹಿಂದೆ ಇರಾನ್-ಇರಾಕ್ ನಡುವೆ ಯುದ್ಧ ಆರಂಭವಾದಾಗ ಎರಡೇ ದಿನದಲ್ಲಿ ಪೆಟ್ರೋಲ್ ಬಂಕ್‌ಗಳ ಮುಂದೆ ಕಿಲೋ ಮೀಟರ್‌ಗಟ್ಟಲೆ ಸಾಲು ಕಂಡುಬಂದಿತ್ತು. ಆದರೆ, ಈಗ ಯುದ್ಧ ಶುರುವಾಗಿ ಎರಡು ತಿಂಗಳಾದರೂ ಅಂತಹ ಪರಿಸ್ಥಿತಿ ಇಲ್ಲ ಎಂದರು. ಪ್ರಧಾನಮಂತ್ರಿ ನರೇಂದ್ರ ಮೋದಿ ಬೆಂಗಳೂರಿಗೆ ಬಂದಾಗ ಎಸ್‌ಒಪಿ ಜಾರಿ ಮಾಡುವಲ್ಲಿ ರಾಜ್ಯ ಸರ್ಕಾರ ವಿಫಲವಾಗಿದೆ, ಇದರ ಹೊಣೆ ಯಾರು ಎಂಬುದನ್ನು ತಿಳಿದುಕೊಳ್ಳುವ ಆಸಕ್ತಿ ತೋರುತ್ತಿಲ್ಲ. ಈ ಬಗ್ಗೆ ಸೂಕ್ತ ತನಿಖೆ ಆಗಬೇಕು ಎಂದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಒಂದೇ ನಂಬರ್‌ನ ಎರಡು ಬುಲೆಟ್; ಮೈಸೂರು ಆರ್‌ಟಿಓ ಅಧಿಕಾರಿಗಳಿಗೆ ತಲೆನೋವು!



ಮೈಸೂರು, ಮೇ 12(ಎಂಕೆ)– ಮೈಸೂರಲ್ಲಿ ಒಂದೇ ನಂಬರ್‌ನ ಎರಡು ರಾಯಲ್ ಎನ್‌ಫೀಲ್ಡ್ ಬುಲೆಟ್‌ಗಳು ಪ್ರತ್ಯಕ್ಷವಾಗಿದ್ದು, ಅಸಲಿ ದಾಖಲೆಗಳ ಪತ್ತೆಗೆ ಆರ್‌ಟಿಓ ಅಧಿಕಾರಿಗಳು ಹರಸಾಹಸಪಡುವಂತಾಗಿದೆ...!

ನಗರದ ಬಲ್ಲಾಳ್ ವೃತ್ತದ ಸಮೀಪದಲ್ಲಿರುವ ಆರ್‌ಟಿಓ ಪಶ್ಚಿಮ (ಕೆ.ಎ. 09) ಕಚೇರಿ ಎದುರು ಕಳೆದ 9 ತಿಂಗಳಿಂದ ನಿಂತಿರುವ ಒಂದೇ ನಂಬರ್‌ನ ಎರಡು ಬುಲೆಟ್‌ಗಳಲ್ಲಿ ಯಾವುದರ ನಂಬರ್ ಅಸಲಿ–ನಕಲಿ ಎಂಬುದು ನಿಷ್ಕರ್ಷೆ ಆಗದೆ ತುಕ್ಕು ಹಿಡಿಯುತ್ತಿವೆ.

'ಎಂಇಜಿ 2261' ನಂಬರ್ ಇರುವ ಒಂದೇ ಮಾಡಲ್‌ನ ಎರಡು ಬುಲೆಟ್‌ಗಳಲ್ಲಿ ಒಂದು ಮೈಸೂರಿನ ಜಯಂತ್ ಎಂಬುವರ ಹೆಸರಿನಲ್ಲಿದ್ದರೆ, ಮತ್ತೊಂದು ಆಂಧ್ರ ಮೂಲದ ಸೈನಿಕರೊಬ್ಬರ ಹೆಸರಿನಲ್ಲಿದೆ ಎನ್ನಲಾಗುತ್ತಿದೆ.

ಆಂಧ್ರ ಮೂಲದ ಸೈನಿಕರು ಮೈಸೂರಿನಲ್ಲಿ ದೂರು ನೀಡಿದ್ದರಿಂದ ಎರಡು ಬೈಕ್‌ಗಳನ್ನು ವಶಕ್ಕೆ ಪಡೆದಿರುವ ಆರ್‌ಟಿಓ ಅಧಿಕಾರಿಗಳು, ಎರಡು ಬುಲೆಟ್‌ಗಳು ಒಂದೇ ನಂಬರ್ ಹೊಂದಲು ಹೇಗೆ ಸಾಧ್ಯ ಎಂಬುದನ್ನು ಪತ್ತೆ ಹಚ್ಚಲು ಹರಸಾಹಸಪಡುವಂತಾಗಿದೆ.

ಈ ಕುರಿತು ಮಾಧ್ಯಮಗಳಿಗೆ ಪ್ರತಿಕ್ರಿಯಿಸಿರುವ ಆರ್‌ಟಿಓ ಅಧಿಕಾರಿಗಳು, ದೂರು ನೀಡಿದ್ದ ಮೇರೆಗೆ ತಪಾಸಣೆ ನಡೆಸಿ, ಎರಡೂ ಬುಲೆಟ್‌ಗಳನ್ನು ವಶಕ್ಕೆ ಪಡೆದುಕೊಳ್ಳಲಾಯಿತು. ಈ ಎರಡೂ ಬೈಕ್‌ಗಳ ಇಂಜಿನ್ ನಂಬರ್‌ಗಳನ್ನು ಪಡೆದು ರಾಯಲ್ ಎನ್‌ಫೀಲ್ಡ್ ಕಂಪನಿಯೊಂದಿಗೆ ಪತ್ರ ವ್ಯವಹಾರ ನಡೆಸಲಾಗಿದೆ. ಒಂದೆರಡು ತಿಂಗಳಲ್ಲಿ ಯಾವ ಬುಲೆಟ್‌ನ ನಂಬರ್ ಅಸಲಿ ಎಂಬುದು ತಿಳಿಯಲಿದೆ ಎಂದರು.

ಈ ಎರಡು 1994ರಲ್ಲಿ ತಯಾರಾಗಿವೆ. 6ನೇ ವ್ಯಕ್ತಿಗೆ ಮಾರಾಟವಾಗಿವೆ. ಎರಡು ಬುಲೆಟ್‌ನ ಮಾಲೀಕರು ತನಿಖೆಗೆ ಸಹಕಾರ ನೀಡುತ್ತೇವೆಂದು ಅಫಿಡವಿಟ್ ಬರೆದುಕೊಟ್ಟು ತೆಗೆದುಕೊಂಡು ಹೋಗಬಹುದು. ಇಲ್ಲವೇ ತನಿಖೆ ಪೂರ್ಣಗೊಳ್ಳುವವರೆಗೆ ನಮ್ಮ ವಶದಲ್ಲೇ ಇಟ್ಟಿರುತ್ತೇವೆ ಎಂದು ತಿಳಿಸಿದರು.

ಮೂತ್ರ ವಿಸರ್ಜನೆ ತಡೆ ಮಾರ್ಗೋಪಾಯಕ್ಕೇ ಸೆಡ್ಡು ಹೊಡೆದ ಮಾನಗೇಡಿ!

ಮಿರರ್ ಮಾದರಿ ಕಾಂಪೌಂಡ್ ಎದುರೇ ಮೂತ್ರ ಮಾಡಿ ಉಗಿಸಿಕೊಂಡ ಅನಾಗರಿಕ



ಮಿರರ್ ಮಾದರಿ ತಡೆಗೋಡೆ ಎದುರು ಮೂತ್ರ ವಿಸರ್ಜನೆ ಮಾಡುತ್ತಿರುವ ವ್ಯಕ್ತಿ.

ಮೈಸೂರು,ಮೇ 12(ಪಿಎಂ)– ಮೂತ್ರ ವಿಸರ್ಜನೆ ತಡೆ ಮಾರ್ಗೋಪಾಯಕ್ಕೆ ಸೆಡ್ಡು ಹೊಡೆದ ಮಾನಗೇಡಿ! ಹೌದು, ಮುಜುಗರವಿಲ್ಲದೇ ಮಿರರ್ ಮಾದರಿ ಕಾಂಪೌಂಡ್ ಎದುರೇ ಮೂತ್ರ ಮಾಡಿದ ಅನಾಗರಿಕನಿಗೆ ಸ್ಥಳದಲ್ಲಿದ್ದವರು ಉಗಿದು ಉಪ್ಪಿನಕಾಯಿ ಹಾಕಿದ್ದಾರೆ!!

ಮೈಸೂರಿನ ಸಬ್ ಅರ್ಬನ್ ಬಸ್ ನಿಲ್ದಾಣದ ಎದುರು ಬಿಎನ್ ರಸ್ತೆಯಲ್ಲಿ ದೊಡ್ಡ ಚರಂಡಿ ಪಕ್ಕದಲ್ಲಿ (ರಸ್ತೆಬದಿ) ಹಲವು ಪುರುಷರು ಮೂತ್ರ ವಿಸರ್ಜಿಸಿ ತಮ್ಮ ಮತಿಗೇಡಿತನ ಪ್ರದರ್ಶಿಸುತ್ತಿದ್ದರು. ಪಕ್ಕದಲ್ಲೇ ಸಾರ್ವಜನಿಕ ಶೌಚಾಲಯವಿದ್ದರೂ ಬಯಲಲ್ಲೇ ಮೂತ್ರ ಮಾಡಿ ಇಲ್ಲಿ ಸಂಚರಿಸುವ ಮಹಿಳೆಯರು, ಮಕ್ಕಳು ಮುಜುಗರ ಅನುಭವಿಸುವಂತೆ ಮಾಡುತ್ತಿದ್ದರು.

ಈ ಅವಿವೇಕತನಕ್ಕೆ ತಡೆಯೊಡ್ಡಲು ಮೈಸೂರು ಮಹಾಪಾಲಿಕೆ ಇಲ್ಲಿ ಮೂತ್ರ ವಿಸರ್ಜಿಸಿದರೆ ದಂಡ ಹಾಕುವ ಎಚ್ಚರಿಕೆ ಫಲಕ ಸಹ ಅಳವಡಿಸಿತ್ತು ಅದಕ್ಕೂ ಜಗ್ಗದೇ ಕೆಲ ಮತಿಗೇಡಿ ಪುರುಷರು ತಮ್ಮ ಚಾಳಿ ಮುಂದುವರೆಸಿದ್ದರು. ಹೇಗಾದರೂ ಮಾಡಿ ಇದಕ್ಕೆ ತಡೆಯೊಡ್ಡಬೇಕೆಂದು ಚಿಂತಿಸಿದ ಪಾಲಿಕೆ ಹಾಗೂ ವಾಣಿವಿಲಾಸ ನೀರು ಸರಬರಾಜು ಕಾರ್ಯಾಗಾರವು ವಿನೂತನ ಮಾರ್ಗೋಪಾಯ ಹುಡುಕಿತು. ಅದೇ ಪಾಲಿಶ್ ಮಾಡಿರುವ ರಿಫ್ಲೆಕ್ಟಿವ್ ಸ್ಟೈನ್‌ಲೆಸ್‌ಸ್ಟೀಲ್ ಶೀಟ್‌ನ ಮಿರರ್ (ಕನ್ನಡಿ) ಮಾದರಿ ತಡೆಗೋಡೆ ಅಳವಡಿಕೆ ಕ್ರಮವಾಗಿದೆ ಸದರಿ ತಡೆಗೋಡೆಯು ಕನ್ನಡಿ ಮಾದರಿಯಲ್ಲಿ ಇರುವ ಹಿನ್ನೆಲೆಯಲ್ಲಿ ಪ್ರತಿಬಿಂಬ ಕಾರಣಲಿದ್ದು, ಈ ಕಾರಣಕ್ಕೆ ಮಾನಕ್ಕೆ ಅಂಜಿ ಯಾರೂ ಇಲ್ಲಿ ಮೂತ್ರ ವಿಸರ್ಜನೆ ಮಾಡದಂತಹ ವಾತಾವರಣ ನಿರ್ಮಾಣವಾಗಿತ್ತು. ಈ ನಡುವೆ ವ್ಯಕ್ತಿಯೊಬ್ಬ ಕನ್ನಡಿ ಮಾದರಿ ತಡೆಗೋಡೆಯಲ್ಲಿ ತನ್ನ ಪ್ರತಿಬಿಂಬ ಕಾಣು ವುದನ್ನು ಲೆಕ್ಕಿಸದೇ ಅಲ್ಲೇ ಮೂತ್ರ ವಿಸರ್ಜನೆ ಮಾಡುತ್ತಿದ್ದ ಘಟನೆ ನಡೆದಿದೆ. ಆಗ ಸ್ಥಳದಲ್ಲಿದ್ದ ಪ್ರಜ್ಞಾವಂತ ನಾಗರಿಕರು ಆತನಿಗೆ ಉಗಿದು ಉಪ್ಪಿನಕಾಯಿ ಹಾಕಿದ್ದು, ಆ ಬಳಿಕ ಆತ ಸ್ಥಳದಿಂದ ಕಾಲ್ಕಿತ್ತಿದ್ದಾನೆ.

ಅಂತರ ರಾಷ್ಟ್ರೀಯ ನರ್ಸಿಂಗ್ ದಿನಾಚರಣೆ

ನಶಾ ಮುಕ್ತ ಮೈಸೂರು ಮ್ಯಾರಥಾನ್; ನೂರಾರು ಮಂದಿ ಭಾಗಿ



ವಿಶ್ವ ನರ್ಸಿಂಗ್ ದಿನಾಚರಣೆ ಅಂಗವಾಗಿ ಮಾದಕ ವಸ್ತುಗಳ ವಿರುದ್ಧ ನಶಾ ಮುಕ್ತ ಮೈಸೂರು ಮ್ಯಾರಥಾನ್ ನಡೆಯಿತು.

ಮೈಸೂರು, ಮೇ.12(ಜಿಎ)–ಅಂತರ ರಾಷ್ಟ್ರೀಯ ನರ್ಸಿಂಗ್ ದಿನಾಚರಣೆ ಅಂಗವಾಗಿ ಮಾದಕ ವಸ್ತುಗಳ ವಿರುದ್ಧ ನಡೆದ ನಶಾ ಮುಕ್ತ ಮೈಸೂರು ಮ್ಯಾರಥಾನ್‌ನಲ್ಲಿ ನೂರಾರು ಮಂದಿ ಪಾಲ್ಗೊಂಡಿದ್ದರು.

ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆ ಮತ್ತು ಜೆಎಸ್‌ಎಸ್ ನರ್ಸಿಂಗ್ ಕಾಲೇಜು ವತಿಯಿಂದ ಅಂತರರಾಷ್ಟ್ರೀಯ ಶುಶ್ರೂಷಕರ ದಿನಾಚರಣೆ ಅಂಗವಾಗಿ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದ ಮುಂಭಾಗದಿಂದ ಏರ್ಪಡಿಸಿದ್ದ ನಶಾ ಮುಕ್ತ ಮೈಸೂರು ಮ್ಯಾರಥಾನ್‌ಗೆ ಮೈಸೂರು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ ಮತ್ತು ಅಂತರ ರಾಷ್ಟ್ರೀಯ ಸೈಕ್ಲಿಸ್ಟ್ ಡಾ.ಬೃಂದಾ ಸುಹಾಸ್ ಗೋಧಿ ಚಾಲನೆ ನೀಡಿದರು.

ಈ ವೇಳೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ ಮಾತನಾಡಿ, ಇತ್ತೀಚಿನ ದಿನಗಳಲ್ಲಿ ಯುವ ಪೀಳಿಗೆ ಮೈಸೂರು ಮಾತ್ರವಲ್ಲದೇ ಎಲ್ಲೆಡೆ ಮಾದಕ ವಸ್ತುಗಳ ವ್ಯಸನದಿಂದ ದುಶ್ಚಟಕ್ಕೆ ಒಳಗಾಗಿ ಅದರಿಂದ ಹೊರಬರಲು ಕಷ್ಟಪಡುತ್ತಿದ್ದಾರೆ. ಇಂತಹ ಸಂದರ್ಭದಲ್ಲಿ ಈ ಅಂತರರಾಷ್ಟ್ರೀಯ ನರ್ಸಿಂಗ್ ದಿನದ ಅಂಗವಾಗಿ ಏರ್ಪಡಿಸಿರುವ ಮ್ಯಾರಥಾನ್‌ನಲ್ಲಿ ಅಧಿಕ ಸಂಖ್ಯೆಯಲ್ಲಿ ಪಾಲ್ಗೊಂಡಿರುವುದು ಸಂತಸದ ವಿಚಾರವಾಗಿದೆ. ಅದರಲ್ಲಿಯೂ ನಶಾ ಮುಕ್ತ ಮೈಸೂರು ವಿಷಯವನ್ನು ಮುಂದಿಟ್ಟುಕೊಂಡು ಮ್ಯಾರಥಾನ್ ಏರ್ಪಡಿಸಿರುವುದು ಅತ್ಯುತ್ತಮವಾದ ವಿಚಾರ ಎಂದರು.

ನಶಾ ಮುಕ್ತಕ್ಕೆ ಎಲ್ಲರೂ ಕೈಜೋಡಿಸಿ: ನಶಾ ಮುಕ್ತ ಮಾಡಲು ಪೊಲೀಸ್ ಇಲಾಖೆ, ವೈದ್ಯರು ಮಾತ್ರವಲ್ಲ ಎಲ್ಲರೂ ಕೈ ಜೋಡಿಸಬೇಕು. ನಶೆಯಲ್ಲಿ ತೇಲಾಡುವವರನ್ನು ಗುರುತಿಸಿ ಅವರ ಬಗ್ಗೆ ಮಾಹಿತಿ ನೀಡಿ. ಇದರಿಂದ ಮುಂದಿನ ದಿನಗಳಲ್ಲಿ ಅದನ್ನು ಹೋಗಲಾಡಿಸಲು ಸಹಕಾರಿಯಾಗಲಿದೆ. ಮ್ಯಾರಥಾನ್‌ನಿಂದ ಫಿಟ್‌ನೆಸ್ ಬಗ್ಗೆ ಅರಿವು ಮೂಡಿಸಿದ್ದಾರೆ. ಯುವ ಸಮೂಹ ದೇಶದ ಸಂಪತ್ತು. ಆದ್ದರಿಂದ ಎಲ್ಲರೂ ಯಾವುದಾದರೂ ಒಂದು ಚಟುವಟಿಕೆಯಲ್ಲಿ ತೊಡಗಿಸಿಕೊಳ್ಳಿ ಎಂದು ಸಲಹೆ ನೀಡಿದರು.

ಸಾರ್ವಜನಿಕರ ಜೀವನದಲ್ಲಿ ವೈದ್ಯರು ಮತ್ತು ನರ್ಸಿಂಗ್ ಸೇವೆ ಅತ್ಯಮೂಲ್ಯವಾಗಿದೆ. ಕೊರೊನಾ ಸಂದರ್ಭದಲ್ಲಿ ನಿಮ್ಮ ಸೇವೆ ಗಣನೀಯ. ರೋಗಿಗಳ ಮನೆಯವರೇ ಮುಟ್ಟಿಸಿಕೊಳ್ಳಲು ಭಯಪಡುತ್ತಿದ್ದ ಸಂದರ್ಭದಲ್ಲಿ ನೀವು ಉತ್ತಮ ಸೇವೆ ಮಾಡಿ ಎಲ್ಲರ ಭಯ ದೂರ ಮಾಡಿದ್ದೀರಾ, ನಿಮ್ಮ ಸೇವೆ ಅಗಣನೀಯ ಎಂದು ಸೇವೆ ಸ್ಮರಿಸಿದರು.

ಸಧೃಡತೆ ಮುಖ್ಯ: ಅಂತರರಾಷ್ಟ್ರೀಯ ಸೈಕ್ಲಿಸ್ಟ್ ಡಾ.ಬೃಂದಾ ಸುಹಾಸ್ ಗೋಧಿ ಮಾತನಾಡಿ, ಮಾನಸಿಕ ಮತ್ತು ದೈಹಿಕವಾಗಿ ಎಲ್ಲರೂ ಸಧೃಡರಾಗಿರಬೇಕು. ನರ್ಸ್‌ಗಳು ನಮ್ಮ ಆರೋಗ್ಯ ಕ್ಷೇತ್ರದ ಬೆನ್ನೆಲ್ಲುಬು ಎಂದರು.

ದೇಹವನ್ನು ಫಿಟ್ ಆಗಿ ಇಟ್ಟುಕೊಳ್ಳಲು ಕೇವಲ ರನ್ ಮಾಡಿದರೆ ಆಗಲ್ಲ. ಅದರೊಟ್ಟಿಗೆ ಯೋಗ ಸೇರಿದಂತೆ ಇತರ ಚಟುವಟಿಕೆಯಲ್ಲಿ ತೊಡಗಿಸಿಕೊಳ್ಳಬೇಕು.

> ಆರಂಭದಲ್ಲಿ 16 ಕಿಮಿ ಸೈಕ್ಲಿಂಗ್ ಮಾಡಿದೆ. ಈಗ ಕಾಶ್ಮೀರದಿಂದ ಕನ್ಯಾಕುಮಾರಿವರೆಗೆ ಸೈಕ್ಲಿಂಗ್ ಮಾಡಿ 3700 ಕಿಮಿ ಅನ್ನು 22 ದಿನದಲ್ಲಿ ಕ್ರಮಿಸಿದ್ದೇನೆ. ಅದರೊಟ್ಟಿಗೆ ನಾನೂ ಮೂಲತಃ ಮಕ್ಕಳ ದಂತ ವೈದ್ಯೆ ಆಗಿರುವುದರಿಂದ ಮಕ್ಕಳಿಗೆ ದಂತ ಆರೋಗ್ಯದ ಬಗ್ಗೆ ಅರಿವು ಮೂಡಿಸಲಾಯಿತು. ಎಲ್ಲಾ ಊರಿನಲ್ಲಿಯೂ 1800 ಮಕ್ಕಳನ್ನು ತಲುಪಿ ಈ ನಡುವೇ ಕ್ಯಾನ್ಸರ್ ಬಗ್ಗೆ ಅರಿವು ಮೂಡಿಸಿದ್ದೇನೆ. ಅದು ನಿರಂತರವಾಗಿ ಮುಂದುವರೆದಿದೆ.
>
> –ಡಾ.ಬೃಂದಾ ಸುಹಾಸ್ ಗೋಧಿ

ನಾನು ಫಿಟ್‌ನೆಸ್‌ಗಾಗಿ 40ನೇ ವಯಸ್ಸಿನಲ್ಲಿ ರನ್ ಮತ್ತು ವಾಕಿಂಗ್ ಅನ್ನು ಆರಂಭಿಸಿದೆ. ಜೀವನಕ್ಕೆ ಏನಾದರೂ ಅರ್ಥನೀಡಬೇಕು ಎಂದು 2017ರಿಂದ ಸೈಕ್ಲಿಂಗ್ ಆರಂಭಿಸಿದೆ ಎಂದರು.

ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದ ಮುಂಭಾಗದಿಂದ ಆರಂಭವಾದ ಮ್ಯಾರಥಾನ್ ನಗರ ಬಸ್ ನಿಲ್ದಾಣ ಆವರಣ ಪಾಲಿಕೆ ಮುಂಭಾಗ ಸಾಗಿ ಬಸವೇಶ್ವರ ವೃತ್ತದ ಮೂಲಕ ನೀಲಗಿರಿ ರಸ್ತೆ ಹಾದು ಮತ್ತೆ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದ ಮುಂಭಾಗ ಬಂದು ತಲುಪಿತು. ಈ ವೇಳೆ ವಿಜೇತರಿಗೆ ಬಹುಮಾನ ವಿತರಿಸಲಾಯಿತು.

ಕಾರ್ಮಿಕರು ಮನ್ನಿಸದ ನಾಲ್ಕು ಸಂಹಿತೆಗೆ ಮನ್ನಣೆ ಖಂಡಿಸಿ ಸಿಐಟಿಯು ಪ್ರತಿಭಟನೆ



ಮೈಸೂರು ಹಳೇ ಡಿಸಿ ಕಚೇರಿ ಎದುರು ಸಿಐಟಿಯು ಮೈಸೂರು ಜಿಲ್ಲಾ ಸಮಿತಿಯಿಂದ ಪ್ರತಿಭಟನೆ ನಡೆಸಲಾಯಿತು.

ಮೈಸೂರು, ಮೇ 12(ಎಂಕೆ)– ಕಾರ್ಮಿಕರ ಸಂಘಟನೆಗಳ ಮನವಿ ಮನ್ನಿಸದೆ ನಾಲ್ಕು ಕಾರ್ಮಿಕ ಸಂಹಿತೆಗಳಿಗೆ ನಿಯಮಾವಳಿಗಳನ್ನು ರೂಪಿಸಿ ಗೆಜೆಟ್ ನೋಟಿಫಿಕೇಶನ್ ಹೊರಡಿಸಿರುವ ಕೇಂದ್ರ ಸರ್ಕಾರದ ನಡೆ ಖಂಡಿಸಿ ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ಸ್(ಸಿಐಟಿಯು) ಮೈಸೂರು ಜಿಲ್ಲಾ ಸಮಿತಿ ವತಿಯಿಂದ ಮಂಗಳವಾರ ಪ್ರತಿಭಟನೆ ನಡೆಸಲಾಯಿತು.

ಮೈಸೂರಿನ ಹಳೇ ಜಿಲ್ಲಾಧಿಕಾರಿ ಕಚೇರಿ ಎದುರು ಜಮಾವಣೆಗೊಂಡ ಕಾರ್ಮಿಕ ಮುಖಂಡರು, ಕೇಂದ್ರ ಸರ್ಕಾರದ ವಿರುದ್ಧ ಧಿಕ್ಕಾರ ಕೂಗಿ ಆಕ್ರೋಶ ವ್ಯಕ್ತಪಡಿಸಿದರಲ್ಲದೆ ಕೂಡಲೇ ನಾಲ್ಕು ಕಾರ್ಮಿಕ ಸಂಹಿತೆಗಳನ್ನು ರದ್ದುಪಡಿಸಬೇಕು ಎಂದು ಆಗ್ರಹಿಸಿದರು.

ಕೇಂದ್ರ ಸರ್ಕಾರವು ಸಿಐಟಿಯು ಹಾಗೂ ಇತರೆ ಕಾರ್ಮಿಕ ಸಂಘಟನೆಗಳು ಸೂಚಿಸಿದ ಯಾವುದೇ ತಿದ್ದುಪಡಿಗಳನ್ನು ಅಂಗೀಕರಿಸದೇ ಹಾಗೂ ಸಂಘಟನೆಗಳೊಂದಿಗೆ ಮಾತುಕತೆ ನಡೆಸದೇ ಪ್ರಜಾಪ್ರಭುತ್ವ ಮೌಲ್ಯಗಳನ್ನು ಗಾಳಿಗೆ ತೂರಿ, ನಿಯಮಗಳನ್ನು ರೂಪಿಸಿದೆ. ಕಾರ್ಮಿಕ ಕಾನೂನುಗಳು ಸಮವರ್ತಿ ಪಟ್ಟಿಯಲ್ಲಿ ಬರುವುದರಿಂದ ರಾಜ್ಯಗಳೂ ಸಹ ಕೂಡಲೇ ನಿಯಮಗಳನ್ನು ರೂಪಿಸುವಂತೆ ಒತ್ತಡ ಹೇರಬೇಕಿದೆ ಎಂದರು.

ನಾಲ್ಕು ಕಾರ್ಮಿಕ ಸಂಹಿತೆಗಳು, ಕಾರ್ಮಿಕರ ಮೂಲಭೂತ ಹಕ್ಕು ಮತ್ತು ಸವಲತ್ತುಗಳನ್ನು ನಾಶಮಾಡುವ ಕ್ರಮವಾಗಿದೆ. ಬಂಡವಾಳಗಾರರು ಮಾಡುತ್ತಿದ್ದ ಎಲ್ಲಾ ಕಾನೂನು ಉಲ್ಲಂಘನೆಗಳನ್ನು ಕಾನೂನು ಬದ್ಧಗೊಳಿಸಲಾಗಿದೆ. ಕಾರ್ಮಿಕರ ಜೀವನ ಮತ್ತು ಜೀವನೋಪಾಯಗಳ ಮೇಲೆ ದಾಳಿಗಳಾಗಿದ್ದು, ಕಾರ್ಮಿಕರ ಮೇಲೆ ಗುಲಾಮಗಿರಿಯನ್ನು ಹೇರುವುದು ಮಾತ್ರವಲ್ಲದೇ ಕಾರ್ಮಿಕರ ಪ್ರತಿಯೊಂದು ಹಕ್ಕು ಹಾಗೂ ಪ್ರತಿಭಟನೆಯ ಅವಕಾಶಗಳನ್ನು ಕಿತ್ತುಕೊಳ್ಳುತ್ತದೆ. ಖಾಯಂ ಉದ್ಯೋಗದ ಅವಕಾಶಗಳು ದೇಶದ ಯುವ ಜನತೆಗೆ ಇಲ್ಲದಂತೆ ಮಾಡಿ, ಅವರ ಬದುಕನ್ನು ಅತಂತ್ರಗೊಳಿಸಲಾಗಿದೆ ಎಂದು ಕಿಡಿಕಾರಿದರು.

ನಿರುದ್ಯೋಗ, ಹಣದುಬ್ಬರ, ಬೆಲೆ ಏರಿಕೆ ಹಾಗೂ ಬದುಕಿನ ಹಲವಾರು ಕಷ್ಟಗಳನ್ನು ಅನುಭವಿಸುತ್ತಿರುವ ಕೇಂದ್ರದ ಬಿಜೆಪಿ ಸರಕಾರ ತನ್ನ ಪ್ರಜೆಗಳ ಮೇಲೆ ಸಾರಿರುವ ಅಮಾನವೀಯ ಯುದ್ಧ ಇದಾಗಿದೆ. ಆದ್ದರಿಂದ ದೇಶದ ಸಂವಿಧಾನ ಖಾತ್ರಿಪಡಿಸುವ ಒಕ್ಕೂಟ ತತ್ವ ಗಳನ್ನು ಆಧರಿಸಿ ರಾಜ್ಯ ಸರಕಾರವು ರಾಜ್ಯದ ಶ್ರಮ ಜೀವಿಗಳ ಹಿತವನ್ನು ರಕ್ಷಿಸಲು ಮುಂದಾಗಬೇಕೆಂದು ಒತ್ತಾಯಿಸಿದರು. ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ಸ್ (ಸಿಐಟಿಯು) ಮೈಸೂರು ಜಿಲ್ಲಾ ಸಮಿತಿ ಅಧ್ಯಕ್ಷ ಎಂ.ಅಣ್ಣಪ್ಪ, ಕಾರ್ಯದರ್ಶಿ ಎನ್.ಕೆ.ಬಾಲಾಜಿರಾವ್ ಮತ್ತಿತರರಿದ್ದರು.

ಮೇ.15ರಂದು ದಸಂಸ ವತಿಯಿಂದ ವಿಚಾರ ಸಂಕಿರಣ

ಮೈಸೂರು,ಮೇ.12– ಡಾ.ಬಿ.ಆರ್. ಅಂಬೇಡ್ಕರ್ ಅವರ 135ನೇ ಜಯಂತಿ ಅಂಗವಾಗಿ ಮೈಸೂರು ಜಿಲ್ಲಾ ದಲಿತ ಸಂಘರ್ಷ ಸಮಿತಿ ವತಿಯಿಂದ 'ಬಹುತ್ವ ಭಾರತ ಮತ್ತು ಸಂವಿಧಾನವನ್ನು ಅಸ್ಥಿರಗೊಳಿಸುತ್ತಿರುವ ಕೋಮುವಾದಿ ಶಕ್ತಿಗಳು' ಎಂಬ ವಿಚಾರ ಸಂಕಿರಣವನ್ನು ಮೇ.15 ರಂದು ನಗರದ ಇನ್ಸಿಟ್ಯೂಟ್ ಆಫ್ ಇಂಜಿನಿಯರಿಂಗ್ ಸಭಾಂಗಣದಲ್ಲಿ ಬೆಳಗ್ಗೆ 11 ಗಂಟೆಗೆ ಏರ್ಪಡಿಸಲಾಗಿದೆ.

ಸಾಹಿತಿ ಪ್ರೊ.ಕಾಳೇಗೌಡ ನಾಗವಾರ ಕಾರ್ಯಕ್ರಮ ಉದ್ಘಾಟಿಸಲಿದ್ದು, ರಾಜ್ಯ ದಸಂಸ ಸಂಸ್ಥಾಪಕ ಸಂಯೋಜಕ ವಿ.ನಾಗರಾಜ್ ಅಧ್ಯಕ್ಷತೆ ವಹಿಸಲಿದ್ದಾರೆ. ಕಾರ್ಯಕ್ರಮದಲ್ಲಿ ಸಾಹಿತಿ ನಾ ದಿವಾಕರ್, ಅಂಬೇಡ್ಕರ್ ಪ್ರಶಸ್ತಿ ಪುರಸ್ಕೃತ, ದಸಂಸ ಸಂಯೋಜಕ ಹೆಚ್.ಎನ್ ಅಣ್ಣಯ್ಯ, ಚಿತ್ರ ನಿರ್ಮಾಪಕ ಕೃಷ್ಣಮೂರ್ತಿ ಸೇರಿದಂತೆ ದಸಂಸ ಮುಖಂಡರು ಭಾಗವಹಿಸುವರು ಎಂದು ಪ್ರಕಟಣೆ ತಿಳಿಸಿದೆ.

ದಕ್ಷಿಣ ಭಾಗದ ಕಬ್ಬು ಬೆಳೆಗಾರರಿಗೆ ಸರ್ಕಾರದ ಪ್ರೋತ್ಸಾಹಧನ ಶೀಘ್ರ ಸಂದಾಯ ಸಾಧ್ಯತೆ

- ಎಂಎಲ್ಸಿ ದಿನೇಶ್ ಗೂಳಿಗೌಡರ ಮನವಿಗೆ ಸ್ಪಂದಿಸಿದ ಸಿಎಂ ಸಿದ್ದರಾಮಯ್ಯ
- ಸೂಕ್ತ ಕ್ರಮ ಕೈಗೊಂಡು ವರದಿ ಸಲ್ಲಿಸಲು ಸಕ್ಕರೆ ಆಯುಕ್ತರಿಗೆ ಸೂಚನೆ
- ಸರ್ಕಾರದ 50 ರೂ. ಪ್ರೋತ್ಸಾಹಧನಕ್ಕೂ ಅಡ್ಡಿ ಮಾಡಿದ್ದರ ಬಗ್ಗೆ ದೂರು

ಬೆಂಗಳೂರು: ದಕ್ಷಿಣ ಕರ್ನಾಟಕದ ಸಕ್ಕರೆ ಕಾರ್ಖಾನೆಗಳಿಂದ ಕಬ್ಬು ಬೆಳೆಗಾರರಿಗೆ ಆಗುತ್ತಿರುವ ಸಮಸ್ಯೆ ಕುರಿತು ಶಾಸಕ ದಿನೇಶ್ ಗೂಳಿಗೌಡರ ಮನವಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ.

ಕಬ್ಬು ಬೆಳೆಗಾರರ ಹಲವು ಪ್ರಮುಖ ಸಮಸ್ಯೆಗಳ ಪರಿಹಾರಕ್ಕೆ ಕ್ರಮ ವಹಿಸಲು ಕೋರಿ ದಿನೇಶ್ ಗೂಳಿಗೌಡರು ಇತ್ತೀಚಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮನವಿ ಸಲ್ಲಿಸಿದ್ದರು. ಇದಕ್ಕೆ ಸ್ಪಂದಿಸಿರುವ ಮುಖ್ಯಮಂತ್ರಿಗಳು, ಈ ಮನವಿಯನ್ನು ಪರಿಶೀಲಿಸಿ ಕೂಡಲೇ ಅಗತ್ಯ ಕ್ರಮ ಕೈಗೊಂಡು, ಅದರ ಬಗ್ಗೆ ವರದಿ ನೀಡುವಂತೆ ಸಕ್ಕರೆ ನಿರ್ದೇಶನಾಲಯದ ಆಯುಕ್ತರಿಗೆ ಸೂಚನೆ ನೀಡಿದ್ದಾರೆ.

ಇದರ ಬೆನ್ನಲ್ಲೇ 7 ಸಕ್ಕರೆ ಕಾರ್ಖಾನೆಗಳು ರೈತರ ಖಾತೆ ವಿವರ ಸಲ್ಲಿಸಿವೆ. ಹಾಗೆಯೇ, ರೈತರ ಖಾತೆಗಳಿಗೆ ಹಣ ಜಮೆ ಮಾಡುವಂತೆ ಖಜಾನೆಗೆ ಜಿಲ್ಲಾಧಿಕಾರಿಗಳು ವಿವರ ನೀಡಿದ್ದು, ಶೀಘ್ರದಲ್ಲೇ ರೈತರಿಗೆ ಸರ್ಕಾರದ ಪಾಲಿನ 50 ರೂ. ಪ್ರೋತ್ಸಾಹ ಧನ ಜಮೆಯಾಗುವ ನಿರೀಕ್ಷೆ ಇದೆ. ಆದರೆ, ತಮ್ಮ ಪಾಲಿನ 50 ರೂ. ನೀಡಲು ಹಿಂದೇಟು ಹಾಕಿರುವ ಕಾರ್ಖಾನೆಗಳು ನ್ಯಾಯಾಲಯದಿಂದ ತಡೆಯಾಜ್ಞೆ ತಂದಿದ್ದು, ಸದ್ಯ ಪ್ರಕರಣ ವಿಚಾರಣಾ ಹಂತದಲ್ಲಿದೆ.

ಪ್ರತಿ ಟನ್ ಕಬ್ಬಿಗೆ ಸರ್ಕಾರದಿಂದ 50 ರೂ. ಹಾಗೂ ಸಕ್ಕರೆ ಕಾರ್ಖಾನೆಗಳಿಂದ 50 ರೂ. ಸೇರಿ ಒಟ್ಟು 100 ರೂ. ಪ್ರೋತ್ಸಾಹಧನ ನೀಡಲು ಸರ್ಕಾರ ಸೂಚಿಸಿದೆ. ಆದರೆ ದಕ್ಷಿಣ ಕರ್ನಾಟಕದ ಚಾಮರಾಜನಗರ ಜಿಲ್ಲೆ, ಕೊಳ್ಳೇಗಾಲ ತಾಲೂಕು ಕುಂತೂರಿನ ಬನ್ನಾರಿ ಅಮ್ಮನ್ ಶುಗರ್ಸ್, ಹಾಸನ ಜಿಲ್ಲೆ ಚನ್ನರಾಯಪಟ್ಟಣದ ಚಾಮುಂಡೇಶ್ವರಿ ಶುಗರ್ಸ್ ಲಿ., ಮಂಡ್ಯ ಜಿಲ್ಲೆ ಕೆ.ಆರ್.ಪೇಟೆಯ ಕೋರಮಂಡಲ ಶುಗರ್ಸ್, ಮದ್ದೂರಿನ ಚಾಮುಂಡೇಶ್ವರಿ ಶುಗರ್ಸ್ ಲಿ., ಪಾಂಡವಪುರದ ಎಂಆರ್‌ಎನ್ ಕೇನ್ ಪವರ್ ಅಂಡ್




ಬೈಯೋರಿಫೈನರಿಸ್ ಪ್ರೈ.ಲಿ., ಮದ್ದೂರಿನ ಎನ್‌ಎಸ್‌ಎಲ್ ಶುಗರ್ಸ್ ಲಿ. ಹಾಗೂ ಮೈಸೂರು ಜಿಲ್ಲೆ ನಂಜನಗೂಡಿನ ಬನ್ನಾರಿ ಅಮ್ಮನ್ ಶುಗರ್ಸ್ ಲಿ. ಕಾರ್ಖಾನೆಗಳು ಹಿಂದೇಟು ಹಾಕಿದ್ದಲ್ಲದೆ, ಇದಕ್ಕೆ ತಡೆಯಾಜ್ಞೆ ತಂದಿವೆ. ಅಲ್ಲದೆ, ಸರ್ಕಾರದ ಪಾಲಿನ ಹಣವನ್ನು ರೈತರ ಖಾತೆಗೆ ಹಾಕಲು ಅಗತ್ಯವಿರುವ ರೈತರ ವಿವರಗಳನ್ನು ಜಿಲ್ಲಾಡಳಿತಕ್ಕೆ ನೀಡದೆ ಅಸಹಕಾರ ತೋರಿವೆ. ಈ ಹಠಮಾರಿ ಧೋರಣೆಯಿಂದಾಗಿ ಮೈಸೂರು, ಮಂಡ್ಯ, ಹಾಸನ ಮತ್ತು ಚಾಮರಾಜನಗರ ಜಿಲ್ಲೆಗಳ ಸಾವಿರಾರು ರೈತರು ಸಂಕಷ್ಟಕ್ಕೆ ಸಿಲುಕಿದ್ದಾರೆ ಎಂಬುದನ್ನು ದಿನೇಶ್ ಗೂಳಿಗೌಡರು ಮುಖ್ಯಮಂತ್ರಿಗಳ ಗಮನಕ್ಕೆ ತಂದಿದ್ದರು.

ಅಲ್ಲದೆ, ರೈತರಿಗೆ ಬಾಕಿ ನೀಡದ ಹಾಗೂ ಸರ್ಕಾರದ ನಿಯಮ ಪಾಲಿಸದ ಈ 7 ಕಾರ್ಖಾನೆಗಳ ಕ್ರಶಿಂಗ್ ಲೈಸೆನ್ಸ್ ಅನ್ನು ಮುಂಬರುವ ಹಂಗಾಮಿಗೆ ನವೀಕರಿಸಬಾರದು. ಸರ್ಕಾರವು ಹೈಕೋರ್ಟ್‌ನಲ್ಲಿರುವ ತಡೆಯಾಜ್ಞೆ ತೆರವುಗೊಳಿಸಲು ಅಡ್ವೊಕೇಟ್ ಜನರಲ್ ಅವರ ಮೂಲಕ ಬಲವಾದ ವಾದ ಮಂಡಿಸಬೇಕು. ಮುಂಗಾರು ಹಂಗಾಮು ಆರಂಭವಾಗುವ ಮುನ್ನವೇ ಸಿಎಂ ನೇತೃತ್ವದಲ್ಲಿ ಈ ಕಾರ್ಖಾನೆ ಮಾಲೀಕರ ತುರ್ತು ಸಭೆ ಕರೆದು, ರೈತರ ಹಣ ಬಿಡುಗಡೆ ಮಾಡದಿದ್ದರೆ ಕಾರ್ಖಾನೆಗಳನ್ನು ಸರ್ಕಾರದ ವಶಕ್ಕೆ ಪಡೆಯುವ ಎಚ್ಚರಿಕೆ ನೀಡಬೇಕು ಎಂದು ಪತ್ರದಲ್ಲಿ ಮನವಿ ಮಾಡಿದ್ದರು.

ಅರ್ಜಿ ಆಹ್ವಾನ

ಮೈಸೂರು: ಸರ್ಕಾರಿ ಉಪಕರಣಾಗಾರ–ತರಬೇತಿ ವತಿಯಿಂದ ಜಿ.ಟಿ.ಟಿ.ಸಿ ಮೈಸೂರು ಕೇಂದ್ರದಲ್ಲಿ ಎಸ್‌ಎಸ್‌ಎಲ್‌ಸಿ ಉತ್ತೀರ್ಣ ಹಾಗೂ ಅನುತ್ತೀರ್ಣರಾಗಿರುವ ವಿದ್ಯಾರ್ಥಿಗಳಿಗೆ ತಾಂತ್ರಿಕ ನೈಪುಣ್ಯತೆ ಪಡೆದು ಉತ್ತಮ ಉದ್ಯೋಗ ಅವಕಾಶಗಳನ್ನು ಗಳಿಸಿಕೊಳ್ಳಲು ಒಂದು ವರ್ಷದ ತರಬೇತಿಯನ್ನು ನೀಡಲು ಟೂಲ್ ರೂಂ ಮೆಷಿನಿಸ್ಟ್ ಕೋರ್ಸಿಗೆ ಅರ್ಜಿ ಆಹ್ವಾನಿಸಿದ್ದು, ಮೇ 15 ಅರ್ಜಿ ಸಲ್ಲಿಸಲು ಕೊನೆಯ ದಿನ. ಈ ಕೋರ್ಸಿನಲ್ಲಿ ಕನ್ವೆಷನಲ್ ಹಾಗೂ ಅಡ್ವಾನ್ಸ್ ಸಿ.ಎನ್.ಸಿ ಮಿಷಿನಿಂಗ್ ಒಳಗೊಂಡತೆ ಟರ್ನಿಂಗ್, ಮಿಲ್ಲಿಂಗ್, ಗ್ರೆಂಡಿಂಗ್ ವಿಭಾಗದಲ್ಲಿ ಪರಿಣಿತರಿಂದ ಥಿಯರಿ ಹಾಗೂ ಪ್ರಾಕ್ಟಿಕಲ್ ತರಬೇತಿ ನೀಡಲಾಗುವುದು ಮತ್ತು ಆರ್ಥಿಕವಾಗಿ ಹಿಂದುಳಿದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಭ್ಯರ್ಥಿಗಳಿಗೆ ಉಚಿತವಾಗಿ ತರಬೇತಿಯನ್ನು AITT (SCP/TSP) ಯೋಜನೆ ಅಡಿಯಲ್ಲಿ ನೀಡಲಾಗುವುದು. ಇತರ ಪಂಗಡಗಳ ಅಭ್ಯರ್ಥಿಗಳಿಗೆ ಶುಲ್ಕ ರೂ. 18200 ಪಾವತಿಸಬೇಕಾಗುತ್ತದೆ. ಮಾಹಿತಿಗೆ ಮೊ. 9945442654, 90192 32390, ದೂ. 08212–582097 ಸಂಪರ್ಕಿಸಿ.

ಪಂಡಿತ್ ಕೆ.ಎಸ್. ಹಡಪದ ಪ್ರಶಸ್ತಿಗೆ ಆಯ್ಕೆ

ಮೈಸೂರು, ಮೇ 12– ಮೈಸೂರಿನ ಶ್ರೀ ಗುರು ಪುಟ್ಟರಾಜ ಸಂಗೀತ ಸಭಾ ವತಿಯಿಂದ ನೀಡುವ 2026ನೇ ಸಾಲಿನ ಪ್ರತಿಷ್ಠಿತ ಪಂಡಿತ್ ಕೆ.ಎಸ್. ಹಡಪದ ಪ್ರಶಸ್ತಿಗೆ ಬೆಂಗಳೂರಿನ ತಬಲಾ ಕಲಾವಿದರಾದ ಪಂಡಿತ್ ರಾಜೇಂದ್ರ ನಾಖೋಡ್ ಅವರನ್ನು ಆಯ್ಕೆ ಮಾಡಲಾಗಿದೆ. ಪ್ರಶಸ್ತಿಯು 10 ಸಾವಿರ ನಗದು, ಪ್ರಶಸ್ತಿ ಪತ್ರ ಒಳಗೊಂಡಿದೆ. ಸಂಗೀತ ಸಭಾದ ಗೌರವಾಧ್ಯಕ್ಷ ಮಾ.ವಿ. ರಾಮಪ್ರಸಾದ್, ಶಂಕರ್ ಹಲಗತ್ತಿ, ಮಲ್ಲಿಕಾರ್ಜುನ ಚಿಕ್ಕಮಠ, ಡಾ. ಎ.ಎಲ್. ದೇಸಾಯಿ, ಡಾ. ಗುರುಬಸವ ಮಹಾಮನೆ, ಗಿರೀಶ್ ಶಿಲ್ಪಿ, ಜಗದೀಶ್ ಬಾಬು ಒಳಗೊಂಡ ಆಯ್ಕೆ ಸಮಿತಿಯು ಈ ಕಲಾವಿದರನ್ನು ಆಯ್ಕೆ ಮಾಡಿದೆ.

ಮೇ 30ರಂದು ಕುವೆಂಪುನಗರದ ಗಾನಭಾರತಿ ವೀಣೆ ಶೇಷಣ್ಣ ಭವನದಲ್ಲಿ ಪಂಡಿತ್ ಕೆ.ಎಸ್. ಹಡಪದ ಸ್ಮರಣಾರ್ಥ ನಡೆಯುವ ಸಂಗೀತ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಸಂಗೀತ ಸಭಾದ ಅಧ್ಯಕ್ಷ ಭೀಮಾಶಂಕರ ಬಿದನೂರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕಠಿಣ ಪರಿಶ್ರಮ, ಸಮಯ ಪ್ರಜ್ಞೆ ವಿದ್ಯಾರ್ಥಿಗಳ ಸಾಧನೆಗೆ ಸಹಕಾರಿ

- ಮುಕ್ತ ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಶರಣಪ್ಪ ವಿ.ಹಲಸೆ ಸಲಹೆ
- ಕೆ–ಸೆಟ್, ಯುಜಿಸಿ–ನೆಟ್ ಸ್ಪರ್ಧಾತ್ಮಕ ಶಿಬಿರಕ್ಕೆ ಚಾಲನೆ



ಮುಕ್ತ ವಿವಿಯಲ್ಲಿ ಕೆ–ಸೆಟ್ ಮತ್ತು ಯುಜಿಸಿ–ನೆಟ್ ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ ಶಿಬಿರಕ್ಕೆ ಮಂಗಳವಾರ ಚಾಲನೆ ನೀಡಲಾಯಿತು.

ಮೈಸೂರು, ಮೇ 12(ಎಂಕೆ)– ವಿದ್ಯಾರ್ಥಿ ಜೀವನ ವ್ಯಕ್ತಿಯ ಭವಿಷ್ಯವನ್ನು ರೂಪಿಸುವ ಅತ್ಯಂತ ಮಹತ್ವದ ಹಂತವಾಗಿದ್ದು, ಶಿಸ್ತು, ಕಠಿಣ ಪರಿಶ್ರಮ ಮತ್ತು ಸಮಯ ಪ್ರಜ್ಞೆಯನ್ನು ಅಳವಡಿಸಿಕೊಂಡಲ್ಲಿ ಮಾತ್ರವೇ ಸಾಧನೆ ಸಾಧ್ಯ ಎಂದು ಮುಕ್ತ ವಿವಿ(ಕೆಎಸ್‌ಒಯು) ಕುಲಪತಿ ಪ್ರೊ.ಶರಣಪ್ಪ ವಿ.ಹಲಸೆ ಸಲಹೆ ನೀಡಿದರು.

ಮುಕ್ತ ವಿವಿಯ ಕಾವೇರಿ ಸಭಾಂಗಣದಲ್ಲಿ ಮಂಗಳವಾರ ಆಯೋಜಿಸಿದ್ದ ಕೆ–ಸೆಟ್ ಮತ್ತು ಯುಜಿಸಿ–ನೆಟ್ ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ ಶಿಬಿರ ಉದ್ಘಾಟಿಸಿ ಮಾತನಾಡಿದ ಅವರು, ಆತ್ಮವಿಶ್ವಾಸದೊಂದಿಗೆ ಮುಂದಿನ ಭವಿಷ್ಯಕ್ಕಾಗಿ ಪ್ರಾಮಾಣಿಕ ಪ್ರಯತ್ನದ ಮೂಲಕ ಗುರಿಯತ್ತ ಸಾಗಬೇಕು. ಸಮಯ ಪ್ರಜ್ಞೆ ಅತೀ ಮುಖ್ಯವಾಗಿದ್ದು, ಮನರಂಜನೆಗೆ ಅಂಟಿಕೊಳ್ಳದೆ ಜ್ಞಾನಾರ್ಜನೆಗೆ ಹೆಚ್ಚಿನ ಸಮಯ ನೀಡಬೇಕು. ಓದಿನ ವಿಚಾರದಲ್ಲಿ ಕೃತಕ ಬುದ್ಧಿಮತ್ತೆ ಅವಲಂಬನೆ ಮಿತವಾಗಿರಬೇಕು. ಮೊಬೈಲ್ ಮತ್ತು ಸಾಮಾಜಿಕ ಜಾಲತಾಣಗಳ ಬಳಕೆಯಿಂದ ದೂರವಿದ್ದು, ವಿದ್ಯಾಭ್ಯಾಸದ ಕಡೆಗೆ ಹೆಚ್ಚಿನ ಗಮನ ಹರಿಸಬೇಕೆಂದು ಎಂದು ಕಿವಿಮಾತು ಹೇಳಿದರು.

ಬೆಂಗಳೂರು ಉತ್ತರ ವಿಶ್ವವಿದ್ಯಾನಿಲಯ ಕುಲಪತಿ ಪ್ರೊ.ಬಿ.ಕೆ.ರವಿ ಮಾತನಾಡಿ, ಹಿಂದಿನ ಕಾಲಕ್ಕೆ ಹೋಲಿಸಿದರೆ, ಇಂದು ತಂತ್ರಜ್ಞಾನ ಮತ್ತು ಸಂಪನ್ಮೂಲಗಳು ಹೇರಳವಾಗಿವೆ. ಆದರೆ, ಪರೀಕ್ಷೆಯನ್ನು ಹೇಗೆ ಎದುರಿಸಬೇಕು. ಯಾವ ಅಂಶಗಳಿಗೆ ಹೆಚ್ಚಿನ ಒತ್ತು ನೀಡಬೇಕೆಂಬ ಮಾರ್ಗದರ್ಶನ ಯಶಸ್ಸಿಗೆ ಅತೀ ಮುಖ್ಯ ವಿಷಯ ಪಾಂಡಿತ್ಯವಿದ್ದರೂ ಪರೀಕ್ಷೆಯಲ್ಲಿ ಹೇಗೆ ಪ್ರಸ್ತುತಪಡಿಸಬೇಕು ಎಂಬ ಕೌಶಲ್ಯತೆ ವಿದ್ಯಾರ್ಥಿಗಳಿಗೆ ಸಿದ್ಧಿಸಿರಬೇಕು. ಬೋಧಕರು ಎಷ್ಟೇ ಜನಪ್ರಿಯರಾಗಿದ್ದರೂ, ಅವರು ನೀಡುವ ಮಾಹಿತಿ ವಿದ್ಯಾರ್ಥಿಗಳಿಗೆ ಎಷ್ಟು ತಲುಪುತ್ತದೆ ಎಂಬುದು ಮುಖ್ಯ ಎಂದರು.

ಅನೇಕ ವಿದ್ಯಾರ್ಥಿಗಳು ಪರೀಕ್ಷೆ ಹತ್ತಿರ ಬಂದಾಗ ಓದಲು ಆರಂಭಿಸುತ್ತಾರೆ. ಇನ್ನೂ ಸಮಯವಿದೆ ಎಂದು ಮುಂದೂಡುತ್ತಾ ಪರೀಕ್ಷೆಯ ಹಿಂದಿನ ದಿನ ಒತ್ತಡಕ್ಕೆ ಒಳಗಾಗುತ್ತಾರೆ. ಆದ್ದರಿಂದ ಮೊದಲೇ ಪೂರ್ವ ತಯಾರಿ ಇದ್ದರೆ ಪರೀಕ್ಷೆಯ ಭಯವೂ ಇರುವುದಿಲ್ಲ. ಜ್ಞಾನ ನಿಮ್ಮದಾದರೆ ಪ್ರಶ್ನೆ ಯಾರದ್ದಾದರೂ ಹೆದರಬೇಕಿಲ್ಲ. ಬ್ರೇಕಿಂಗ್ ನ್ಯೂಸ್‌ಗಳ ಹಾವಳಿ ನಡುವೆ ನಿಜವಾದ ಜ್ಞಾನವನ್ನು ಆರಿಸಿಕೊಳ್ಳುವಲ್ಲಿ ವಿವೇಚನೆ ಬಳಸಬೇಕು ಎಂದು ತಿಳಿಸಿದರು.

ಆಡಳಿತ ತರಬೇತಿ ಸಂಸ್ಥೆಯ ಜಂಟಿ ನಿರ್ದೇಶಕರಾದ ಆರ್.ಸತ್ಯಶ್ರೀ ಮಾತನಾಡಿ, ಶಿಕ್ಷಣ ಎಂಬುದು ಕೇವಲ ಪದವಿ ಪಡೆಯುವುದಕ್ಕೆ ಸೀಮಿತವಾಗಬಾರದು. ಜ್ಞಾನದ ಹಸಿವು ಸದಾ ಇರಬೇಕು. ಕಲಿಕೆ ನಿರಂತರವಾದಾಗ ಮಾತ್ರ ಜಗತ್ತಿನ ಸವಾಲುಗಳನ್ನು ಎದುರಿಸಲು ಸಾಧ್ಯ. ವಿದ್ಯಾರ್ಥಿಗಳು ಪ್ರಶ್ನಿಸುವ ಮನೋಭಾವ ಮತ್ತು ಸಂಶೋಧನಾ ಪ್ರವೃತ್ತಿಯನ್ನು ಬೆಳೆಸಿಕೊಳ್ಳಬೇಕು. ಪತ್ರಿಕೋದ್ಯಮದ ವಿದ್ಯಾರ್ಥಿಗಳು ಸಮಾಜದ ವಿದ್ಯಮಾನಗಳನ್ನು ಸೂಕ್ಷ್ಮವಾಗಿ ಗಮನಿಸಬೇಕು. ಯಶಸ್ಸಿನ ಹಿಂದೆ ನೈತಿಕತೆ ಇರಬೇಕು. ಪ್ರತಿದಿನ ಬೆಳಿಗ್ಗೆ ಎದ್ದ ತಕ್ಷಣ ನಿಮ್ಮ ಗುರಿಯನ್ನು ಕಲ್ಪಿಸಿ ಕೊಳ್ಳುವ ಮೂಲಕ ಮನಸ್ಸನ್ನು ತರಬೇತು ಗೊಳಿಸಬೇಕು ಎಂದರು.

ಮುಕ್ತ ವಿವಿ ಕುಲಸಚಿವ ಪ್ರೊ.ಎಸ್.ಕೆ.ನವೀನ್ ಕುಮಾರ್, ಕುಲಸಚಿವ(ಪರೀಕ್ಷಾಂಗ) ಡಾ. ಸಿ.ಎಸ್.ಆನಂದಕುಮಾರ್, ಡೀನ್‌ಗಳಾದ ಪ್ರೊ.ಎಂ. ರಮಾನಾಥಂ ನಾಯ್ದು, ಡಾ.ಎನ್.ಆರ್.ಚಂದ್ರೇಗೌಡ, ಸಂಯೋಜನಾಧಿಕಾರಿ ಜೈನಹಳ್ಳಿ ನಾರಾಯಣಗೌಡ ಮತ್ತಿತರರು ಉಪಸ್ಥಿತರಿದ್ದರು.

ಮೈಸೂರು ಮಿತ್ರ

ಕುಡಿಯುವ ನೀರಿಗೆ ತೊಂದರೆಯಾಗದಂತೆ ಕ್ರಮ ವಹಿಸಿ

ಕೆಡಿಪಿ ಸಭೆಯಲ್ಲಿ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಮನೋಜ್ ಕುಮಾರ್ ಮೀನಾ ಸೂಚನೆ

ಮಂಡ್ಯ, ಮೇ 12– ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ತಲೆ ದೋರದಂತೆ ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳಬೇಕು ಹಾಗೂ ಸಕಾಲ ಯೋಜನೆಯಡಿ ಸ್ವೀಕರಿಸಿದ ಎಲ್ಲಾ ಅರ್ಜಿಗಳನ್ನು ನಿಗದಿತ ಅವಧಿಯೊಳಗೆ ಇತ್ಯರ್ಥಗೊಳಿಸಬೇಕು ಎಂದು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಮನೋಜ್ ಕುಮಾರ್ ಮೀನಾ ಅಧಿಕಾರಿಗಳಿಗೆ ಸೂಚಿಸಿದರು.

ಜಿಲ್ಲಾಧಿಕಾರಿ ಕಚೇರಿಯಲ್ಲಿ ನಡೆದ ಪ್ರಗತಿ ಪರಿಶೀಲನೆ ಸಭೆಯ ಅಧ್ಯಕ್ಷತೆ ವಹಿಸಿ, ಬೇಸಿಗೆ ಸಂದರ್ಭದಲ್ಲಿ ಕುಡಿಯುವ ನೀರಿನ ಪೂರೈಕೆ, ಜಲಜೀವನ್ ಮಿಷನ್ ಯೋಜನೆಗಳ ಪ್ರಗತಿ ಮತ್ತು ಜಾನುವಾರುಗಳಿಗೆ ಮೇವಿನ ಲಭ್ಯತೆ ಕುರಿತು ಜಿಲ್ಲಾ ಮಟ್ಟದ ಅಧಿಕಾರಿಗಳೊಂದಿಗೆ ಚರ್ಚೆ ನಡೆಸಿ ಮಾತನಾಡಿದ ಅವರು, ಜಿಲ್ಲೆಯಲ್ಲಿ ಸಕಾಲ ಯೋಜನೆಯಡಿ ಸ್ವೀಕರಿಸಿದ ಎಲ್ಲಾ ಅರ್ಜಿಗಳನ್ನು ನಿಗದಿತ ಅವಧಿಯೊಳಗೆ ಇತ್ಯರ್ಥಗೊಳಿಸಿ ಸಾರ್ವಜನಿಕರಿಗೆ ಸಮರ್ಪಕವಾಗಿ ಸಕಾಲ ಯೋಜನೆಯ ಸೇವೆಗಳು ಲಭ್ಯವಾಗುವಂತೆ ನೋಡಿಕೊಳ್ಳಬೇಕು ಎಂದು ತಿಳಿಸಿದರು.



ಸಭೆಯಲ್ಲಿ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಮನೋಜ್ ಕುಮಾರ್ ಮೀನಾ ಮಾತನಾಡಿದರು.

ಜನತೆಯ ಸಮಸ್ಯೆಗಳಿಗೆ ಸ್ಪಂದಿಸಬೇಕು. ಸಾರ್ವಜನಿಕರ ಆರೋಗ್ಯದ ಹಿತದೃಷ್ಟಿಯಿಂದ ಮುಂಜಾಗ್ರತೆ ಕ್ರಮವಾಗಿ ಪರೀಕ್ಷೆಗೊಳಪಡಿಸಿಯೇ ಕುಡಿಯುವ ನೀರು ಪೂರೈಸಲು ಕ್ರಮ ವಹಿಸಬೇಕು. ತೀವ್ರ ಸಮಸ್ಯೆ ಇರುವ ಗ್ರಾಮಗಳಿಗೆ ಆದ್ಯತೆ ಮೇರೆಗೆ ಟ್ಯಾಂಕರ್ ಮೂಲಕ ನೀರು ಒದಗಿಸಲು ಸೂಚಿಸಿದರು.

ಸಾಲಬಾಧೆ ಅಥವಾ ಕೃಷಿ ಸಂಕಷ್ಟದಿಂದ ಆತ್ಮಹತ್ಯೆ ಮಾಡಿಕೊಂಡ ರೈತರ ಕುಟುಂಬಗಳಿಗೆ ಪರಿಹಾರ ನೀಡಬೇಕು. ಸಾಮಾಜಿಕ ಭದ್ರತಾ ಯೋಜನೆಯಡಿ ಅರ್ಹ ಫಲಾನುಭವಿಗಳಿಗೆ ವಿವಿಧ ಮಾಸಾಶನವನ್ನು ನೀಡುವಂತೆ ಸಭೆಯಲ್ಲಿ ತಿಳಿಸಿದರು.

ಜಿಲ್ಲಾಧಿಕಾರಿ ಡಾ.ಕುಮಾರ ಮಾತನಾಡಿ, ಜಿಲ್ಲೆಯ ಗ್ರಾಮಾಂತರ ಪ್ರದೇಶಗಳಲ್ಲಿ ಒಟ್ಟು 289 ಗ್ರಾಮಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಎದುರಾಗಬಹುದೆಂದು ಅಂದಾಜಿಸಲಾಗಿದ್ದು, ಈಗಾಗಲೇ 15 ಗ್ರಾಮಗಳಲ್ಲಿ ಖಾಸಗಿ ಕೊಳವೆ ಬಾವಿಗಳ ಮೂಲಕ ಕುಡಿಯುವ ನೀರು ಸರಬರಾಜು ಮಾಡುವ ವ್ಯವಸ್ಥೆ ಕಲ್ಪಿಸಲಾಗಿದೆ. ಉಳಿದ ಗ್ರಾಮಗಳಲ್ಲಿಯೂ ಅಗತ್ಯವಿರುವ ಮುನ್ನೆಚ್ಚರಿಕಾ ಕ್ರಮ ಕೈಗೊಳ್ಳಲಾಗಿದೆ ಎಂದರು.

ಕೊಳವೆ ಬಾವಿಗಳಲ್ಲಿ ನೀರು ಕಡಿಮೆಯಾದ ತಕ್ಷಣ ಕೈಗೊಳ್ಳಬೇಕಾದ ಕ್ರಮಗಳ ಕುರಿತು ಅಧಿಕಾರಿಗಳಿಗೆ ವಿಶೇಷ ಸೂಚನೆ ನೀಡಲಾಗಿದೆ ಹಾಗೂ ಅದರಂತೆ ಕೊಳವೆ ಬಾವಿಗಳನ್ನು ಮರು ಆಳಗೊಳಿಸುವುದು, ಹೆಚ್ಚುವರಿ ಪೈಪ್ ಅಳವಡಿಸುವುದು, ಅಗತ್ಯವಿರುವ ಕಡೆಗಳಲ್ಲಿ ವಿದ್ಯುತ್ ಸಂಪರ್ಕ ಕಲ್ಪಿಸುವ ಬಗ್ಗೆ ಅಗತ್ಯ ಕ್ರಮವಹಿಸಲಾಗಿದೆ. ಜನಗಣತಿ ಕಾರ್ಯ ಜಿಲ್ಲೆಯಲ್ಲಿ ಉತ್ತಮ ಪ್ರಗತಿಯಲ್ಲಿದೆ ಎಂದರು.

ಸಭೆಯಲ್ಲಿ ಎಡಿಸಿ ಶಿವಾನಂದ ಮೂರ್ತಿ, ಉಪ ವಿಭಾಗಾಧಿಕಾರಿಗಳಾದ ಶ್ರೀನಿವಾಸ್, ಶಿವಮೂರ್ತಿ ಹಾಗೂ ಜಿಲ್ಲಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

ಐಎಫ್‌ಎಸ್ ಪರೀಕ್ಷೆ: ಅಭಿಷೇಕ್ ನಾಯಕ್‌ಗೆ 122ನೇ ರ್‍ಯಾಂಕ್

ಶ್ರೀರಂಗಪಟ್ಟಣ, ಮೇ 12– ಇಲ್ಲಿಗೆ ಸಮೀಪದ ಗಂಜಾಂ ಪುರಸಭೆ ಮಾಜಿ ಸದಸ್ಯ ಜಿ.ಎಸ್.ಶಿವು ಹಾಗೂ ರಾಜೇಶ್ವರಿ ದಂಪತಿ ಪುತ್ರ ಜಿ.ಎಸ್.ಅಭಿಷೇಕ್ ನಾಯಕ್ ಅವರು 2025ನೇ ಸಾಲಿನ ಭಾರತೀಯ ಅರಣ್ಯ ಸೇವೆ (ಐಎಫ್‌ಎಸ್) ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಅಖಿಲ ಭಾರತ ಮಟ್ಟದಲ್ಲಿ 122ನೇ ರ್‍ಯಾಂಕ್ ಪಡೆದಿದ್ದಾರೆ.

ಇಂಜಿನಿಯರಿಂಗ್ (ಮೆಕ್ಯಾನಿಕಲ್) ಪದವೀಧರ ಅಭಿಷೇಕ್ ನಾಯಕ್ 2024ರಲ್ಲಿ ನಡೆದ ಅಸಿಸ್ಟೆಂಟ್ ಕಮಾಂಡೆಂಟ್ (ಯುಪಿಎಸ್‌ಸಿ ಸಿಎಪಿಎಫ್‌ಎಸಿ) ಪರೀಕ್ಷೆಯಲ್ಲಿ ಅಖಿಲ ಭಾರತ ಮಟ್ಟದಲ್ಲಿ 424ನೇ ರ್‍ಯಾಂಕ್ ಪಡೆದಿದ್ದರು. ಎನ್‌ಸಿಸಿಯಲ್ಲಿ 'ಸಿ' ಸರ್ಟಿಫಿಕೇಟ್ ಪಡೆದಿರುವ ಅಭಿಷೇಕ್ ನಾಯಕ್ ರಾಜ್ಯ ಮಟ್ಟದ ಕುಸ್ತಿ ಪಟುವೂ ಹೌದು.

ಅಭಿಷೇಕ್ ನಾಯಕ್ ಅವರ ಮನೆಗೆ ತೆರಳಿ ಅವರನ್ನು ಅಭಿನಂದಿಸಿ ಮಾತನಾಡಿದ ಬಿಜೆಪಿ ಮುಖಂಡ ಇಂಡುವಾಳು ಸಚ್ಚಿದಾನಂದ, ಅಭಿಷೇಕ್ ನಾಯಕ್ ಅವರ ಸಾಧನೆ ಇತರರಿಗೆ ಮಾದರಿಯಾಗಿದೆ. ಗ್ರಾಮೀಣ ವಿದ್ಯಾರ್ಥಿಗಳು ಯುಪಿಎಸ್‌ಸಿ, ಕೆಪಿಎಸ್‌ಸಿ ಇತರ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಎದುರಿಸಲು ರಾಜ್ಯ ಸರ್ಕಾರ ಪ್ರತಿ ಜಿಲ್ಲೆಯಲ್ಲಿ ಪರೀಕ್ಷಾ ಕೇಂದ್ರಗಳನ್ನು ಆರಂಭಿಸುವ ಮೂಲಕ ಇಂತಹ ಪ್ರತಿಭಾವಂತರಿಗೆ ಅನುಕೂಲ ಮಾಡಿಕೊಡಬೇಕು ಎಂದು ಒತ್ತಾಯಿಸಿದರು.

ನನ್ನ ಮಗನ ಸಾಧನೆಯಿಂದ ನಮ್ಮ ಕುಟುಂಬದ ಎಲ್ಲರಿಗೂ ಖುಷಿಯಾಗಿದೆ ಎಂದು ಅಭಿಷೇಕ್‌ನಾಯಕ್ ಅವರ ತಂದೆ ಜಿ.ಎಸ್. ಶಿವು ಭಾವುಕರಾದರು.

ಅಭಿನಂದನೆ ಸ್ವೀಕರಿಸಿ ಮಾತನಾಡಿದ ಅಭಿಷೇಕ್ ನಾಯಕ್, ಐಎಫ್‌ಎಸ್ ಪರೀಕ್ಷೆಯಲ್ಲಿ ಅಖಿಲ ಭಾರತ ಮಟ್ಟದಲ್ಲಿ 122ನೇ ರ್‍ಯಾಂಕ್ ಬಂದಿರುವುದು ಸಮಾಧಾನದ ಸಂಗತಿ. ನಮ್ಮ ತಂದೆ, ತಾಯಿ, ಸಹೋದರನ ಸಹಕಾರ ಮತ್ತು ಪ್ರೋತ್ಸಾಹದಿಂದ ಈ ಸಾಧನೆ ಸಾಧ್ಯವಾಗಿದೆ. ಆದರೆ ಐಎಎಸ್ ಅಧಿಕಾರಿ ಆಗಬೇಕು ಎಂಬುದು ನನ್ನ ಹೆಬ್ಬಯಕೆ. ಹಾಗಾಗಿ ಮತ್ತೆ ಪರೀಕ್ಷೆ ಬರೆಯುತ್ತೇನೆ ಎಂದರು.

ಈ ವೇಳೆ ಬಿಜೆಪಿ ನಗರ ಘಟಕದ ಅಧ್ಯಕ್ಷ ಜಿ.ಇ.ಸುಧಾಕರ್, ಪುರಸಭೆ ಮಾಜಿ ಸದಸ್ಯರಾದ ಎಸ್.ಟಿ.ರಾಜು, ಎಸ್.ಪ್ರಕಾಶ್, ಎಂ.ಶ್ರೀನಿವಾಸ್, ಜಯ ಲಕ್ಷ್ಮಿ, ನಿಂಗರಾಜು, ನಾಗರತ್ನ, ಮುಖಂಡರಾದ ಈ.ಪ್ರಕಾಶ್, ಎ.ಟಿ.ಜಯಕುಮಾರ್, ಪ್ರಭಾಕರ್, ರಮೇಶ್, ಶಂಕರ್, ಪ್ರಿಯಾ ರಮೇಶ್, ಗೋವಿಂದ ರಾಜು, ಮಾನಸ, ಶೇಖರ್ ಇದ್ದರು.



ಅಭಿಷೇಕ್ ನಾಯಕ್ ಅವರನ್ನು ಮುಖಂಡ ಇಂಡುವಾಳು ಸಚ್ಚಿದಾನಂದ ಅಭಿನಂದಿಸಿದರು.

ಸ್ಥಳೀಯ ಸಂಸ್ಥೆ ಚುನಾವಣೆಗೆ 'ಕೈ' ಪಡೆ ಸಜ್ಜಾಗಿ

ನಾಗಮಂಗಲ, ಮೇ 12– ಮುಂಬರುವ ಜಿಪಂ, ತಾಪಂ ಸೇರಿದಂತೆ ಸ್ಥಳೀಯ ಸಂಸ್ಥೆ ಚುನಾವಣೆಗಳನ್ನು ಒಟ್ಟಾಗಿ ಎದುರಿಸಲು ಬಿಎಲ್‌ಓಗಳು ಹಾಗೂ ಪಕ್ಷದ ಏಜೆಂಟ್‌ಗಳ ಕಾರ್ಯಾಗಾರ ಅವಶ್ಯಕತೆ ಇದ್ದು, ಕಾರ್ಯಕರ್ತರಿಗಾಗಿಯೇ ನಡೆಯುವ ಈ ಚುನಾವಣೆ ಎದುರಿಸಲು ಕಾಂಗ್ರೆಸ್ ಪಡೆ ಸಜ್ಜಾಗಬೇಕೆಂದು ಡಿಸಿಸಿ ಬ್ಯಾಂಕ್ ಅಧ್ಯಕ್ಷ ಸಚಿನ್ ಚಲುವರಾಯ ಸ್ವಾಮಿ ಕರೆ ನೀಡಿದರು.

ತಾಲೂಕು ಬ್ಲಾಕ್ ಕಾಂಗ್ರೆಸ್ ವತಿಯಿಂದ ಪಟ್ಟಣದ ಗುರುಭವನದಲ್ಲಿ ಆಯೋಜಿಸಿದ್ದ ಕಾಂಗ್ರೆಸ್ ಪಕ್ಷದ ಬೂತ್ ಮಟ್ಟದ ಬಿಎಲ್‌ಓಗಳು ಹಾಗೂ ಪಕ್ಷದ ಏಜೆಂಟ್‌ಗಳ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದ ಅವರು, ಕಾರ್ಯಾಗಾರದ ಮುಖ್ಯ ಉದ್ದೇಶಗಳು ಮತ್ತು ಮುಖ್ಯಾಂಶಗಳು ಮತದಾರರ ಪಟ್ಟಿ ಪರಿಷ್ಕರಣೆ, ಮತದಾರರ ಪಟ್ಟಿಯಿಂದ ಹೆಸರುಗಳನ್ನು ತೆಗೆದು ಹಾಕುವುದು, ಸೇರಿಸುವುದು ಅಥವಾ ತಿದ್ದುಪಡಿ ಮಾಡುವ ಪ್ರಕ್ರಿಯೆಯಲ್ಲಿ ಬೂತ್ ಮಟ್ಟದ ಏಜೆಂಟ್‌ಗಳಿಗೆ ತರಬೇತಿ ನೀಡುವುದು. ಬೂತ್ ಬಲವರ್ಧನೆ ಮಾಡಿ ಪ್ರತಿ ಬೂತ್‌ನಲ್ಲೂ ಸಮರ್ಥರನ್ನು ನೇಮಕ ಮಾಡುವ ಮೂಲಕ ಪಕ್ಷದ ಸಂಘಟನೆ ಯನ್ನು ಬಲಪಡಿಸುವುದಾಗಿದೆ ಎಂದು ಸ್ಪಷ್ಟಪಡಿಸಿದರು.

ಚುನಾವಣಾ ಆಯೋಗದ ನಿಯಮಗಳು, ನಮೂನೆಗಳ ಬಳಕೆ ಮತ್ತು ಸ್ಥಳೀಯ ಮತದಾರರ ಪಟ್ಟಿಯ ಸಮಸ್ಯೆಗಳ ಬಗ್ಗೆ ತರಬೇತಿ ನೀಡುವುದು. ಕಾರ್ಯಕರ್ತರಿಗೆ ಬೂತ್ ಮಟ್ಟದ ಜವಾಬ್ದಾರಿಗಳನ್ನು ಹಂಚಿ, ಮತದಾರರೊಂದಿಗೆ ನೇರ ಸಂಪರ್ಕ ಸಾಧಿಸಲು ಉತ್ತೇಜಿಸುವುದು. ಕರ್ನಾಟಕದಲ್ಲಿಯೂ ಸಹ ಕಾಂಗ್ರೆಸ್ ಪಕ್ಷದ ಜಿಲ್ಲಾ ಮತ್ತು ಬ್ಲಾಕ್ ಸಮಿತಿಗಳು ಇಂತಹ ಕಾರ್ಯಾಗಾರಗಳನ್ನು ಆಯೋಜಿಸಿ, ಸ್ಥಳೀಯ ನಾಯಕರ ಮೂಲಕ ಬೂತ್ ಮಟ್ಟದ ಕಾರ್ಯಕರ್ತರಿಗೆ ಮಾರ್ಗದರ್ಶನ ನೀಡುವ ಜೊತೆಗೆ ಈ ಪ್ರಕ್ರಿಯೆಯು ಮುಂಬರುವ ಚುನಾವಣೆಗಳಿಗೆ ಪಕ್ಷವನ್ನು ಸಜ್ಜುಗೊಳಿಸಲು ಕಾರ್ಯಕರ್ತರು ಸಹಕರಿಸುವ ಮೂಲಕ ಪಕ್ಷದ ಬಲವರ್ಧನೆಗೆ ಸಜ್ಜುಗೊಳ್ಳಬೇಕಾಗುತ್ತದೆ ಎಂದು ತಿಳಿಸಿದರು.

ತಾಲೂಕು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರಾಜೇಶ್ ಮಾತನಾಡಿ, ಕಾಂಗ್ರೆಸ್ ಪಕ್ಷದ ಬೆಳವಣಿಗೆ ಹಾಗೂ ಕಾರ್ಯಕರ್ತರ ಉತ್ಸಾಹ ಬಲವರ್ಧನೆಗೆ ಗ್ರಾಮಾಂತರ ಪ್ರದೇಶದಲ್ಲಿ ಬೂತ್ ಮಟ್ಟದ ಬಿಎಲ್‌ಓ ಸಹಕಾರ ಮುಖ್ಯವಾಗಿದೆ. ಕಾಂಗ್ರೆಸ್ ಪಕ್ಷವು ಮತದಾರರ ಪಟ್ಟಿಯ ಪರಿಷ್ಕರಣೆ, ಹೊಸ ಮತದಾರರ ನೋಂದಣಿ ಮತ್ತು ಬೂತ್ ಮಟ್ಟದ ಸಂಘಟನೆಯನ್ನು ಬಲಪಡಿಸಲು ಬೂತ್ ಮಟ್ಟದ ಅಧಿಕಾರಿಗಳ ಕಾರ್ಯಾಗಾರಗಳನ್ನು ನಿಯಮಿತವಾಗಿ ಆಯೋಜಿಸುವ ಮುಖಾಂತರ ಕಾಂಗ್ರೆಸ್ ಪಕ್ಷವನ್ನು ಬೂತ್ ಮಟ್ಟದಲ್ಲಿ ಬೆಳೆಸಲು ಅನುಕೂಲವಾಗುತ್ತದೆ ಎಂದರು.

ಸಮಾರಂಭದಲ್ಲಿ ಕಾಂಗ್ರೆಸ್ ಮುಖಂಡರಾದ ಹೆಚ್.ಟಿ.ಕೃಷ್ಣೇಗೌಡ, ಸುನೀಲ್ ಲಕ್ಷ್ಮಿಕಾಂತ್, ತಟ್ಟಹಳ್ಳಿ ನರಸಿಂಹ ಮೂರ್ತಿ, ಯಶೋಧಮ್ಮ, ಕೃಷ್ಣೇಗೌಡ, ಶರತ್ ರಾಮಣ್ಣ ಉಪಸ್ಥಿತರಿದ್ದರು.



ಕಾರ್ಯಾಗಾರವನ್ನು ಡಿಸಿಸಿ ಬ್ಯಾಂಕ್ ಅಧ್ಯಕ್ಷ ಸಚಿನ್ ಉದ್ಘಾಟಿಸಿದರು.

ಕಳಪೆ ಚರಂಡಿ ಕಾಮಗಾರಿ: ಸ್ಥಳೀಯರ ಆಕ್ರೋಶ



ಭಾರತೀನಗರ, ಮೇ 12– ಇಲ್ಲಿನ ಮದ್ದೂರು–ಮಳವಳ್ಳಿ ಹೆದ್ದಾರಿಗೆ ಹೊಂದಿಕೊಂಡಂತಿರುವ ಆಲಭುಜನಹಳ್ಳಿ ರಸ್ತೆ ತಿರುವಿನಲ್ಲಿ ಚರಂಡಿ ನಿರ್ಮಾಣ ಕಾಮಗಾರಿಯನ್ನು ಅರ್ಧಕ್ಕೆ ನಿಲ್ಲಿಸಿದ್ದು, ಕಳಪೆ ಕಾಮಗಾರಿ ಮಾಡಲಾಗಿದೆ ಎಂದು ಸ್ಥಳೀಯರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಭಾರತೀನಗರದ ಆಲಭುಜನಹಳ್ಳಿ ರಸ್ತೆ ಮತ್ತು ಚರಂಡಿಯನ್ನು ಅಭಿವೃದ್ಧಿ ಪಡಿಸಲಾಗಿದ್ದು, ಆದರೆ ಭಾರತೀನಗರದ ಮದ್ದೂರು–ಮಳವಳ್ಳಿಗೆ ಹೊಂದಿಕೊಂಡಂತಿರುವ ಚರಂಡಿಗೆ ಜೋಡಣೆ ಮಾಡದೆ ಅರ್ಧಕ್ಕೆ ನಿಲ್ಲಿಸಿ ಕಳಪೆ ಕಾಮಗಾರಿ ಮಾಡಿದ್ದಾರೆ. ಇದರಿಂದ ನೀರು ರಸ್ತೆಯಲ್ಲಿ ಹರಿಯುವಂತಾಗಿದೆ. ಜೊತೆಗೆ ಸಾರ್ವಜನಿಕರು ಸಹ ಅಲ್ಲಿ ಕಸವನ್ನು ಎಸೆದು ಕಲುಷಿತಗೊಳಿಸುತ್ತಿದ್ದಾರೆ. ಇದಕ್ಕೆ ಸಂಬಂಧಿಸಿದ ಇಲಾಖೆ ಅಧಿಕಾರಿಗಳು ಕೂಡಲೇ ಸ್ಥಳ ಪರಿಶೀಲಿಸಿ ಗುತ್ತಿಗೆದಾರ ಹಾಗೂ ಇಂಜಿನಿಯರ್‌ಗಳ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಯೋಗಾನಂದ ಒತ್ತಾಯಿಸಿದ್ದಾರೆ.

ಶ್ರೀರಾಮಾಂಜನೇಯ ಸೇವಾ ಸಮಿತಿ ವಾರ್ಷಿಕ ಮಹಾಸಭೆ

ಪಾಂಡವಪುರ, ಮೇ 12– ಪಟ್ಟಣದ ಹಿರೋಡೆ ಬೀದಿ ಒಕ್ಕಲಿಗ ಜನಾಂಗದ ಶ್ರೀ ರಾಮಾಂಜನೇಯ ಸೇವಾ ಸಮಿತಿಯ ಸರ್ವ ಸದಸ್ಯರ ವಾರ್ಷಿಕ ಮಹಾಸಭೆ ಅಧ್ಯಕ್ಷ ಪಿ.ರಮೇಶ್ ಅಧ್ಯಕ್ಷತೆಯಲ್ಲಿ ನಡೆಯಿತು.

ಸಂಘದ ಆವರಣದಲ್ಲಿ ನಡೆದ ವಾರ್ಷಿಕ ಮಹಾಸಭೆಯಲ್ಲಿ ಸದಸ್ಯರು ಸಂಘದಲ್ಲಿ ನಡೆದಿರುವ ಹಣಕಾಸಿನ ಆಡಿಟ್ ವರದಿ ಹಾಗೂ ಸಂಸದರು, ಶಾಸಕರ ಅನುದಾನ ಎಷ್ಟು ಬಿಡುಗಡೆಯಾಗಿದೆ. ಖರ್ಚು ಮಾಡಿರುವ ಬಗ್ಗೆ ಮಾಹಿತಿ ನೀಡುವಂತೆ ಸದಸ್ಯ ಪಿ.ಎಲ್.ಆದರ್ಶ, ಗಿರೀಶ್ ಅವರು ಆಡಳಿತ ಮಂಡಳಿಯನ್ನು ಪ್ರಶ್ನಿಸಿದರು.

ಪುರಸಭೆಗೆ ಕಟ್ಟಬೇಕಿರುವ ಸಂಘದ ಆಸ್ತಿಯ ತೆರಿಗೆ ಕಳೆದ 3 ವರ್ಷದಿಂದ ಬಾಕಿ ಉಳಿದಿದೆ. ಸಂಘದಲ್ಲಿ ವ್ಯವಹಾರಿಕವಾಗಿ ಅಭಿವೃದ್ಧಿ ಕೆಲಸಗಳು ನಡೆಯಬೇಕಾದರೆ ಸಂಘದ ಬಾಕಿ ತೆರಿಗೆ ಹಣ ಪಾವತಿಸುವಂತೆ ಸಭೆಯಲ್ಲಿ ಷೇರುದಾರರು ಒತ್ತಾಯಿಸಿದರು. ಹಾಗಾಗಿ ಸಭೆಯಲ್ಲಿ ಪುರಸಭೆಯ ಬಾಕಿ ತೆರಿಗೆ ಪಾವತಿಸಲು ತೀರ್ಮಾನಿಸಲಾಯಿತು.

ಸಂಘದ ಆದಾಯ ಹೆಚ್ಚಿಸುವ ನಿಟ್ಟಿನಲ್ಲಿ ಆಡಳಿತ ಮಂಡಳಿ ಕ್ರಮವಹಿಸಿ, ಜೊತೆಗೆ ಸಂಘದಲ್ಲಿ ವಾಣಿಜ್ಯ ಮಳಿಗೆ ನಿರ್ಮಾಣ ಮಾಡಲು ಆಡಳಿತ ಮಂಡಳಿ ಮುಂದಾಗಬೇಕು. ಸಂಘದ ಆವರಣದಲ್ಲಿ ಸ್ವಚ್ಛತೆ ಕಾಪಾಡಲು ಕ್ರಮವಹಿಸುವ ಕುರಿತು ಚರ್ಚಿಸಲಾಯಿತು.




ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯಲ್ಲಿ ಅಧ್ಯಕ್ಷ ಪಿ.ರಮೇಶ್ ಮಾತನಾಡಿದರು.

ಅಧ್ಯಕ್ಷ ಪಿ.ರಮೇಶ್ ಮಾತನಾಡಿ, ನಮ್ಮ ಪೂರ್ವಿಕರು ಕಟ್ಟಿರುವ ಒಕ್ಕಲಿಗ ಜನಾಂಗದ ಶ್ರೀರಾಮಾಂಜನೇಯ ಸೇವಾ ಸಮಿತಿ ಜವಾಬ್ದಾರಿಯನ್ನು ನನಗೆ ನೀಡಿದ್ದಾರೆ. ನಮ್ಮ ಆಡಳಿತ ಮಂಡಳಿಯವರು ಷೇರುದಾರರ ಸಹಕಾರದೊಂದಿಗೆ ಸಂಘವನ್ನು ಅಭಿವೃದ್ಧಿಪಡಿಸುವ ಕಡೆಗೆ ಪ್ರಾಮಾಣಿಕವಾಗಿ ಕೆಲಸ ಮಾಡುತ್ತೇವೆ. ಎಲ್ಲರೂ ಸಹಕಾರ ನೀಡಬೇಕು ಎಂದರು.

ಸಭೆಯಲ್ಲಿ ಗೌರವಾಧ್ಯಕ್ಷ ಶಿವಣ್ಣ, ಉಪಾಧ್ಯಕ್ಷ ಕೆ.ಲಕ್ಷ್ಮೀನಾರಾಯಣ, ಕಾರ್ಯದರ್ಶಿ ಆರ್.ಚನ್ನಕೇಶವ, ನಿರ್ದೇಶಕರಾದ ಕೆ.ವೆಂಕಟರಮಣೇಗೌಡ, ನರಸಿಂಹೇಗೌಡ, ಕೆ.ಪ್ರಸಾದ್, ಹೆಚ್.ಪಿ.ನವೀನಕುಮಾರ್, ಚಂದ್ರೇಗೌಡ, ಆರ್.ಕೋದಂಡ, ಎನ್.ದಿಲೀಪ್, ಎಸ್.ಚಂದ್ರಶೇಖರ್, ವಿ.ಗಿರೀಶ್, ಎಸ್.ಚಂದ್ರಶೇಖರ್, ಸೋಮಶೇಖರ್, ಪಿ.ಎಲ್.ಹರ್ಷ ಸೇರಿದಂತೆ ಹಲವರಿದ್ದರು.

ನಾಳೆ ವಿದ್ಯುತ್ ವ್ಯತ್ಯಯ



ಮಂಡ್ಯ, ಮೇ 12– ವಿಸಿ ಫಾರಂ ವಿದ್ಯುತ್ ವಿತರಣಾ ಕೇಂದ್ರದಲ್ಲಿ ತ್ರೈಮಾಸಿಕ ನಿರ್ವಹಣಾ ಕಾಮಗಾರಿ ಹಮ್ಮಿಕೊಂಡಿರುವುದರಿಂದ ಮೇ 14 ರಂದು ಬೆಳಗ್ಗೆ 9 ರಿಂದ ಸಂಜೆ 6ರವರೆಗೆ ವಿ.ಸಿ. ಫಾರಂ, ಶಿವಳ್ಳಿ, ದುದ್ದ, ಬಿ.ಹಟ್ನ, ಬೇವಕಲ್ಲು, ಹುಲಿಕೆರೆ, ಚಂದಗಾಲು, ಹುಲ್ಲೇನಹಳ್ಳಿ, ಬಿಳಗುಲಿ ಹಾಗೂ ಸುತ್ತಮುತ್ತಲ ಗ್ರಾಮಗಳಲ್ಲಿ ವಿದ್ಯುತ್ ವ್ಯತ್ಯಯ ಉಂಟಾಗಲಿದೆ ಎಂದು ಪ್ರಕಟಣೆ ತಿಳಿಸಿದೆ.

ಮೂರನೇ ಪುಟದಿಂದ

ಮೇ 3ರಂದು ನಡೆದಿದ್ದ ನೀಟ್ ರದ್ದು

ಸಹಕಾರ ನೀಡುವುದಾಗಿ ತಿಳಿಸಿದೆ. ಮರುಪರೀಕ್ಷೆ ಬರೆಯಲು ಹೊಸದಾಗಿ ಹೆಸರು ನೋಂದಣಿ ಮಾಡಿಸಬೇಕಿಲ್ಲ ಎಂದಿರುವ ಸಂಸ್ಥೆ, ಹೆಚ್ಚುವರಿ ಪರೀಕ್ಷಾ ಶುಲ್ಕವನ್ನೂ ವಿಧಿಸುವುದಿಲ್ಲ. ಈಗಾಗಲೇ ಪಾವತಿಸಿರುವ ಶುಲ್ಕ ಹಿಂತಿರುಗಿಸುವುದಾಗಿ ಹೇಳಿದೆ. ಮರುಪರೀಕ್ಷೆಗೆ ಸಂಬಂಧಿಸಿದಂತೆ ಎನ್‌ಟಿಎನ ಅಧಿಕೃತ ವೆಬ್‌ಸೈಟ್ ಮೂಲಕವೇ ಮಾಹಿತಿ ಪಡೆದುಕೊಳ್ಳಬೇಕು ಎಂದು ವಿದ್ಯಾರ್ಥಿಗಳು ಮತ್ತು ಪೋಷಕರಿಗೆ ಮನವಿ ಮಾಡಿದೆ.

ಈ ಹಿಂದೆ ರಾಜಾಸ್ತಾನ ರಾಜ್ಯದಲ್ಲೇ ಪ್ರಶ್ನೆ ಪತ್ರಿಕೆ ಸೋರಿಕೆಯಾಗಿ, ಆಗಲೂ ಸಿಬಿಐ ತನಿಖೆ ನಡೆಸಿ ಕೆಲವರನ್ನು ವಶಕ್ಕೆ ಪಡೆಯಲಾಗಿತ್ತು. 2026–27ನೇ ಸಾಲಿಗೆ ನಡೆದ ನೀಟ್ ಪರೀಕ್ಷೆ ಪ್ರಶ್ನೆ ಪತ್ರಿಕೆ ಮತ್ತೆ ಅದೇ ರಾಜ್ಯದಲ್ಲಿ ಸೋರಿಕೆಯಾಗಿರುವ ಆರೋಪಗಳು ಕೇಳಿಬಂದಿವೆ. ಪರೀಕ್ಷೆಗಿಂತ ಮೊದಲು ಸೋರಿಕೆಯಾದ ಪ್ರಶ್ನೆ ಪತ್ರಿಕೆ ಯಲ್ಲಿನ ಪಶ್ನೆಗಳು ಅಸಲಿ ಪ್ರಶ್ನೆ ಪತ್ರಿಕೆಯ ಲ್ಲಿನ ಪ್ರಶ್ನೆಗಳೊಂದಿಗೆ ಹೋಲಿಕೆ ಆಗುತ್ತಿವೆ ಎಂಬ ದೂರಿನ ಹಿನ್ನೆಲೆಯಲ್ಲಿ ರಾಜಾಸ್ತಾನ ಪೊಲೀಸರು ವಿಶೇಷ ಕಾರ್ಯಾಚರಣೆ ನಡೆಸಿ ವರದಿ ನೀಡಿದ್ದರು. ರಾಷ್ಟ್ರದಲ್ಲಿ ಒಟ್ಟಾರೆ 22.79 ಲಕ್ಷ ವಿದ್ಯಾರ್ಥಿಗಳು ನೀಟ್ ಪರೀಕ್ಷೆ ತೆಗೆದುಕೊಂಡಿದ್ದು, ಇದರಲ್ಲಿ ರಾಜ್ಯದ 1.50 ಲಕ್ಷ ಅಭ್ಯರ್ಥಿಗಳಿದ್ದಾರೆ.

ಪ್ರಶ್ನೆ ಪತ್ರಿಕೆ ಸೋರಿಕೆ ಕುರಿತು ಕೇಂದ್ರದ ತನಿಖಾ ಸಂಸ್ಥೆಗಳ ಪ್ರಾಥಮಿಕ ವರದಿ ಆಧಾರದ ಮೇಲೆ ಮರುಪರೀಕ್ಷೆಗೆ ನಿರ್ಧರಿಸಲಾಯಿತು.

ಪ್ರಶ್ನೆ ಪತ್ರಿಕೆ ಸೋರಿಕೆ ದೊಡ್ಡ ಅಪಮಾನ

ಉತ್ತರ ನೀಡದಿರುವುದೇ ಒಳ್ಳೆಯದು ಎಂದಿದ್ದಾರೆ. ಅವರು ಶಿಕ್ಷಣ ಸಚಿವರಾಗಿದ್ದವರು, ಇದು ಸರಿಯೇ ಇಲ್ಲವೇ ಎಂದು ಹೇಳಬೇಕಲ್ಲವೇ. ಬೇರೆ ಸಮಯದಲ್ಲಿ ಮಾತನಾಡುವ ಸಂಸದರು ಹಾಗೂ ಕೇಂದ್ರದ ಸಚಿವರು ಈ ವಿಚಾರದ ಬಗ್ಗೆಯೂ ಮಾತನಾಡಬೇಕು. ಇದು ಯಾರ ವೈಫಲ್ಯ ಎಂದು ಹೇಳಬೇಕು. ಈ ಪ್ರಕರಣ ಕರ್ನಾಟಕದಲ್ಲಿ ಆಗಿದ್ದಿದ್ದರೆ ಇಷ್ಟು ಹೊತ್ತಿಗೆ ಬಿಲ್ಡಿಂಗ್ ಮೇಲೆ ಕೂತು ಕೂಗಾಡುತ್ತಿದ್ದರು ಎಂದು ವಾಗ್ದಾಳಿ ನಡೆಸಿದರು.

ಬುಧವಾರ ಪ್ರಮುಖ ಘೋಷಣೆ: ಅಧಿಕಾರಿಗಳ ಜೊತೆಗಿನ ಸಭೆ ಬಗ್ಗೆ ಪ್ರತಿಕ್ರಿಯಿಸಿ, ಬೆಂಗಳೂರಿನ ಜನರಿಗೆ ನೆರವಾಗಲು ಬುಧವಾರ ಕೆಲವು ಪ್ರಮುಖ ಘೋಷಣೆಗಳನ್ನು ಮಾಡುತ್ತಿರುವ ಹಿನ್ನೆಲೆ ಜೊತೆಗೆ ಈಗಾಗಲೇ ಕೈಗೊಂಡಿರುವ ಯೋಜನೆಗಳ ಪ್ರಗತಿ ಕುರಿತು ಅಧಿಕಾರಿಗಳ ಜೊತೆ ಚರ್ಚೆ ಮಾಡಿ ಮಾರ್ಗದರ್ಶನ ನೀಡಲಾಗಿದೆ ಎಂದರು.

ಪರಿಷತ್ ಸದಸ್ಯರಿಗೆ ಅವಕಾಶ ನೀಡಿ

ಮಂದಿ ಪರಿಷತ್ ಸದಸ್ಯರಿಗೆ ಕ್ಯಾಬಿನೆಟ್‌ನಲ್ಲಿ ಅವಕಾಶ ನೀಡಬೇಕು ಎಂದು ಒತ್ತಾಯಿಸಿದ್ದಾರೆ. ಇದೇ ವೇಳೆ ನಾಯಕತ್ವ ಬದಲಾವಣೆ ಬಗ್ಗೆ ಚರ್ಚೆ ನಡೆದು ಮುಖ್ಯಮಂತ್ರಿ ಗೊಂದಲ ಶೀಘ್ರ ಬಗೆಹರಿಸುವಂತೆ ಮನವಿ ಮಾಡಿದ್ದಾರೆ ಎನ್ನಲಾಗಿದೆ. ಅಲ್ಲದೇ ನಿಗಮ ಮಂಡಳಿಯಲ್ಲಿ ಕಾರ್ಯಕರ್ತರಿಗೆ ಹೆಚ್ಚಿನ ಆದ್ಯತೆ ನೀಡಲು ಪರಿಷತ್ ಸದಸ್ಯರು ಮನವಿ ಮಾಡಿದ್ದಾರೆ.

ಹೊಸ ಪ್ರವೇಶ ಪತ್ರ; ಎಕ್ಸಾಂ ಫೀಸ್ ವಾಪಸ್!

ಜಿಪಿಎಸ್–ಟ್ರ್ಯಾಕ್ ಮಾಡಲಾದ ವಾಹನಗಳಲ್ಲಿ ಪೇಪರ್ ಸಾಗಿಸಲಾಗಿತ್ತು. ಜೊತೆಗೆ, ಪರೀಕ್ಷಾ ಕೇಂದ್ರಗಳಲ್ಲಿ ಕೇಂದ್ರ ನಿಯಂತ್ರಣ ಕೊಠಡಿಯಿಂದ ಎಐ ನೆರವಿನ ಸಿಸಿಟಿವಿ ಕಣ್ಗಾವಲಿನಲ್ಲಿ ನಿಗಾ ಇಟ್ಟರೂ, ಪೇಪರ್ ಲೀಕ್ ಆಗಿರೋದು ಅಚ್ಚರಿ ಮೂಡಿಸಿದೆ. ಇನ್ನು, ಮರುಪರೀಕ್ಷೆಗೆ ವಿದ್ಯಾರ್ಥಿಗಳು ಬೇಸರ ವ್ಯಕ್ತಪಡಿಸಿದ್ದಾರೆ. ಎಲ್ಲಿ ಪೇಪರ್ ಲೀಕ್ ಆಗಿದ್ಯೋ ಅಲ್ಲಿ ಮಾತ್ರ ಪರೀಕ್ಷೆ ಮಾಡಲಿ. ಮತ್ತೆ ಓದಬೇಕು ಅಂತೆಲ್ಲಾ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಈ ಮಧ್ಯೆ, ನೀಟ್ ಪೇಪರ್ ಲೀಕ್ ಖಂಡಿಸಿ ಎನ್‌ಎಸ್‌ಯುಐ ದೆಹಲಿಯಲ್ಲಿ ಪ್ರತಿಭಟನೆ ಮಾಡಿದೆ. ಸದ್ಯ ರಾಜಸ್ಥಾನದ ಎಸ್‌ಓಜಿ ಹಾಗೂ ಸಿಬಿಐ ಇಡೀ ಜಾಲ, ಹಂಚಿಕೆ ಕೇಂದ್ರದ ಬೆನ್ನುಬಿದ್ದಿದ್ದಾರೆ.

ನೀಟ್ ಪರೀಕ್ಷೆ ಪ್ರಶ್ನೆಪತ್ರಿಕೆ ಸೋರಿಕೆ ಆರೋಪದ ಹಿನ್ನೆಲೆ ಮೇ 8ರಂದು ಕೇಂದ್ರ ತನಿಖಾ ಸಂಸ್ಥೆಗಳ ಮೂಲಕ ಪರಿಶೀಲನೆಗೆ ಕೇಂದ್ರ ಸರ್ಕಾರಕ್ಕೆ ಎನ್‌ಟಿಎ ಮನವಿ ಮಾಡಿತ್ತು. ಇನ್ನು, ರಾಜಸ್ಥಾನ ಸರ್ಕಾರ ವಿಶೇಷ ತನಿಖಾ ತಂಡ ರಚಿಸಿದ್ದು, ಅಕ್ರಮದ ಬೆನ್ನು ಹತ್ತಿದೆ. ಈಗಾಗಲೇ, ಪ್ರಶ್ನೆ ಪತ್ರಿಕೆ ಅಕ್ರಮದ ಕಿಂಗ್‌ಪಿನ್ ಸೇರಿದಂತೆ 9 ಕಿಡಿಗೇಡಿಗಳನ್ನು 5 ರಾಜ್ಯಗಳಲ್ಲಿ ಪೊಲೀಸರು ಬಂಧಿಸಿದ್ದಾರೆ. ರಾಜಸ್ಥಾನ ಮಾತ್ರವಲ್ಲ ಮಹಾರಾಷ್ಟ್ರ, ಜಮ್ಮು ಕಾಶ್ಮೀರ, ಬಿಹಾರ, ಉತ್ತರಾಖಂಡ್, ತೆಲಂಗಾಣ ಹಾಗೂ ಕೇರಳದಲ್ಲಿ ಪ್ರಶ್ನೆ ಪತ್ರಿಕೆ ಸೋರಿಕೆಯಾಗಿದೆ ಎನ್ನಲಾಗಿದೆ. ಹೀಗಾಗಿ, ಸಿಬಿಐ ಸಮಗ್ರ ತನಿಖೆ ಆರಂಭಿಸಿದ್ದು, ರಾಜಸ್ಥಾನ, ಮಹಾರಾಷ್ಟ್ರ ಹಾಗೂ ಉತ್ತರಾಖಂಡ್‌ನಲ್ಲಿ ರೇಡ್ ಮಾಡುವ ಸಾಧ್ಯತೆ ಇದೆ. 2024 ಮತ್ತು 2025ರಲ್ಲೂ ಇಂತಹದೇ ಆರೋಪಗಳು ಕೇಳಿಬಂದಿದ್ದವು. 2024ರ ಪ್ರಕರಣದಲ್ಲಿ ಸಿಬಿಐ ಪಾಟ್ನಾ ಮತ್ತು ಹಜಾರಿಬಾಗ್‌ನಲ್ಲಿ ಕೆಲವು ಆರೋಪಿಗಳನ್ನು ಬಂಧಿಸಿತ್ತು.

ಮಳಿಗೆಗಳ ಬಾಡಿಗೆ 23 ವರ್ಷದ ನಂತರ ಪರಿಷ್ಕರಣೆ!

ಚದರ ಅಡಿಗೆ 260 ರೂ. ದೇವರಾಜ ಮಾರುಕಟ್ಟೆಯ ಮಳಿಗೆಗಳಿಗೆ ಒಂದು ಚದರ ಅಡಿಗೆ 264 ರೂ.ನಂತೆ ಬಾಡಿಗೆ ಪರಿಷ್ಕರಿಸಲಾಗಿತ್ತು. ಇದಕ್ಕೆ ಬಾಡಿಗೆದಾರರು ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದರು. ಅಲ್ಲದೆ, ಬಾಡಿಗೆದಾರರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದೆ ಏಕಪಕ್ಷೀಯವಾಗಿ ಬಾಡಿಗೆ ಹೆಚ್ಚಳ ಮಾಡಲಾಗಿದೆ ಎಂದು ದೂರಿದ್ದರು. ಇದರಿಂದ ಬಾಡಿಗೆ ಪರಿಷ್ಕರಣೆ ಪ್ರಸ್ತಾಪ ನೆನೆಗುದಿಗೆ ಬಿದ್ದಿತ್ತು.

ಇದನ್ನು ಮನಗಂಡು, ಮಹಾನಗರ ಪಾಲಿಕೆ ಜಾಣ್ಮೆಯ ಹೆಜ್ಜೆ ಇಟ್ಟಿದ್ದು, ಬಾಡಿಗೆದಾರರೇ ಸ್ವಯಂ ಪ್ರೇರಣೆಯಿಂದ ಬಾಡಿಗೆ ಹೆಚ್ಚಿಸುವಂತೆ ಸಲಹೆ ನೀಡಿತ್ತು. ಇದಕ್ಕೆ ಪಾಲಿಕೆ ಲೋಕೋಪಯೋಗಿ ಇಲಾಖೆ ಮೂಲಕ ಬಾಡಿಗೆ ಪರಿಷ್ಕರಣೆಯ ದರ ಪಟ್ಟಿಯನ್ನು ಬಾಡಿಗೆದಾರರಿಗೆ ನೀಡಿತ್ತು. ಪರಿಷ್ಕರಣೆ ದರ ಪಟ್ಟಿಯಲ್ಲಿ ಕೆಲವು ಲೋಪದೋಷವಿದ್ದು, ಈ ಹಿನ್ನೆಲೆಯಲ್ಲಿ ಸಣ್ಣ ಪ್ರಮಾಣದ ವಿನಾಯಿತಿಯೊಂದಿಗೆ ಸ್ವಯಂ ಬಾಡಿಗೆ ಪರಿಷ್ಕರಣೆ ಮಾಡುವುದಾಗಿ ಬಾಡಿಗೆದಾರರು ತಿಳಿಸಿದ್ದು, ಇದೀಗ ಈ ಹಿಂದೆ ಪಾವತಿಸುತ್ತಿದ್ದ ಬಾಡಿಗೆಗಿಂತ ಎರಡು ಪಟ್ಟು ಹೆಚ್ಚಳ ಮಾಡಿಕೊಂಡಿದ್ದಾರೆ. ಸಯ್ಯಾಜಿರಾವ್ ರಸ್ತೆಯಲ್ಲಿರುವ ಪಾಲಿಕೆಯ ಮಳಿಗೆಯ ಬಾಡಿಗೆದಾರರು ಈ ಹಿಂದೆ 5 ಸಾವಿರ ರೂ. ಬಾಡಿಗೆ ಕಟ್ಟುತ್ತಿದ್ದರು. ಇದೀಗ ಮಾಸಿಕ 15 ಸಾವಿರ ರೂ. ಮತ್ತು ಶೇ.18ರಷ್ಟು ಜಿಎಸ್‌ಟಿ ಕಟ್ಟುತ್ತಿದ್ದಾರೆ. ದೇವರಾಜ ಮಾರುಕಟ್ಟೆಯ ಆರ್‌ಸಿಸಿ ಮಳಿಗೆಗೆ ಈ ಹಿಂದೆ 2ರಿಂದ 4 ಸಾವಿರ ರೂ. ಬಾಡಿಗೆ ನೀಡುತ್ತಿದ್ದರು. ಈಗ 10 ಸಾವಿರ ರೂ. ಬಾಡಿಗೆ ಪಾವತಿಸುವಂತಾಗಿದೆ. 200ರಿಂದ 300 ರೂ. ಪಾವತಿಸುತ್ತಿದ್ದ ಸಣ್ಣ ಮಳಿಗೆಯವರು ಈಗ 1ರಿಂದ 1500 ರೂ. ಪಾವತಿಸುತ್ತಿದ್ದಾರೆ. ವಿಶ್ವೇಶ್ವರಯ್ಯ ಭವನದ ಮಳಿಗೆದಾರರು ಹೆಚ್ಚಿನ ಬಾಡಿಗೆ ನೀಡುತ್ತಿದ್ದಾರೆ. ಕೆಲವು ಮಳಿಗೆಗಳಿಗೆ 20 ರಿಂದ 25 ಸಾವಿರ ರೂ. ಮಾಸಿಕ ಬಾಡಿಗೆ ನಿಗಧಿ ಮಾಡಲಾಗಿದೆ.

ಸಿಗ್ಮ ಬಾಡಿಗೆದಾರರು: ಮೈಸೂರು ಮಹಾನಗರ ಪಾಲಿಕೆಯಿಂದ ಮಳಿಗೆ ಪಡೆದು, ಅದನ್ನು ಹೆಚ್ಚಿನ ಬಾಡಿಗೆಗಾಗಿ ಬೇರೊಬ್ಬರಿಗೆ ಬಾಡಿಗೆ ನೀಡಿರುವ ಸಿಗ್ಮ ಬಾಡಿಗೆದಾರರಿಗೆ ಮಹಾನಗರ ಪಾಲಿಕೆ ಶಾಕ್ ನೀಡಿದ್ದು, ಅದಕ್ಕೆ ಬಾಡಿಗೆದಾರರು ಪಾಲಿಕೆಗೆ ಸಾಥ್ ನೀಡಿದ್ದಾರೆ. ಬೇರೊಬ್ಬರಿಗೆ ಬಾಡಿಗೆ ನೀಡಿರುವ ಮಳಿಗೆಗಳನ್ನು ಗುರುತಿಸಿ, ಅದಕ್ಕೆ ಮಾಸಿಕ 27 ಸಾವಿರ ರೂ. ಬಾಡಿಗೆ ನಿಗಧಿ ಮಾಡಲಾಗಿದೆ.

ಎಷ್ಟು ಬಾರಿ ಪೇಪರ್ ಲೀಕ್ ಆಗಿದೆ?

ಆ ವಾತಾವರಣ ತಂದಿದ್ದು ಕಾಂಗ್ರೆಸ್ ಎಂದು ವಾಗ್ದಾಳಿ ನಡೆಸಿದ್ದಾರೆ. ರಾಜಸ್ತಾನದಲ್ಲಿ ಪೇಪರ್ ಲೀಕ್ ಆಗಿದೆ. ಒಂದೊಂದು ಬಾರಿ ಯಾರೋ ಮಾಡಿದ ತಪ್ಪಿಗೆ ಸರ್ಕಾರದ ಮೇಲೆ ತಪ್ಪು ಹೊರಿಸಲು ಆಗಲ್ಲ. ನಮ್ಮ ರಾಜ್ಯದಲ್ಲಿ ಕಾಂಗ್ರೆಸ್ ಆಡಳಿತದಲ್ಲಿ ಅನೇಕ ಬಾರಿ ಇಂತಹ ಸಂದರ್ಭ ಎದುರಾಗಿದೆ. ಚರ್ಚೆ ಮಾಡೋಕೆ ಕಾಂಗ್ರೆಸ್ ನವರಿಗೆ ಯಾವ ನೈತಿಕತೆ ಇದೆ ಎಂದಿದ್ದಾರೆ.

ಜಿಬಿಎ ಚುನಾವಣೆ ಮುಂದೂಡಿಕೆಗೆ ಸರ್ಕಾರದ ಪ್ರಯತ್ನ ವಿಚಾರಕ್ಕೆ ಪ್ರತಿಕ್ರಿಯೆ ನೀಡಿದ ಅವರು, ಜಿಬಿಎ ಚುನಾವಣೆ ಮಾಡಬೇಕು ಅಂತ ಸಿಎಂ ಎಲೆಕ್ಷನ್ ಸಿಬ್ಬಂದಿಯನ್ನು ಡಿಸಿಎಂ ಅನುಪಸ್ಥಿತಿಯಲ್ಲಿ ಕರೆದರು. ಕರೆದು ಜಿಬಿಎ ಚುನಾವಣೆ ಮಾಡೋಕೆ ಒತ್ತಡ ಹಾಕಿದರು. ನಂತರ ಡಿಸಿಎಂ ಬಂದು ಮತ್ತೊಂದು ಸಭೆ ಕರೆದು ಯಾವುದೇ ಕಾರಣಕ್ಕೂ ಚುನಾವಣೆ ಮಾಡಬಾರದು ಅಂತ ಸಿಎಂ ಮೇಲೆ ಒತ್ತಡ ಹಾಕಿ, ಈಗ ಸುಪ್ರೀಂಕೋರ್ಟ್ ಮುಂದೆ ಅರ್ಜಿ ಹಾಕಿದ್ದಾರೆ. ಜನಗಣತಿ ಅದು, ಇದು ಅಂತ ಹೇಳಿ ಸೆಪ್ಟೆಂಬರ್‌ವರೆಗೂ ಚುನಾವಣೆ ಆಗಲ್ಲ ಅಂತ ಮುಂದೆ ಹಾಕೋಕೆ ಮುಂದಾಗಿದ್ದಾರೆ ಎಂದು ಆರೋಪಿಸಿದ್ದಾರೆ.

ಸಿಎಂ ಸಿದ್ದರಾಮಯ್ಯ ಚುನಾವಣೆಯಾದರೆ ಹೋದರೆ 6 ತಿಂಗಳು ಸ್ಥಾನ ಭದ್ರ ಆಗುತ್ತದೆ. ಡಿಸಿಎಂಗೆ ಚುನಾವಣೆ ಆದರೆ ನನ್ನ ಸ್ಥಾನಕ್ಕೆ ಚ್ಯುತಿ ಆಗುತ್ತೆ, ನನಗೆ ಸಿಗಲ್ಲ ಅಂತ ಸಿಎಂ–ಡಿಸಿಎಂ ನಡುವೆ ಗಲಾಟೆ ನಡೆಯುತ್ತಿದೆ. ಅಂತಿಮವಾಗಿ ಡಿಸಿಎಂ ಒತ್ತಡದ ಮೇರೆಗೆ ಸುಪ್ರೀಂ ಕೋರ್ಟ್ ಮುಂದೆ ಅರ್ಜಿ ಹಾಕಿದ್ದಾರೆ. ಚುನಾವಣೆ ನಡೆಸಿ ಸಿಎಂ ಚೇರ್ ಉಳಿಸಿಕೊಳ್ಳಬೇಕು ಅನ್ನೋದು ಒಬ್ಬರಿಗೆ. ಚುನಾವಣೆ ಮುಂದಕ್ಕೆ ಹಾಕಿ ಸಿಎಂ ಕುರ್ಚಿ ಪಡೆಯಬೇಕು ಅಂತ ನಡೆಯುತ್ತಿದೆ. ಸಿಎಂ–ಡಿಸಿಎಂ ನಡುವೆ ಚುನಾವಣೆ ವಿಚಾರದಲ್ಲಿ ಸಂಘರ್ಷ ನಡೆಯುತಿದೆ ಎಂದಿದ್ದಾರೆ.

ಗಾಂಧಿ ಜೊತೆ ಚರ್ಚೆ

ಕೇರಳಂ ರಾಜ್ಯದಲ್ಲಿ ನಾಯಕನ ಆಯ್ಕೆ ಇಂದು ಅಥವಾ ನಾಳೆ ಬಗೆಹರಿಯಲಿದೆ, ತದನಂತರ ರಾಹುಲ್ ಗಾಂಧಿಗೆ ಯಾವುದೇ ಪೂರ್ವನಿಗದಿತ ಕಾರ್ಯಕ್ರಮಗಳಿಲ್ಲದ ಕಾರಣ ಅವರನ್ನು ಭೇಟಿ ಮಾಡುವುದಾಗಿ ತಿಳಿಸಿದ್ದಾರೆ. ಕರ್ನಾಟಕ ನಾಯಕತ್ವ ಕುರಿತು ಚರ್ಚಿಸಿ, ನಿಮ್ಮನ್ನು ಮತ್ತು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ದೆಹಲಿಗೆ ಬರಲು ದಿನಾಂಕ ನಿಗದಿ ಮಾಡುವುದಾಗಿಯೂ ಶಿವಕುಮಾರ್ ಅವರಿಗೆ ಖರ್ಗೆ ತಿಳಿಸಿದ್ದಾರೆ. ಈ ಮಧ್ಯೆ ಶಿವಕುಮಾರ್ ಅವರ ಹುಟ್ಟುಹಬ್ಬ ದಿನವಾದ ಮೇ 15ರಂದು ರಾಜ್ಯಾದ್ಯಂತ ಅವರ ಬೆಂಬಲಿಗರು ಮತ್ತು ಕಾರ್ಯಕರ್ತರು ಜನ್ಮದಿನದ ಆಚರಣೆಗೆ ಮುಂದಾಗಿದ್ದಾರೆ. ಡಾ. ರಾಜ್‌ಕುಮಾರ್ ಹುಟ್ಟುಹಬ್ಬ ಆಚರಣೆ ಮಾದರಿಯಲ್ಲೇ ಶಿವಕುಮಾರ್ ಜನ್ಮದಿನವನ್ನು ಎಲ್ಲಾ ಜಿಲ್ಲಾ ಮತ್ತು ತಾಲೂಕು ಕೇಂದ್ರಗಳಲ್ಲಿ ಆಚರಿಸುವ ಮೂಲಕ ಶಕ್ತಿ ಪ್ರದರ್ಶನಕ್ಕೆ ಮುಂದಾಗಿದ್ದಾರೆ.

ಕ್ರೂರ ದ್ರೋಹ

ತಳ್ಳಿದೆ ಎಂದು ಮುಖ್ಯಮಂತ್ರಿ ಆಕ್ರೋಶ ವ್ಯಕ್ತಪಡಿಸಿದ್ದಾರೆ. ನೀಟ್ ಪರೀಕ್ಷೆಯು ಗ್ರಾಮೀಣ ಮತ್ತು ಬಡ ವಿದ್ಯಾರ್ಥಿಗಳಿಗೆ ಅನ್ಯಾಯ ಮಾಡುತ್ತದೆ. ಶಾಲಾ ಶಿಕ್ಷಣ ವ್ಯವಸ್ಥೆಯನ್ನು ದುರ್ಬಲಗೊಳಿಸುತ್ತದೆ ಮತ್ತು ಪ್ರವೇಶಾತಿ ವಿಚಾರದಲ್ಲಿ ರಾಜ್ಯಗಳ ಅಧಿಕಾರವನ್ನು ಕಸಿದುಕೊಳ್ಳುತ್ತದೆ ಎಂದು 2024ರಲ್ಲೇ ನಮ್ಮ ಸರ್ಕಾರ ಆಕ್ಷೇಪ ವ್ಯಕ್ತಪಡಿಸಿತ್ತು. ಇಂದಿನ ಪರೀಕ್ಷೆ ರದ್ದತಿ ನಮ್ಮ ಅಂದಿನ ಕಾಳಜಿ ಎಷ್ಟು ನೈಜ ಮತ್ತು ತುರ್ತು ಎನ್ನುವುದನ್ನು ಸಾಬೀತುಪಡಿಸಿದೆ ಎಂದು ಅವರು ಹೇಳಿದ್ದಾರೆ. ನೇಮಕಾತಿ ಪರೀಕ್ಷೆಗಳಿಂದ ಹಿಡಿದು ರಾಷ್ಟ್ರೀಯ ಪ್ರವೇಶ ಪರೀಕ್ಷೆಗಳವರೆಗೆ ಪೇಪರ್ ಲೀಕ್ ಪ್ರಕರಣಗಳು ಪ್ರತಿಭೆಯನ್ನು ರಕ್ಷಿಸುವಲ್ಲಿ ಸರ್ಕಾರದ ವೈಫಲ್ಯಕ್ಕೆ ಸಾಕ್ಷಿಯಾಗಿವೆ. ಹೊಣೆ ಹೊರಬೇಕಾದ ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರು ಪತ್ರಿಕಾಗೋಷ್ಠಿಯಲ್ಲಿ ಪ್ರಶ್ನೆಗಳಿಂದ ನುಣುಚಿಕೊಂಡಿದ್ದಾರೆ.

ನ್ಯಾಯಮೂರ್ತಿ!

ನ್ಯಾಯಾಧೀಶರು ಕೂಡ ಪ್ರಧಾನಿ ಮೋದಿಯ ಮನವಿಗೆ ಸ್ಪಂದಿಸಿ, ನ್ಯಾಯಾಲಯಕ್ಕೆ ಕಾರಿನ ಬದಲು ಸೈಕಲ್‌ನಲ್ಲಿ ಆಗಮಿಸಿದ್ದಾರೆ. ಈ ವಿಡಿಯೋ ಭಾರೀ ಮೆಚ್ಚುಗೆಗೆ ಪಾತ್ರ ವಾಗಿದೆ. ಅಮೆರಿಕ–ಇರಾನ್ ಯುದ್ಧ ದಿಂದಾಗಿ ಜಾಗತಿಕ ಇಂಧನ ಬಿಕ್ಕಟ್ಟಿನ ನಡುವೆ ಇಂಧನ ಉಳಿಸಲು ಪ್ರಧಾನಿ ನರೇಂದ್ರ ಮೋದಿ ಇತ್ತೀಚೆಗೆ ಮಾಡಿದ ಮನವಿಗೆ ಪ್ರತಿಕ್ರಿಯೆಯಾಗಿ ಮಧ್ಯಪ್ರದೇಶ ಹೈಕೋರ್ಟ್ ನ್ಯಾಯಾಧೀಶರಾದ ನ್ಯಾಯಮೂರ್ತಿ ದ್ವಾರಕಾ ಧೀಶ್ ಬನ್ಸಾಲ್ ಇಂದು ನ್ಯಾಯಾಲಯಕ್ಕೆ ಸೈಕಲ್ ಸವಾರಿ ಮಾಡಿ ಕೊಂಡು ಆಗಮಿಸಿದ್ದಾರೆ. ಅವರ ಹಿಂದೆ ಭದ್ರತಾ ಸಿಬ್ಬಂದಿ ಕೂಡ ಸೈಕಲ್ ನಲ್ಲಿಯೇ ಆಗಮಿಸಿದ್ದಾರೆ. ಜಬಲ್ಪುರ ಹೈಕೋರ್ಟ್ ಪೀಠದಲ್ಲಿ ನಿಯೋಜಿತರಾಗಿರುವ ನ್ಯಾಯಮೂರ್ತಿ ಬನ್ಸಾಲ್, ಸಿವಿಲ್ ಲೈನ್ಸ್ ಪ್ರದೇಶದಲ್ಲಿರುವ ತಮ್ಮ ಅಧಿಕೃತ ನಿವಾಸದಿಂದ ನ್ಯಾಯಾ ಲಯದ ಆವರಣಕ್ಕೆ ಸುಮಾರು 3 ಕಿ.ಮೀ. ಸೈಕಲ್‌ನಲ್ಲಿ ಪ್ರಯಾಣಿಸಿದರು, ಅವರ ಜೊತೆಗೆ ನ್ಯಾಯಾಲಯದ ಸಿಬ್ಬಂದಿಯೂ ಇದ್ದರು. ಈ ಬಗ್ಗೆ ಸಾಮಾಜಿಕ ಮಾಧ್ಯಮದಲ್ಲಿ ಹಂಚಿಕೊಂಡ ವಿಡಿಯೋದಲ್ಲಿ, ಪ್ರಧಾನಿ ನರೇಂದ್ರ ಮೋದಿ ಅವರು ಇಂಧನ ಉಳಿತಾಯ ಸೇರಿದಂತೆ ಇತರ ವಿಷಯಗಳ ಬಗ್ಗೆ ಮನವಿ ಮಾಡುವುದನ್ನು ನಾನು ಗಮನಿ ಸಿದೆ. ಇದನ್ನು ಗಮನದಲ್ಲಿಟ್ಟುಕೊಂಡು ಹೈಕೋರ್ಟ್‌ಗೆ ಸೈಕಲ್‌ನಲ್ಲಿ ಹೋಗಿ ಸಾಮಾನ್ಯ ಜನರಿಗೆ ಸಾಧ್ಯವಾದಾಗಲೆಲ್ಲಾ ಕಡಿಮೆ ದೂರಕ್ಕೆ ಪ್ರಯಾಣಿಸಲು ಸೈಕಲ್ ಬಳಸುವ ಸಂದೇಶ ನೀಡಬೇಕೆಂದು ನಾನು ಸೈಕಲ್ ನಲ್ಲೇ ಕೋರ್ಟ್‌ಗೆ ತೆರಳಿದೆ ಎಂದು ನ್ಯಾಯಮೂರ್ತಿ ಬನ್ಸಾಲ್ ಹೇಳಿದ್ದಾರೆ.

ಸರ್ಕಾರಿ ಕಾಲೇಜುಗಳಲ್ಲಿ ಮೇ 25ರಿಂದ ಸಿಇಟಿ ಸೀಟು ಹಂಚಿಕೆ ಮಂಥನ: ಕೆಇಎ

ಬೆಂಗಳೂರು, ಮೇ 12– ವೃತ್ತಿಪರ ಕೋರ್ಸ್ ಗಳ ಪ್ರವೇಶ ಪ್ರಕ್ರಿಯೆ ಸಂಬಂಧ ಜಾಗೃತಿ ಮೂಡಿಸುವ 2026ನೇ ಸಾಲಿನ ಸಿಇಟಿ (CET) ಸೀಟು ಹಂಚಿಕೆ ಮಂಥನ ಕಾರ್ಯಕ್ರಮವನ್ನು ಇದೇ 25ರಿಂದ 30ರ ವರೆಗೆ ರಾಜ್ಯದ ಎಲ್ಲ ಸರ್ಕಾರಿ ಮತ್ತು ಅನುದಾನಿತ ಎಂಜಿನಿಯರಿಂಗ್, ವೈದ್ಯಕೀಯ ಮತ್ತು ದಂತ ವೈದ್ಯಕೀಯ ಕಾಲೇಜುಗಳಲ್ಲಿ ನಡೆಸಲಾಗುವುದು ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ (KEA) ಕಾರ್ಯ ನಿರ್ವಾಹಕ ನಿರ್ದೇಶಕ ಹೆಚ್.ಪ್ರಸನ್ನ ಪ್ರಕಟಿಸಿದರು.



ಹೆಚ್.ಪ್ರಸನ್ನ

ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಇಲ್ಲಿನ ಕಚೇರಿಯಲ್ಲಿ ಸರ್ಕಾರಿ ಮತ್ತು ಅನುದಾನಿತ ಎಂಜಿನಿಯರಿಂಗ್, ವೈದ್ಯ ಕೀಯ ಮತ್ತು ದಂತ ವೈದ್ಯಕೀಯ ಕಾಲೇಜು ಪ್ರತಿನಿಧಿಗಳಿಗೆ ಶನಿವಾರ ಆಯೋಜಿಸಿದ್ದ ಸೀಟು ಹಂಚಿಕೆ ಮಂಥನ ತರಬೇತಿ ಕಾರ್ಯಾಗಾರದಲ್ಲಿ ಅವರು ಮಾತನಾಡಿದರು. ಪ್ರತಿ ಕಾಲೇಜಿನಿಂದಲೂ ಮೂರು–ನಾಲ್ಕು ಮಂದಿ ಉಪನ್ಯಾಸಕರನ್ನು ಆಹ್ವಾನಿಸಿ, ಸೀಟು ಹಂಚಿಕೆ ಬಗ್ಗೆ ಇಡೀ ದಿನ ತರಬೇತಿ ನೀಡಲಾಯಿತು. 170ಕ್ಕೂ ಹೆಚ್ಚು ಉಪನ್ಯಾಸಕರು ತರಬೇತಿ ಕಾರ್ಯಾಗಾರದಲ್ಲಿ ಭಾಗವಹಿಸಿದ್ದರು. ತರಬೇತಿ ಪಡೆದ ಈ ಉಪನ್ಯಾಸಕರು ತಮ್ಮ ಕಾಲೇಜುಗಳಲ್ಲಿ ನಡೆಯುವ ಸೀಟು ಹಂಚಿಕೆ ಮಂಥನದಲ್ಲಿ ಭಾಗವಹಿಸುವ ವಿದ್ಯಾರ್ಥಿಗಳು/ಪೋಷಕರಿಗೆ ಪ್ರಾತ್ಯಕ್ಷಿಕೆ ಮೂಲಕ ಜಾಗೃತಿ ಮೂಡಿಸಲಿದ್ದಾರೆ. ಕಳೆದ ಬಾರಿ ಕೇವಲ ಎಂಜಿನಿಯರಿಂಗ್ ಕಾಲೇಜು ಗಳಲ್ಲಿ ನಡೆದ ಈ ಮಂಥನ ಕಾರ್ಯಾಗಾರ ಈ ವರ್ಷ ವೈದ್ಯಕೀಯ ಮತ್ತು ದಂತ ವೈದ್ಯಕೀಯ ಕಾಲೇಜು ಗಳಲ್ಲಿಯೂ ನಡೆಯಲಿದೆ ಎಂದು ವಿವರಿಸಿದರು.

ಕಳೆದ ವರ್ಷ ಕಡಿಮೆ ಅವಧಿಯಲ್ಲಿ ಕಾರ್ಯಕ್ರಮ ಆಯೋಜಿಸಿದ್ದರಿಂದ ಕೆಲವು ಗೊಂದಲ ಆಗಿತ್ತು. ಆದರೆ, ಈ ಬಾರಿ ಮುಂಗಡವಾಗಿ ದಿನಾಂಕ ಮತ್ತು ಸಮಯ ಕಾಯ್ದಿರಿಸಿಕೊಂಡು ಬರುವ ಹಾಗೆ ಕೆಇಎ ವತಿಯಿಂದಲೇ ಆ್ಯಪ್ ಬಿಡುಗಡೆ ಮಾಡಲಿದ್ದು, ಕೊನೆ ಕ್ಷಣದ ಗೊಂದಲಗಳಿಗೆ ತೆರೆ ಬೀಳಲಿದೆ. ಸ್ಲಾಟ್ ಬುಕ್ ಮಾಡಿಕೊಂಡು ಬಂದವರಿಗೇ ಕಾಲೇಜುಗಳಲ್ಲಿ ತರಬೇತಿ ಕಾರ್ಯಾಗಾರ ನಡೆಯಲಿದೆ. ಆಪ್ಷನ್ಸ್ ದಾಖಲು, ಸೀಟು ಹಂಚಿಕೆ, ಚಾಯ್ಸ್ ದಾಖಲು, ಶುಲ್ಕ ಪಾವತಿ ಹಾಗೂ ಪ್ರವೇಶದ ಬಗ್ಗೆ ಜಾಗೃತಿ ಮೂಡಿಸಲಾಗುತ್ತದೆ. ಈ ಹಂತಗಳ ಮಾಹಿತಿ ಇಲ್ಲದೆ ಅನೇಕರು ತೊಂದರೆಗೆ ಒಳಗಾಗುತ್ತಿದ್ದು, ಅದನ್ನು ತಪ್ಪಿಸುವ ಉದ್ದೇಶದಿಂದ ಜಾಗೃತಿ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದರು.

ಕೇಂದ್ರದ ಬಹು ದೊಡ್ಡ ಹಗರಣ

ರಾಜ್ಯದ 1.50 ಲಕ್ಷ ವಿದ್ಯಾರ್ಥಿಗಳು ವೈದ್ಯರಾಗುವ ಕನಸು ಭಗ್ನ


ಬೆಂಗಳೂರು, ಮೇ 12(ಕೆಎಂಶಿ)–ನೀಟ್ ಪ್ರಶ್ನೆ ಪತ್ರಿಕೆ ಸೋರಿಕೆ ಹಿನ್ನೆಲೆಯಲ್ಲಿ ಪರೀಕ್ಷೆ ರದ್ದುಪಡಿಸುವ ಕೇಂದ್ರ ಸರ್ಕಾರದ ನಿರ್ಧಾರ ವೈದ್ಯರಾಗಬೇಕೆಂಬ ಕನಸು ಹೊತ್ತಿದ್ದ ಲಕ್ಷಾಂತರ ವಿದ್ಯಾರ್ಥಿಗಳ ಜೀವನದ ಜೊತೆ ಚೆಲ್ಲಾಟ ಆಡಿದಂತಾಗಿದೆ ಎಂದು ವೈದ್ಯಕೀಯ ಶಿಕ್ಷಣ ಸಚಿವ ಡಾ.ಶರಣ ಪ್ರಕಾಶ ಆರ್. ಪಾಟೀಲ್ ಇಂದಿಲ್ಲಿ ಟೀಕಿಸಿದ್ದಾರೆ.



ಮೇ 3ರಂದು ನಡೆದಿದ್ದ ನೀಟ್ ಪರೀಕ್ಷೆಯ ಪ್ರಶ್ನೆ ಪತ್ರಿಕೆ ಸೋರಿಕೆ ಹಿನ್ನೆಲೆಯಲ್ಲಿ ಪರೀಕ್ಷೆ ರದ್ದುಪಡಿಸಿದ್ದು, ಇದು ಕೇಂದ್ರ ಸರ್ಕಾರದ ಬಹುದೊಡ್ಡ ಹಗರಣವಾಗಿದೆ ಎಂದಿ ದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಳೆದ ನಾಲ್ಕೈದು ವರ್ಷಗಳಿಂದ ನೀಟ್ ಪರೀಕ್ಷೆಯಲ್ಲಿ ಒಂದಲ್ಲ ಒಂದು ಗೊಂದಲ, ಅಕ್ರಮಗಳು ನಡೆಯುತ್ತಲೇ ಇವೆ. ಇದಕ್ಕೆ ಕೊನೆಯೇ ಇಲ್ಲದಂತಾಗಿದೆ. ಕೇಂದ್ರದಲ್ಲಿನ ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರವೇ ಹೊಣೆ ಎಂದರು. ಕೇಂದ್ರ ಸರ್ಕಾರ ಹಾಗೂ ಸಂಬಂಧಪಟ್ಟ ಸಚಿವಾಲಯಕ್ಕೆ ಮನವರಿಕೆ ಮಾಡಿಕೊಟ್ಟಿದ್ದರೂ ಯಾವುದೇ ಕ್ರಮ ಕೈಗೊಂಡಿಲ್ಲ. ಇದರಿಂದ ಮತ್ತೊಮ್ಮೆ ಬಹುದೊಡ್ಡ ಅಚಾತುರ್ಯವಾಗಿದೆ. ಕೇಂದ್ರ ಸರ್ಕಾರದ ಅಸಮರ್ಥತತೆಗೆ ಸಾಕ್ಷಿಯಾಗಿದ್ದು, ಕೇಂದ್ರವೇ ಸಂಪೂರ್ಣ ಹೊಣೆ ಹೊರಬೇಕು. ತಪ್ಪಿತಸ್ಥರನ್ನು ಕಾನೂನಿನ ಕಟಕಟೆಗೆ ತಂದು ನಿಲ್ಲಿಸಬೇಕು. ಭಾಗಿಯಾದವರಿಗೆ ಶಿಕ್ಷೆ ಕೊಡಿಸಬೇಕು.

ಮತ್ತೊಮ್ಮೆ ಪರೀಕ್ಷೆ ನಡೆಸುವುದರಿಂದ ಪ್ರಾಮಾಣಿಕವಾಗಿ ಕಷ್ಟಪಟ್ಟು ಅಭ್ಯಾಸ ಮಾಡಿದ್ದ ವಿದ್ಯಾರ್ಥಿಗಳಿಗೆ ಅನ್ಯಾಯ ಆದಂತಾಗುತ್ತದೆ. ಅವರ ಕುಟುಂಬದವರಿಗೆ ಮಾನಸಿಕ ಒತ್ತಡ ಹೆಚ್ಚಾಗಲಿದೆ. ಪ್ರತಿವರ್ಷ ಆಗುತ್ತಿರುವ ಪ್ರಮಾದ ಸರಿಪಡಿಸಲು ಕೇಂದ್ರಕ್ಕೆ ಆಗುತ್ತಿಲ್ಲ, ಇದು ನಿಜಕ್ಕೂ ಅಸಮರ್ಥ ಸರ್ಕಾರವಾಗಿದೆ. ಪ್ರಶ್ನೆ ಪತ್ರಿಕೆ ಸೋರಿಕೆ ಎಂದರೆ ಕೋಟ್ಯಾಂತರ ರೂ. ಅಕ್ರಮ ವಹಿವಾಟು ನಡೆಯುತ್ತಿದೆ ಎಂಬರ್ಥ, ಕೇಂದ್ರ ಸರ್ಕಾರ ಭ್ರಷ್ಟವಾಗಿದೆ. ಪ್ರಧಾನಿ ನರೇಂದ್ರ ಮೋದಿ ದೊಡ್ಡ ಭಾಷಣ ಮಾಡದೆ, ಇಂಥ ಸಮಸ್ಯೆಗಳಿಗೆ ಕೂಡಲೇ ಪರಿಹಾರ ದೊರಕಿಸಿಕೊಡಬೇಕು.

'ದೇವರ ಸೇವಕ: ರಾಜೇಂದ್ರ ಸ್ವಾಮಿಗಳು' ಗ್ರಂಥ ಬಿಡುಗಡೆ




ಡಾ.ದಯಾನಂದ ಪ್ರಭು

ಮೈಸೂರು, ಮೇ 12–ಕನ್ನಡದ ಹೆಸರಾಂತ ಲೇಖಕ ಡಾ. ಫಾ. ದಯಾನಂದ ಪ್ರಭು ಅವರು ಬರೆದು ಪ್ರಕಟಿಸಿರುವ 'ದೇವರ ಸೇವಕ: ರಾಜೇಂದ್ರ ಸ್ವಾಮಿಗಳು' ಗ್ರಂಥವನ್ನು ಇತ್ತೀಚೆಗೆ ನಡೆದ ರಾಜೇಂದ್ರ ಸ್ವಾಮೀಜಿಯವರ ವಾರ್ಷಿಕ ಜಾತ್ರಾ ಮಹೋತ್ಸವದಲ್ಲಿ ಮೈಸೂರಿನ ಧರ್ಮಾಧ್ಯಕ್ಷರಾದ ಡಾ.ಫ್ರಾನ್ಸಿಸ್ ಸೆರಾವೊ ಅವರು ಚಿಕ್ಕರಸಿನಕೆರೆ ಪುಣ್ಯ ಕ್ಷೇತ್ರದಲ್ಲಿ ಬಿಡುಗಡೆ ಮಾಡಿದರು. ರಾಜೇಂದ್ರ ಸ್ವಾಮೀಜಿಯವರು ಈಗಾಗಲೇ 'ದೇವರ ಸೇವಕ' ಎಂಬ ಬಿರುದನ್ನು ಪೋಪ್ ಜಗದ್ಗುರುವಿನಿಂದ ಪಡೆದಿದ್ದಾರೆ. ರಾಜೇಂದ್ರ ಸ್ವಾಮಿಯವರು ಮೂಲತಃ ಇಟಲಿ ದೇಶದವರು. ಅವರ ಹೆಸರು ಅಂಟೋನಿಯೊ ಮರಿಂಯು ಪ್ಲಾಟೆ. ಅವರು 1708ರಲ್ಲಿ ಶ್ರೀರಂಗಪಟ್ಟಣಕ್ಕೆ ಬಂದು ಅಂದಿನ ಮೈಸೂರಿನ ಅರಸರ ಅಪ್ಪಣೆ ಪಡೆದು ಸುಮಾರು 15 ವರ್ಷಗಳ ಕಾಲ ರಾಜ್ಯದ ಕ್ರೈಸ್ತರ ಸೇವೆ ಮಾಡಿದ್ದರು. ಹಿಂದೂಗಳ ಪ್ರೀತಿ ವಿಶ್ವಾಸವನ್ನು ಗಳಿಸಿದ್ದರು. ಎಲ್ಲಾ ಜನರು ಅವರನ್ನು ಪ್ರೀತಿಯಿಂದ 'ರಾಜೇಂದ್ರ ಸ್ವಾಮಿ' ಎಂದು ಕರೆಯುತ್ತಿದ್ದರು. ಆ ಹೆಸರಿನಿಂದ ಅವರು ಜನಪ್ರಿಯರಾಗಿದ್ದರು.

ಈಗಾಗಲೇ ಫಾದರ್ ಡಾ.ದಯಾನಂದ ಪ್ರಭು ಅವರು 21 ಕೃತಿಗಳನ್ನು ಕನ್ನಡದಲ್ಲಿ ಬರೆದು ಪ್ರಕಟಿಸಿದ್ದಾರೆ. ಅವರು ನಾಲ್ಕು ವರ್ಷಗಳು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕ್ರೈಸ್ತ ಧರ್ಮಪೀಠದ ಸಂದರ್ಶಕ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದ್ದರು.

ಋಣ ತೀರಿಸುವ ಪ್ರಯತ್ನವೇ ಸಾರ್ಥಕ ಬದುಕಿಗೆ ಹಾದಿ

ಹುಟ್ಟೂರಲ್ಲಿ ಅಭಿನಂದನೆ ಸ್ವೀಕರಿಸಿ ವಕೀಲ ಹೆಚ್.ಎನ್.ವೆಂಕಟೇಶ್ ಬಾವುಕ ನುಡಿ


ಹುಣಸೂರು ತಾಲೂಕು ಹಿಂಡ್ಲುಗೂಡ್ಲು ಗ್ರಾಮದ ಮಾರಮ್ಮ ದೇವಸ್ಥಾನದ ಪ್ರತಿಷ್ಠಾಪನಾ ಮಹೋತ್ಸವದ ಸಂದರ್ಭದಲ್ಲಿ ದೇವಸ್ಥಾನದ ಜೀರ್ಣೋದ್ಧಾರಕ್ಕೆ ಕಾರಣರಾದ ಹಿರಿಯ ವಕೀಲ ಹೆಚ್.ಎನ್.ವೆಂಕಟೇಶ್, ಅವರ ಪತ್ನಿ ಮಂಜುಳಾ ಹಾಗೂ ಪುತ್ರ ರೋಹನ್ ವಿ.ಗಂಗಡ್ಕರ್ ಅವರನ್ನು ಗ್ರಾಮಸ್ಥರು ನೆನಪಿನ ಕಾಣಿಕೆ ನೀಡಿ, ಆತ್ಮೀಯವಾಗಿ ಅಭಿನಂದಿಸಿದರು.

ಮೈಸೂರು, ಮೇ 12–ಋಣ ತೀರಿಸುವ ಮನೋಗುಣ ಮನುಷ್ಯರನ್ನು ಉತ್ತಮರನ್ನಾಗಿಸುತ್ತದೆ ಎಂದು 'ಲಾ ಗೈಡ್' ಕಾನೂನು ಮಾಸಪತ್ರಿಕೆ ಸಂಪಾದಕರೂ ಆದ ಹಿರಿಯ ವಕೀಲ ಹೆಚ್.ಎನ್. ವೆಂಕಟೇಶ್ ಅಭಿಪ್ರಾಯಿಸಿದರು.

ತಮ್ಮ ಹುಟ್ಟೂರು ಹುಣಸೂರು ತಾಲೂಕು ಹಿಂಡ್ಲುಗೂಡ್ಲು ಗ್ರಾಮದ ಮಾರಮ್ಮ ದೇವಸ್ಥಾನದ ಪ್ರತಿಷ್ಠಾಪನಾ ಮಹೋತ್ಸವದಲ್ಲಿ ಅಭಿನಂದನೆ ಸ್ವೀಕರಿಸಿ ಮಾತನಾಡಿದ ಅವರು, ಬದುಕಿನ ನಿಜವಾದ ಮೌಲ್ಯ ಮಾನವೀಯತೆಯಲ್ಲಿದೆ ಎಂದು ತಮ್ಮ ಮನದಾಳದ ಮಾತುಗಳನ್ನು ಹಂಚಿಕೊಂಡರು.

ಋಣ ಎನ್ನುವುದು ಮನುಷ್ಯ ಜನ್ಮದ ಅತ್ಯುನ್ನತ ಉದ್ದೇಶ ಮತ್ತು ಸಾರ್ಥಕತೆಯನ್ನು ಸೂಚಿಸುತ್ತದೆ. ನಮ್ಮ ಅಸ್ತಿತ್ವಕ್ಕೆ ಕಾರಣರಾದ ತಂದೆ–ತಾಯಿ, ಸಮಾಜ ಹಾಗೂ ನಮ್ಮ ನೆಲದ ಮೇಲಿನ ಕೃತಜ್ಞತೆಯ ಅಭಿವ್ಯಕ್ತಿಯಾಗಿದೆ. ನಮ್ಮನ್ನು ಸಾಕಿ ಸಲಹಿದ ತಂದೆ–ತಾಯಿಯನ್ನು ಸದಾ ಪ್ರೀತಿಯಿಂದ ನೋಡಿಕೊಳ್ಳುವುದು, ಸಂಧ್ಯಾ ಕಾಲದಲ್ಲಿ ಆಸರೆಯಾಗುವುದು, ಅವರ ಕನಸುಗಳನ್ನು ನನಸಾಗಿಸುವ ಮೂಲಕ ತೀರಿಸಲಾಗದ ಅವರ ಋಣಭಾರದಲ್ಲಿ ಒಂದಿಷ್ಟು ಕಡಿಮೆ ಮಾಡಿಕೊಳ್ಳಬಹುದು ಎಂದು ಬಾವುಕರಾಗಿ ನುಡಿದರು.

ನಾವು ಬದುಕುವ ಸಮಾಜದಲ್ಲಿ ಸಂಕಷ್ಟದಲ್ಲಿ ಇರುವವರಿಗೆ ಸಹಾಯ ಮಾಡುವುದು, ಕೈಲಾದ ಸೇವೆ ಸಲ್ಲಿಸುವುದು ಮತ್ತು ಒಳ್ಳೆಯ ಕೆಲಸಗಳಿಂದ ಇತರರ ಬದುಕಿಗೆ ನೆರವಾಗುವುದೇ ನಿಜವಾದ ಮಾನವೀಯತೆ. ನೈತಿಕ ಬದುಕು ಮನಸ್ಸಿಗೆ ಶಾಂತಿ ನೀಡುತ್ತದೆ. ಯಾರಿಗೂ ಕೇಡು ಬಯಸದ ಬದುಕು ಸಮಾಜದ ಅಭಿವೃದ್ಧಿಗೆ ಬಲವಾಗುತ್ತದೆ. ಎಷ್ಟೇ ಉನ್ನತ ಹುದ್ದೆಯಲ್ಲಿದ್ದರೂ ತಾವು ಆಡಿ–ಬೆಳೆದ ಹುಟ್ಟೂರನ್ನು ಯಾವ ಕಾರಣಕ್ಕೂ ಮರೆಯಬಾರದು. ನನ್ನೂರಿನ ಅಭಿವೃದ್ಧಿ ನನ್ನ ಕರ್ತವ್ಯವೂ ಹೌದು ಎಂಬ ಅರಿವು ಸದಾ ಜಾಗೃತವಾಗಿರಬೇಕು. ಈ ಮೂಲಕ ಎಲ್ಲಾ ಹಳ್ಳಿಗಳ ಸರ್ವತೋಮುಖ ಅಭಿವೃದ್ಧಿಯಾಗಲಿದೆ ಎಂದು ಮನವಿ ಮಾಡಿದರು.

ಎಸ್‌ಎಸ್‌ಎಲ್‌ಸಿ, ಪಿಯುಸಿ ಮಾತ್ರವಲ್ಲದೆ ಕಾನೂನು ಪರೀಕ್ಷೆಗಳಲ್ಲೂ ಅತ್ಯುತ್ತಮ ಸಾಧನೆ ಮಾಡಿರುವ ವಕೀಲ ಹೆಚ್.ಎನ್. ವೆಂಕಟೇಶ್ ಹಾಗೂ ಕೆಎಎಸ್ ಅಧಿಕಾರಿ ಮಂಜುಳಾ ದಂಪತಿ ಪುತ್ರ ರೋಹನ್ ವಿ.ಗಂಗಡ್ಕರ್ ಮಾತನಾಡಿ, ದುಡಿಮೆಯೇ ದೇವರು ಎಂದು ಬದುಕುವ ರೈತರ ಜೀವನ ಮೌಲ್ಯಗಳು, ಅವರ ಸರಳ ಜೀವನ ಸಮಾಜಕ್ಕೆ ಮಾದರಿ. ಯುವಕರು ದುಶ್ಚಟಗಳಿಂದ ದೂರವಿದ್ದು ಓದಿನತ್ತ ಹೆಚ್ಚು ಗಮನಹರಿಸಬೇಕು. ಗ್ರಾಮದ ಅಭಿವೃದ್ಧಿ, ಧಾರ್ಮಿಕ ಹಾಗೂ ಸಾಮಾಜಿಕ ಚಟುವಟಿಕೆಗಳಲ್ಲಿ ಸಕ್ರಿಯರಾಗಬೇಕು ಎಂದರು.

ಈ ವೇಳೆ ಕಾರ್ಯಕ್ರಮದಲ್ಲಿ ಮೈಸೂರಿನ ಶ್ರೀ ಯೋಗಾನರಸಿಂಹಸ್ವಾಮಿ ದೇವಾಲಯದ ಆಡಳಿತಾಧಿಕಾರಿ ಎನ್.ಶ್ರೀನಿವಾಸ್, ಗ್ರಾಮದ ಯಜಮಾನರಾದ ಕುಮಾರ್, ಶಿವಕುಮಾರ್, ರಮೇಶ್, ರಾಜೇಗೌಡ ಸೇರಿದಂತೆ ಅನೇಕ ಹಿರಿಯರು, ಹೆಚ್.ಡಿ. ಕೋಟೆ ತಾಲೂಕು ಅಕ್ಷರ ದಾಸೋಹ ಸಹಾಯಕ ನಿರ್ದೇಶಕ ಚಂದ್ರಶೇಖರ, ಉಪನ್ಯಾಸಕ ಹೆಚ್.ಎನ್. ಗಿರೀಶ್, ಶಿಕ್ಷಕ ರಮೇಶ್ ಶೇಖರ್ ಸೇರಿದಂತೆ ಅನೇಕ ಮುಖಂಡರು, ಗ್ರಾಮಸ್ಥರು ಭಾಗವಹಿಸಿದ್ದರು.

ಫೇಸ್‌ಬುಕ್ ಫ್ರೆಂಡ್‌ಗೆ 12.65 ಲಕ್ಷ ಕಳಿಸಿ ವಂಚನೆಗೀಡಾದ ಮೈಸೂರು ಮಹಿಳೆ!

ಮೈಸೂರು, ಮೇ.12(ಜಿಎ)–ಫೇಸ್‌ಬುಕ್ ಫ್ರೆಂಡ್ ನಂಬಿ ಮೈಸೂರಿನ ಗೃಹಿಣಿಯೊಬ್ಬರು 12.65 ಲಕ್ಷ ಕಳೆದುಕೊಂಡಿರುವ ಸಂಬಂಧ ಸೆನ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮೈಸೂರಿನ ಶಕ್ತಿನಗರದ ನಿವಾಸಿ ಮಹಿಳೆಗೆ 2025ರಲ್ಲಿ ಫೇಸ್‌ಬುಕ್ ವ್ಯಕ್ತಿಯೊಬ್ಬರು ಪರಿಚಯವಾಗಿದ್ದು, ಆತ ತಾನು ಲಂಡನ್ ನಿವಾಸಿ ಎಂದು ಪರಿಚಯಿಸಿಕೊಂಡಿದ್ದಾನೆ. ನಂತರ ಗೃಹಿಣಿಗೆ ತನ್ನ 9 ವರ್ಷದ ಮಗನನ್ನೂ ಪರಿಚಯಿಸಿದ್ದಾನೆ. ಮಗು ಹಾಗೂ ಗೃಹಿಣಿ ಫೇಸ್‌ಬುಕ್‌ನಲ್ಲಿಯೇ ಉತ್ತಮ ಬಾಂಧವ್ಯ ಬೆಳೆದಿದೆ.

ನಂತರದ ದಿನಗಳಲ್ಲಿ ಆ ವ್ಯಕ್ತಿ ಬಾಂಧವ್ಯ ಬಳಸಿಕೊಂಡು ತಾನು ಇಂಡೋನೇಷಿಯಾಕ್ಕೆ ಬಂದಿದ್ದೇನೆ. ಇಲ್ಲಿ ತನ್ನ ಎಟಿಎಂ ಕಾರ್ಡ್ ಬ್ಲಾಕ್ ಆಗಿದೆ. ಟಿಕೆಟ್ ಖರೀದಿಸಲು ಹಣ ಸಹಾಯ ಮಾಡಿ ಎಂದು ಕೇಳಿದ್ದು, ವಿವಿಧ ಹಂತಗಳಲ್ಲಿ 1,85,000/– ವರ್ಗಾಯಿಸಿದ್ದಾರೆ. ಕೆಲವು ದಿನಗಳ ನಂತರ ನಾನು ಇಂಡಿಯಾಗೆ ಬಂದಿರುವುದಾಗಿ ತಿಳಿಸಿ 25 ಲಕ್ಷ ನಿಮ್ಮ ಖಾತೆಗೆ ವರ್ಗಾಯಿಸುತ್ತಿರುವುದಾಗಿ ಗೃಹಿಣಿಯನ್ನು ನಂಬಿಸಿದ್ದಾನೆ. ಇಂಡಿಯನ್ ಕರೆನ್ಸಿಗೆ ಬದಲಾಯಿಸಲು ಚಾರ್ಜಸ್ ಎಂದು 10,80,000 ಬೇಕಾಗಿದೆ ಎಂದು ಬೇಡಿಕೆ ಇಟ್ಟಿದ್ದು, ಅದನ್ನು ನಂಬಿದ ಗೃಹಿಣಿಯೂ ಅವರ ಒಡವೆಗಳನ್ನು ಮಾರಾಟ ಮಾಡಿ ಫೇಸ್‌ಬುಕ್ ಫ್ರೆಂಡ್‌ಗೆ ಕಳುಹಿಸಿ ಕೊಟ್ಟಿದ್ದಾರೆ. ಇದಾದ ನಂತರ ಮತ್ತೆ 1,55,000/– ವರ್ಗಾಯಿಸುವಂತೆ ಕೇಳಿದಾಗ ಗೃಹಿಣಿಗೆ ಅನುಮಾನ ಬಂದಿದೆ. ನಂತರ ವಂಚಕ ಸಂಪರ್ಕ ಕಡಿದುಕೊಂಡಿದ್ದಾನೆ. ನಂತರ ಗೃಹಿಣಿ ತಾನು 12.65 ಲಕ್ಷ ಹಣ ಕಳೆದುಕೊಂಡಿರುವುದು ಮನವರಿಕೆಯಾಗಿ ಈ ಸಂಬಂಧ ಸೆನ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದಾರೆ.

ಹುಟ್ಟುಹಬ್ಬದ ಶುಭಾಶಯ...


ಹುಟ್ಟುಹಬ್ಬ ಆಚರಿಸಿಕೊಂಡ ಮೈಸೂರು ಜೆಡಿಎಸ್ ಯುವ ಘಟಕದ ನಗರಾಧ್ಯಕ್ಷ ಮದನ್ ಮಾದೇಶ್ ಅವರನ್ನು ಬಡವರ ಬಂಧು ಅಭಿಮಾನಿಗಳ ಸಂಘದ ವತಿಯಿಂದ ಆತ್ಮೀಯವಾಗಿ ಅಭಿನಂದಿಸಿ, ಹುಟ್ಟುಹಬ್ಬದ ಶುಭಾಶಯ ಕೋರಲಾಯಿತು. ಈ ವೇಳೆ ಮಾಜಿ ಕಾರ್ಪೊರೇಟರ್‌ಗಳಾದ ಮಾದೇಶ್, ಭಾಗ್ಯ ಮಾದೇಶ್, ಜೆಡಿಎಸ್ ಮುಖಂಡ ರಮೇಶ್, ಮರೀಗೌಡ, ಭರತ್, ಸತ್ಯನಾರಾಯಣ, ಮಂಜುಳಾ, ಸತೀಶ, ಕಾಂತಮ್ಮ, ಸವಿತಾ ಗಾಂಧಿಗೌಡ ಇನ್ನಿತರರು ಉಪಸ್ಥಿತರಿದ್ದರು.

ಮಾತೃ ದಿನಾಚರಣೆ ಮೂಲಕ ವೃದ್ಧಾಶ್ರಮದ ತಾಯಂದಿರಿಗೆ ಸಂತಸದ ಕ್ಷಣಗಳು

ಮೈಸೂರು, ಮೇ 12–ಆರ್ಮ್ಸ್ ವೈಡ್ ಓಪನ್ ಫೌಂಡೇಶನ್ ವತಿಯಿಂದ ಮೈಸೂರು ನಗರದ ಸೇವಾಯಾನ ಟ್ರಸ್ಟ್ ವೃದ್ಧಾಶ್ರಮದಲ್ಲಿ ಮಾತೃ ದಿನಾಚರಣೆಯನ್ನು ವಿಶೇಷವಾಗಿ ಆಚರಿಸಲಾಯಿತು. ಕಾರ್ಯಕ್ರಮದಲ್ಲಿ ವೃದ್ಧಾಶ್ರಮದ ತಾಯಂದಿರೊಂದಿಗೆ ಸಮಯ ಕಳೆಯುವ ಮೂಲಕ ಹಾಡು, ನೃತ್ಯ, ಆಟಗಳು ಹಾಗೂ ವಿವಿಧ ಮನರಂಜನಾ ಚಟುವಟಿಕೆಗಳನ್ನು ಆಯೋಜಿಸಿ ಅವರನ್ನು ಸಂತೋಷಪಡಿಸಲಾಯಿತು. ಜೊತೆಗೆ ಆಹಾರ ವ್ಯವಸ್ಥೆ ಮಾಡಲಾಗಿದ್ದು, ತಾಯಂದಿರಿಗೆ ವಿಶೇಷ ಗೌರವ ಮತ್ತು ಪ್ರೀತಿ ತೋರಿಸಲಾಯಿತು.


ಕಾರ್ಯಕ್ರಮದ ಅಂಗವಾಗಿ ದಿನನಿತ್ಯ ಬಳಕೆಗೆ ಅಗತ್ಯವಿರುವ ನೈಟೀಸ್, ಟೀ–ಶರ್ಟ್, ಸಾಬೂನು, ಟೂತ್ ಬ್ರಶ್, ಪೇಸ್ಟ್ ಸೇರಿದಂತೆ ಹಲವು ಉಪಯೋಗಿ ಉಡುಗೊರೆಗಳನ್ನು ವಿತರಿಸಲಾಯಿತು.

ಆರ್ಮ್ಸ್ ವೈಡ್ ಓಪನ್ ಫೌಂಡೇಶನ್ ಸಮಾಜ ಸೇವಾ ಕ್ಷೇತ್ರದಲ್ಲಿ ಹಲವು ಮಹತ್ವದ ಕಾರ್ಯ ನಡೆಸುತ್ತಿದ್ದು, ದೃಷ್ಟಿ ಸಮಸ್ಯೆಯಿರುವ ವಿದ್ಯಾರ್ಥಿಗಳಿಗೆ ಸ್ಕ್ರೈಬ್ ಸೇವೆ ಹಾಗೂ ಆಡಿಯೋ ನೋಟ್ಸ್ ನೀಡುವಂತಹ ಶಿಕ್ಷಣ ಸಹಾಯ ಕಾರ್ಯಗಳಲ್ಲಿ ತೊಡಗಿಸಿಕೊಂಡಿದೆ. ಜೊತೆಗೆ ಬಡ ಮತ್ತು ಹಿಂದುಳಿದ ಮಕ್ಕಳಿಗೆ ಪ್ರತಿದಿನ ಉಚಿತ ಟ್ಯೂಷನ್ ತರಗತಿಗಳನ್ನು ನಡೆಸಿ ಶಿಕ್ಷಣದ ಮೂಲಕ ಉತ್ತಮ ಭವಿಷ್ಯ ರೂಪಿಸಲು ಸಹಕಾರ ನೀಡುತ್ತಿದೆ. 'ಸಂತೃಪ್ತಿ' ಯೋಜನೆ ಮೂಲಕ ಮದುವೆ ಹಾಗೂ ವಿವಿಧ ಕಾರ್ಯಕ್ರಮಗಳಲ್ಲಿ ಉಳಿಯುವ ಹೆಚ್ಚುವರಿ ಆಹಾರವನ್ನು ಸಂಗ್ರಹಿಸಿ ಅಗತ್ಯವಿರುವ ಜನರಿಗೆ ವಿತರಿಸುವ ಕಾರ್ಯವನ್ನು ಯಶಸ್ವಿಯಾಗಿ ನಡೆಸುತ್ತಿದೆ. ಇದುವರೆಗೆ ಸುಮಾರು 60,000 ಕಿಲೋ ಗ್ರಾಂಗೂ ಹೆಚ್ಚು ಆಹಾರವನ್ನು ರಕ್ಷಿಸಿ ಬಡ ಮತ್ತು ನಿರಾಶ್ರಿತರಿಗೆ ತಲುಪಿಸಲಾಗಿದೆ. ಸಮಾಜ ಸೇವೆಯಲ್ಲಿ ಆಸಕ್ತಿ ಇರುವವರು ಅಥವಾ ಸ್ವಯಂ ಸೇವಕರಾಗಿ ಸೇರಲು ಇಚ್ಛಿಸುವವರು 8884666032 ಸಂಪರ್ಕಿಸಬಹುದು.



ಮೈಸೂರಿನ ಸೇವಾಯಾನ ಟ್ರಸ್ಟ್ ವೃದ್ಧಾಶ್ರಮದಲ್ಲಿ ಮಾತೃ ದಿನ ಆಚರಿಸಲಾಯಿತು.

ಮನವಿ ಸಲ್ಲಿಕೆ...


ಮೈಸೂರಿನ ಕುವೆಂಪುನಗರದ ಚಿನ್ನದ ಗೋಲ್ಮಾಲ್ ಕಂಪನಿಗಳ ವಿರುದ್ಧ ಕಠಿಣ ಕ್ರಮಕ್ಕೆ ಒತ್ತಾಯಿಸಿ ಕೃಷ್ಣರಾಜ ಕ್ಷೇತ್ರದ ಶಾಸಕ ಟಿ.ಎಸ್.ಶ್ರೀವತ್ಸ, ವಕೀಲ ರವಿಕುಮಾರ ಹಾಗೂ ನೊಂದ ಸಂತ್ರಸ್ತರು ರಾಜ್ಯದ ಪೊಲೀಸ್ ಮಹಾ ನಿರ್ದೇಶಕರನ್ನು ಭೇಟಿ ಮಾಡಿ ಮನವಿ ಸಲ್ಲಿಸಿದರು.

ಇಂದು ಗ್ಯಾರಂಟಿ ಯೋಜನೆಗಳ ಪ್ರಗತಿ ಪರಿಶೀಲನಾ ಸಭೆ

ಮೈಸೂರು, ಮೇ 12– ಚಾಮರಾಜ ವಿಧಾನಸಭಾ ಕ್ಷೇತ್ರದ ಯುವನಿಧಿ ಮತ್ತು ಶಕ್ತಿ ಯೋಜನೆ ವಿಷಯವಾಗಿ ಸಂಬಂಧಪಟ್ಟ ಇಲಾಖೆ ಅಧಿಕಾರಿಗಳಿಗೆ ಮೇ 13ರಂದು ಮಧ್ಯಾಹ್ನ 3 ಗಂಟೆಗೆ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ಸಭೆಯನ್ನು ಏರ್ಪಡಿಸಲಾಗಿದೆ ಎಂದು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಹಾಗೂ ಮಹಾನಗರಪಾಲಿಕೆ ವಲಯ ಕಚೇರಿ–6ರ ಕಂದಾಯಾಧಿಕಾರಿ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಗುಡುಮಾದನಹಳ್ಳಿಯಲ್ಲಿ ನಿಮ್ಹಾನ್ಸ್ ಆಸ್ಪತ್ರೆಗೆ ತೀವ್ರ ವಿರೋಧ

ಮೇ 15ರಂದು ಮೈಸೂರು, ಚಾ.ನಗರ, ಮಂಡ್ಯ ರೈತರಿಂದ ಪಾದಯಾತ್ರೆ

ಮೈಸೂರು, ಮೇ12(ಬಿಎಲ್‌ಯು)–ನಿಮ್ಹಾನ್ಸ್ ಆಸ್ಪತ್ರೆ ನಿರ್ಮಾಣಕ್ಕಾಗಿ ಮೈಸೂರು ತಾಲೂಕು ಗುಡುಮಾದನಹಳ್ಳಿಯ ಕೃಷಿ ಭೂಮಿ ಮಂಜೂರು ರದ್ದು ಮಾಡಿ, ಹಸಿರು ವಲಯವನ್ನಾಗಿ ಘೋಷಣೆ ಮಾಡುವಂತೆ ಆಗ್ರಹಿಸಿ ಕರ್ನಾಟಕ ರಾಜ್ಯ ರೈತ ಸಂಘದ ಮೈಸೂರು, ಚಾಮರಾಜನಗರ ಹಾಗೂ ಮಂಡ್ಯ ಜಿಲ್ಲೆಯ ರೈತರು ಮೇ 15ರಂದು ಗುಡುಮಾದನಹಳ್ಳಿಯಿಂದ ಮೈಸೂರು ಜಿಲ್ಲಾ ಪಂಚಾಯತ್ ಕಚೇರಿವರೆಗೆ ಪಾದಯಾತ್ರೆ ನಡೆಸಲಿದ್ದಾರೆ.

ಗುಡುಮಾದನಹಳ್ಳಿಯ 36 ಎಕರೆಯಲ್ಲಿ 80 ಕುಟುಂಬಗಳು ಕಳೆದ 70 ವರ್ಷಗಳಿಂದ ಕೃಷಿ ಮಾಡಿಕೊಂಡು ಸಾಧೀನಾನುಭವದಲ್ಲಿದ್ದರು. ಆದರೆ ಈಗ ಈ ಭೂಮಿಯನ್ನು ನಿಮ್ಹಾನ್ಸ್ ಆಸ್ಪತ್ರೆ ನಿರ್ಮಾಣಕ್ಕಾಗಿ ಸರ್ಕಾರ ಮಂಜೂರು ಮಾಡಿದೆ. ಇದನ್ನು ವಿರೋಧಿಸಿ ಕಳೆದ 129 ದಿನಗಳಿಂದ ರೈತರು ಅದೇ ಸ್ಥಳದಲ್ಲಿ ಪ್ರತಿಭಟನೆ ನಡೆಸುತ್ತಿದ್ದಾರೆ.

ಮೈಸೂರು ತಾಲೂಕು ಹೊಸಹುಂಡಿ ಹಾಗೂ ವರುಣ ವಿಧಾನಸಭಾ ಕ್ಷೇತ್ರದ ಇಮ್ಮಾವು ಗ್ರಾಮದಲ್ಲಿ ಸರ್ಕಾರಿ ಭೂಮಿ ಇದ್ದು, ಅಲ್ಲಿ ಆಸ್ಪತ್ರೆ ನಿರ್ಮಾಣ ಮಾಡಲಿ. ಅದು ಬಿಟ್ಟು ಆಸ್ಪತ್ರೆ ನಿರ್ಮಾಣ ಮಾಡಲು ಅಲ್ಲಿ ಉಳುಮೆ ಮಾಡುತ್ತಿದ್ದ ರೈತರನ್ನು ಒಕ್ಕಲೆಬ್ಬಿಸಿರುವುದು ಎಷ್ಟು ಸರಿ ಎಂದು ರೈತರು ಪ್ರಶ್ನಿಸಿದ್ದಾರೆ.

ಈ ಹಿನ್ನೆಲೆಯಲ್ಲಿ ನಿಮ್ಹಾನ್ಸ್ ಆಸ್ಪತ್ರೆ ನಿರ್ಮಾಣಕ್ಕೆ ಭೂಮಿ ಮಂಜೂರನ್ನು ರದ್ದು ಮಾಡಿ ರೈತರು ಕೃಷಿ ಮಾಡಲು ಹಸಿರು ವಲಯವನ್ನಾಗಿ ಘೋಷಣೆ ಮಾಡುವಂತೆ ಆಗ್ರಹಿಸಿ ಮೇ 15ರಂದು ರೈತರು ಗುಡುಮಾದನಹಳ್ಳಿಯಿಂದ ಮೈಸೂರು ಜಿಪಂನಲ್ಲಿರುವ ಮುಖ್ಯಮಂತ್ರಿ ಕಚೇರಿವರೆಗೆ ಪಾದಯಾತ್ರೆ ನಡೆಸಲಿದ್ದಾರೆ.

ಅಂದಿನ ಪ್ರತಿಭಟನೆಯಲ್ಲಿ ನಿವೃತ್ತ ಮೇಜರ್ ಜನರಲ್ ಒಂಬತ್ಕೆರೆ, ಸಂಯುಕ್ತ ಹೋರಾಟ ಕರ್ನಾಟಕದ ಮುಖಂಡರಾದ ಟಿ.ಯಶವಂತ್, ನೂರ್ ಶ್ರೀಧರ್, ದಲಿತ ಸಂಘರ್ಷ ಸಮಿತಿ ಮುಖಂಡರಾದ ಬೆಟ್ಟಯ್ಯ ಕೋಟೆ ಸೇರಿದಂತೆ ಹಲವರು ಭಾಗವಹಿಸಲಿದ್ದಾರೆ.

ಯುಪಿಎಸ್‌ಸಿ ಪರೀಕ್ಷೆಯಲ್ಲಿ ತೇರ್ಗಡೆಯಾದ ಅಭಿಷೇಕ್ ನಾಯಕ್, ಸಾಗರ್ ಅಶ್ವತ್ಥಪ್ಪರಿಗೆ ನವೋದಯ ಫೌಂಡೇಷನ್‌ನ ನವೋ–ಪ್ರಮತಿ ಸೇವಾ ಸಂಸ್ಥೆಯಿಂದ ಅಭಿನಂದನೆ


ನವೋದಯ ಫೌಂಡೇಷನ್‌ನ ನವೋ–ಪ್ರಮತಿ ನಾಗರಿಕ ಸೇವಾ ಸಂಸ್ಥೆ ವತಿಯಿಂದ 2026ನೇ ಸಾಲಿನ ಯುಪಿಎಸ್‌ಸಿ ಪರೀಕ್ಷೆಯಲ್ಲಿ ಉತ್ತೀರ್ಣರಾದ ಜಿ.ಎಸ್.ಅಭಿಷೇಕ್ ನಾಯಕ್ ಮತ್ತು ಸಾಗರ್ ಅಶ್ವತ್ಥಪ್ಪ ಅವರನ್ನು ಅಭಿನಂದಿಸಲಾಯಿತು. ಈ ವೇಳೆ ಎಡಿಸಿ ಆರ್.ಐಶ್ವರ್ಯ, ಕ್ಯಾಪ್ಟನ್ ನೇವಲ್ ಸೈನಿ, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್, ಕೆ.ಎಸ್.ಫಣಿರಾಜ್ ಮತ್ತಿತರರಿದ್ದರು.

ಮೈಸೂರು,ಮೇ 12(ಎಂಕೆ)– 2026ನೇ ಸಾಲಿನ ಯುಪಿಎಸ್‌ಸಿ ಪರೀಕ್ಷೆಯಲ್ಲಿ ಉತ್ತೀರ್ಣರಾದ ಜಿ.ಎಸ್.ಅಭಿಷೇಕ್ ನಾಯಕ್(ಆಲ್ ಇಂಡಿಯಾ ರ್‍ಯಾಂಕ್–122) ಮತ್ತು ಸಾಗರ್ ಅಶ್ವತ್ಥಪ್ಪ(ಆಲ್ ಇಂಡಿಯಾ ರ್‍ಯಾಂಕ್–641) ಅವರನ್ನು ನವೋದಯ ಫೌಂಡೇಷನ್‌ನ ನವೋ–ಪ್ರಮತಿ ನಾಗರಿಕ ಸೇವಾ ಸಂಸ್ಥೆ ವತಿಯಿಂದ ಅಭಿನಂದಿಸಲಾಯಿತು.

ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಸಭಾಂಗಣದಲ್ಲಿ ಮಂಗಳವಾರ ಆಯೋಜಿಸಿದ್ದ ಅಭಿನಂದನಾ ಕಾರ್ಯಕ್ರಮದಲ್ಲಿ ಮೈಸೂರು ಜಿಲ್ಲೆಯ ಅಪರ ಜಿಲ್ಲಾಧಿಕಾರಿ ಆರ್.ಐಶ್ವರ್ಯ, ಸಾಧಕ ವಿದ್ಯಾರ್ಥಿಗಳನ್ನು ಅಭಿನಂದಿಸಿದರು. ಬಳಿಕ ಮಾತನಾಡಿದ ಅವರು, 2015ರಲ್ಲಿ ನಾನು ಕೂಡ ಕೆಎಎಸ್ ಪರೀಕ್ಷೆಯಲ್ಲಿ ಉತ್ತೀರ್ಣವಾದಾಗ ನವೋ–ಪ್ರಮತಿ ಸಂಸ್ಥೆಯಿಂದ ಅಭಿನಂದಿಸಲಾಗಿತ್ತು. ಈ ಸಂಸ್ಥೆಯು ವಿಶ್ವವಿದ್ಯಾನಿಲಯದ ರೀತಿಯಲ್ಲಿ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿ ನೀಡುತ್ತಿರುವುದು ಶ್ಲಾಘನೀಯ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಪಾಸ್ ಆಗುವುದು ತಪಸ್ಸು ಮಾಡಿ ಗೆದ್ದಂತೆ. ಇದಕ್ಕೆ ಸರಿಯಾಗಿ ಮಾರ್ಗದರ್ಶನ ನೀಡುವ ಗುರುಗಳ ಪಾತ್ರ ಮಹತ್ವದ್ದಾಗಿದೆ. ವ್ಯಕ್ತಿಯ ವ್ಯಕ್ತಿತ್ವವನ್ನು ರೂಪಿಸುವಲ್ಲಿ ಪರೀಕ್ಷಾ ತರಬೇತಿ ಸಂಸ್ಥೆಗಳ ಪಾತ್ರವೂ ಮುಖ್ಯವಾಗಿದೆ. ಹಾಗೆಯೇ ಸಮಾಜದ ಕಟ್ಟಕಡೆಯ ವ್ಯಕ್ತಿಗೆ ನ್ಯಾಯ ದೊರಕಿಸಿ, ಆತನ ಮುಖದಲ್ಲಿ ಮಂದಹಾಸ ಮೂಡುವಂತೆ ಮಾಡಿದರೆ ನಮ್ಮ ಸಾಧನೆ ಸಾರ್ಥಕವಾದಂತೆ ಎಂದರು.

ಕೆಪಿಎಸ್‌ಸಿ ಮತ್ತು ಯುಪಿಎಸ್‌ಸಿ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಬೇಕಾದರೆ ನಿರಂತರ ಅಧ್ಯಯನ ಇರಬೇಕು. ಯಾವಾಗಲೂ ಸಕಾರಾತ್ಮಕವಾಗಿ ಆಲೋಚನೆ ಮಾಡಬೇಕು. ದೊರೆಯುವ ಅವಕಾಶಗಳನ್ನು ಮತ್ತು ವೇದಿಕೆಗಳನ್ನು ಸದ್ಬಳಕೆ ಮಾಡಿಕೊಳ್ಳಬೇಕು ಎಂದು ಕಿವಿಮಾತು ಹೇಳಿದರು.

ಅಭಿನಂದನಾ ಕಾರ್ಯಕ್ರಮದಲ್ಲಿ ಭಾರತೀಯ ಸೇನೆ ಎಸ್‌ಎಸ್‌ಬಿ ಮಂಡಳಿ ಉಪನಿರ್ದೇಶಕ ಕ್ಯಾಪ್ಟನ್ ನೇವಲ್ ಸೈನಿ, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ. ರಾಜೀವ್, ನವೋ–ಪ್ರಮತಿ ನಾಗರಿಕ ಸೇವಾ ಸಂಸ್ಥೆಯ ಸಂಚಾಲಕ ಕೆ.ಎಸ್. ಫಣಿರಾಜ್, ಲಕ್ಷ್ಮಿಪುರಂ ಪೊಲೀಸ್ ಠಾಣೆ ಇನ್ಸ್‌ಪೆಕ್ಟರ್ ಹಾಗೂ ನವೋ–ಪ್ರಮತಿ ಗೌರವ ಕಾರ್ಯದರ್ಶಿ ರವಿಶಂಕರ್, ಕಾರ್ಯನಿರ್ವಾಹಕ ನಿರ್ದೇಶಕಿ ಸಿ.ಎಸ್.ಪ್ರಿಯದರ್ಶಿನಿ ಉಪಸ್ಥಿತರಿದ್ದರು.

ಎನ್‌ಎಸಿಓಸಿಐ ರಾಜ್ಯ, ವಿಭಾಗೀಯ ಅಧ್ಯಕ್ಷರಿಗೆ ಬಡ್ತಿ


ಎಸ್.ಗುರುಸ್ವಾಮಿ

ಮೈಸೂರು, ಮೇ 12– ನ್ಯಾಷನಲ್ ಆ್ಯಂಟಿ ಕರಪ್ಷನ್ ಮತ್ತು ಆಪರೇಷನ್ ಕಮಿಟಿ ಆಫ್ ಇಂಡಿಯಾ(ಎನ್‌ಎಸಿಓಸಿಐ) ಸಂಸ್ಥೆಯ ಕರ್ನಾಟಕ ರಾಜ್ಯದ ಅಧ್ಯಕ್ಷ ಕೆ.ಪ್ರಭಾಕರ್ ಅವರನ್ನು ಗೌರವಾಧ್ಯಕ್ಷ ಸ್ಥಾನಕ್ಕೆ ಮತ್ತು ಮೈಸೂರು ವಿಭಾಗದ ಅಧ್ಯಕ್ಷ ಎಸ್.ಗುರುಸ್ವಾಮಿ ಅವರನ್ನು 2026–27ನೇ ಸಾಲಿಗೆ ಕರ್ನಾಟಕ ರಾಜ್ಯ ಅಧ್ಯಕ್ಷ ಹುದ್ದೆಗೆ ಬಡ್ತಿ ನೀಡಿ, ಎನ್‌ಎಸಿಓಸಿ ಸ್ಥಾಪಕ ರಾಷ್ಟ್ರೀಯ ಅಧ್ಯಕ್ಷ ಡಾ.ರಾಜೇಶ್ ಶುಕ್ಲಾ ಆದೇಶಿಸಿದ್ದಾರೆ.

ದೇಶ – ವಿದೇಶ

ಮೂವರ ಸರಣಿ ಹತ್ಯೆ ಆರೋಪಿ ಎನ್‌ಕೌಂಟರ್‌ಗೆ ಬಲಿ



ಉತ್ತರ ಪ್ರದೇಶ: ವಿನಾಕಾರಣ 26 ಗಂಟೆಗಳ ಅವಧಿಯಲ್ಲಿ ಮೂವರನ್ನು ಹತ್ಯೆ ಮಾಡಿದ್ದ ಸೈಕೋ ಕಿಲ್ಲರ್‌ನನ್ನು ಉತ್ತರ ಪ್ರದೇಶ ಪೊಲೀಸರು ಎನ್‌ಕೌಂಟರ್ ಮಾಡಿದ್ದಾರೆ. ಪಂಜಾಬ್‌ನ ಅಮೃತಸರ ನಿವಾಸಿಯಾಗಿರುವ ಮಾಜಿ ಸೈನಿಕ ಗುರುಪ್ರೀತ್ ಸಿಂಗ್ ಪೊಲೀಸರ ಗುಂಡಿನಿಂದ ಹತನಾದವನು. ಈತನನ್ನು ಪೊಲೀಸರು ವಶಕ್ಕೆ ಪಡೆದು, ಸ್ಥಳ ಮಹಜರಿಗೆ ಕರೆದೊಯ್ದಿದ್ದಾಗ ಈ ಘಟನೆ ನಡೆದಿದೆ. ಆರೋಪಿಯು ಪೊಲೀಸರಿಂದ ಪಿಸ್ತೂಲ್ ಕಿತ್ತುಕೊಂಡು ಗುಂಡು ಹಾರಿಸಿದ ಪರಿಣಾಮ ಸಬ್ ಇನ್ಸ್‌ಪೆಕ್ಟರ್ ಮತ್ತು ಕಾನ್ಸ್‌ಟೇಬಲ್ ಗಾಯಗೊಂಡಿದ್ದು, ಪೊಲೀಸರು ತಮ್ಮ ರಕ್ಷಣೆಗಾಗಿ ಆರೋಪಿಗೆ ಗುಂಡು ಹಾರಿಸಿದ್ದಾರೆ. ತಕ್ಷಣವೇ ಆತನನ್ನು ಆಸ್ಪತ್ರೆಗೆ ಕರೆದೊಯ್ಯುವಷ್ಟರಲ್ಲಿ ಮೃತಪಟ್ಟಿದ್ದಾನೆ.

ಸೇನೆಯಿಂದ 2021ರಲ್ಲಿ ನಿವೃತ್ತಿಯಾದ ಬಳಿಕ ಗುರುಪ್ರೀತ್ ಸಿಂಗ್, ಸೆಕ್ಯೂರಿಟಿ ಭದ್ರತಾ ಸಿಬ್ಬಂದಿಯಾಗಿ ಬಿಹಾರದಲ್ಲಿ ಕೆಲಸ ಮಾಡುತ್ತಿದ್ದ. ಆದರೆ, ಅತಿಯಾದ ಮದ್ಯ ಸೇವನೆಯಿಂದ ಕೆಲಸದಿಂದ ವಜಾಗೊಂಡಿದ್ದರು. ಈತ ಬಿಹಾರ, ಪ್ರಯಾಗ್‌ರಾಜ್ ಮತ್ತು ಚಂದೌಲಿ ನಡುವೆ ರೈಲಿನಲ್ಲಿ ಪ್ರಯಾಣಿಸುವಾಗ ಮೇ 10ರಂದು ಮೂವರಿಗೆ ಗುಂಡು ಹಾರಿಸಿ, ಹತ್ಯೆ ಮಾಡಿದ್ದನು.

ಸ್ಫೋಟಕ ತುಂಬಿದ್ದ ಕಾರು ಬ್ಲಾಸ್ಟ್; ಇಬ್ಬರು ಪೊಲೀಸರು ಸೇರಿ 9 ಮಂದಿ ಸಾವು



ಪಾಕಿಸ್ತಾನ: ಸ್ಫೋಟಕ ತುಂಬಿದ್ದ ಕಾರೊಂದು ಬ್ಲಾಸ್ಟ್ ಆದ ಪರಿಣಾಮ ಸುಮಾರು 9 ಜನ ಪ್ರಾಣ ಕಳೆದುಕೊಂಡಿರುವ ಘಟನೆ ಪಾಕಿಸ್ತಾನದ ಖೈಬರ್ ಪ್ರಾಂತ್ಯದ ನೌರಂಗ್ ಮಾರ್ಕೆಟ್‌ನಲ್ಲಿ ಸಂಭವಿಸಿದೆ. ಸೋಮವಾರ ನಡೆದಿರುವ ಈ ಘಟನೆಯಲ್ಲಿ 7 ಜನ ನಾಗರಿಕರು ಹಾಗೂ ಇಬ್ಬರು ಪೊಲೀಸ್ ಸಿಬ್ಬಂದಿ ಸಾವನ್ನಪಿದ್ದು, ಹಲವರು ತೀವ್ರವಾಗಿ ಗಾಯಗೊಂಡಿದ್ದಾರೆ. ಸದಾ ಜನರಿಂದ ಕಿಕ್ಕಿರಿದಿರುವ ನೌರಂಗ್ ಮಾರ್ಕೆಟ್‌ನ ರೈಲ್ವೆ ಗೇಟಿಗೆ ಸ್ಫೋಟಕ ಹೊತ್ತಿದ್ದ ಕಾರೊಂದು ಬಂದು ಬಡಿದ ಪರಿಣಾಮ ಈ ಘಟನೆ ನಡೆದಿದೆ ಎನ್ನಲಾಗುತ್ತಿದ್ದು, ಪಾಕಿಸ್ತಾನ ಹಾಗೂ ಅಫ್ಘಾನಿಸ್ತಾನ ಗಡಿಯಲ್ಲಿ ಉದ್ವಿಗ್ನ ವಾತಾವರಣ ನಿರ್ಮಾಣವಾಗಿದೆ. ಸ್ಥಳಕ್ಕೆ ಭದ್ರತಾ ಸಿಬ್ಬಂದಿ ರಕ್ಷಣಾ ಕಾರ್ಯಾಚರಣೆ ಮುಂದುವರಿಸಿದ್ದು, ಗಾಯಗೊಂಡವರನ್ನು ಹತ್ತಿರದ ಆಸ್ಪತ್ರೆಗೆ ಸಾಗಿಸಲಾಗಿದೆ. ಹಾಗೆಯೇ ಘಟನೆಗೆ ಕಾರಣವಾದ ಕಾರಿನ ಹಿನ್ನೆಲೆ ಬಗ್ಗೆ ತನಿಖೆ ನಡೆಸಲಾಗುತ್ತಿದೆ. ಈ ದಾಳಿಯ ಹೊಣೆಯನ್ನು ಯಾವುದೇ ಸಂಘಟನೆ ಹೊತ್ತುಕೊಳ್ಳದ ಹಿನ್ನಲೆ ಇದರ ಹಿಂದೆ ಯಾರ ಕೈವಾಡವಿದೆ, ಇದು ಯೋಜಿತ ದಾಳಿಯೇ ಅಥವಾ ಅಕಸ್ಮಾತ್ ಆಗಿ ನಡೆದ ಅನಾಹುತವೇ ಎಂದು ಖಚಿತಪಡಿಸಿಕೊಳ್ಳಲು ತನಿಖೆ ಮುಂದುವರೆಸಲಾಗಿದೆ.

700 ರೂ. ವಿಚಾರಕ್ಕೆ ಪರಿಚಿತನ ಹತ್ಯೆ; 8 ಮಂದಿ ಬಂಧನ

ತೆಲಂಗಾಣ: ಕೇವಲ 700 ರೂಪಾಯಿ ವಿಚಾರಕ್ಕೆ ಎಸಿ ಟೆಕ್ನೀಷಿಯನ್ ಕೊಲೆಗೈದ ಘಟನೆ ಹೈದರಾಬಾದ್ ನಗರದ ಅತ್ತಾಪುರದಲ್ಲಿ ನಡೆದಿದ್ದು, ತಡವಾಗಿ ಬೆಳಕಿಗೆ ಬಂದಿದೆ. ಲ್ಯಾಂಗರ್ ಹೌಜ್ ನಿವಾಸಿ ಮಹ್ಮದ್ ಹುಸೇನ್ (24) ಕೊಲೆಯಾದ ವ್ಯಕ್ತಿ. ಆರೋಪಿಗಳಾದ ಕೆ.ಪ್ರಶಾಂತ್, ಎಂ.ಜಗದೀಶ್, ರಾಮ್ ರೋಷನ್ ಯಾದವ್, ತರುಣ್ ಕುಮಾರ್, ಎ.ನಿಖಿಲ್, ಜಿ.ರಾಜ್‌ಕುಮಾರ್, ವೆಂಗಲ ರಾವ್ ಮತ್ತು ಎಂ.ಪ್ರಶಾಂತ್ ಎಂಬವರನ್ನು ರಾಜೇಂದ್ರ ನಗರ ಟಾಸ್ಕ್‌ಫೋರ್ಸ್ ಹಾಗೂ ಅತ್ತಾಪುರ ಪೊಲೀಸರು ಜಂಟಿ ಕಾರ್ಯಾಚರಣೆ ನಡೆಸಿ ಬಂಧಿಸಿದ್ದಾರೆ. ಮೊಹಮ್ಮದ್ ಹುಸೇನ್ ಗಾಂಜಾ ಮಾರಾಟ ಮಾಡುತ್ತಿದ್ದ. ಪ್ರಮುಖ ಆರೋಪಿ ಕೆ.ಪ್ರಶಾಂತ್ ಇತ್ತೀಚೆಗೆ ಗಾಂಜಾ ಪ್ಯಾಕೆಟ್‌ಗಳಿಗಾಗಿ 700 ರೂ. ಮುಂಗಡ ನೀಡಿದ್ದ. ಆದರೆ ಹಲವು ದಿನಗಳಾದರೂ ಹುಸೇನ್ ಗಾಂಜಾ ನೀಡಿರಲಿಲ್ಲ. ಇಲ್ಲವೇ ಹಣವನ್ನೂ ವಾಪಸ್ ಮಾಡದ ಕಾರಣ ದ್ವೇಷ ಬೆಳೆಸಿಕೊಂಡಿದ್ದ. ಈ ಹಿನ್ನೆಲೆಯಲ್ಲಿ ಮೇ 9ರ ರಾತ್ರಿ ಅತ್ತಾಪುರ ಮಾರ್ಗದ ಮೆಟ್ರೋ ಪಿಲ್ಲರ್ ಬಳಿ ಹುಸೇನ್‌ನನ್ನು ತಡೆದು, ಅಲ್ಲಿಂದ ಹತ್ತಿರದ ಫಂಕ್ಷನ್ ಹಾಲ್‌ಗೆ ಕರೆದೊಯ್ದು ಚಾಕುವಿನಿಂದ ಮಾರಣಾಂತಿಕ ಹಲ್ಲೆ ನಡೆಸಲಾಗಿತ್ತು. ಕೂಡಲೇ ಆತನನ್ನು ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ ಚಿಕಿತ್ಸೆ ಫಲಿಸದೆ ಮೃತಪಟ್ಟಿದ್ದಾನೆ.

ಭಾರತದ ವಿರುದ್ಧ ನಾಲಿಗೆ ಹರಿಬಿಟ್ಟ ಬಾಂಗ್ಲಾ ಧರ್ಮಗುರು



ಬಾಂಗ್ಲಾ: ಪಶ್ಚಿಮ ಬಂಗಾಳದಲ್ಲಿ ಬಿಜೆಪಿ ಆಡಳಿತ ಆರಂಭವಾಗುತ್ತಿದ್ದಂತೆ ಬಾಂಗ್ಲಾದೇಶದಲ್ಲಿ ಭಾರತದ ವಿರುದ್ಧ ವಿಷಕಾರುವುದು ಹೆಚ್ಚಾಗಿದೆ. ಅಕ್ರಮ ಬಾಂಗ್ಲಾ ವಲಸಿಗರು ತವರಿನತ್ತ ಮುಖ ಮಾಡಿರುವುದರಿಂದ ಬಾಂಗ್ಲಾದೇಶದ ತೀವ್ರವಾದಿ ಧರ್ಮಗುರು ಮೌಲಾನ ಇನಾಯುತ್ತಲ್ಲಾ ಅಬ್ಬಾಸಿ ಭಾರತದ ವಿರುದ್ಧ ಕಿಡಿಕಾರಿದ್ದಾನೆ. ಪಶ್ಚಿಮ ಬಂಗಾಳದಲ್ಲಿ ಮುಸ್ಲಿಮರು ಸುರಕ್ಷಿತರಾಗಿರದಿದ್ದರೆ, ಬಾಂಗ್ಲಾದೇಶದಲ್ಲಿರುವ ಹಿಂದೂಗಳಿಗೂ ಸುರಕ್ಷತೆ ಇರುವುದಿಲ್ಲ ಎಂದು ಭಾರತ ವಿರೋಧಿ ಪ್ರಚೋದನಕಾರಿ ಹೇಳಿಕೆ ನೀಡಿದ್ದಾರೆ. ಮಾತ್ರವಲ್ಲದೇ ಬಾಂಗ್ಲಾದೇಶದ ಮುಸ್ಲಿಮರು ದೆಹಲಿಯಲ್ಲಿ ಇಸ್ಲಾಮಿಕ್ ಧ್ವಜ ಹಾರಿಸಲಿದ್ದಾರೆ ಎಂದೂ ನಾಲಿಗೆ ಹರಿಬಿಟ್ಟಿದ್ದಾನೆ. ಇದೇ ವೇಳೆ ಬಾಂಗ್ಲಾ ಸರ್ಕಾರದ ವಿರುದ್ಧವೂ ಕಿಡಿಕಾರಿ, ಭಾರತಕ್ಕೆ ಕಠಿಣ ಎಚ್ಚರಿಕೆ ನೀಡಬೇಕು, ಅಗತ್ಯವಿದ್ದರೆ ವ್ಯಾಪಾರ ಸಂಬಂಧಗಳನ್ನು ಕಡಿತಗೊಳಿಸಬೇಕು ಎಂದು ಹೇಳಿದ್ದಾನೆ.

ಗೆಲುವಿನ ಭವಿಷ್ಯ ಹೇಳಿದ್ದ ಜೋತಿಷಿ ಈಗ ಸಿಎಂ ವಿಶೇಷ ಕರ್ತವ್ಯಾಧಿಕಾರಿ!



ತಮಿಳುನಾಡು: ಗೆಲುವಿನ ಭವಿಷ್ಯ ನುಡಿದಿದ್ದ ಜ್ಯೋತಿಷಿಯವರನ್ನೇ ತಮಿಳುನಾಡಿನ ನೂತನ ಮುಖ್ಯಮಂತ್ರಿ ಜೋಸೆಫ್ ವಿಜಯ್ ತಮ್ಮ ವಿಶೇಷ ಕರ್ತವ್ಯಾಧಿಕಾರಿಯಾಗಿ ನೇಮಿಸಿಕೊಂಡಿದ್ದಾರೆ. ಜ್ಯೋತಿಷಿ ರಾಧನ್ ಪಂಡಿತ್ ವೆಟ್ರಿವೇಲ್ ಅವರು ಚುನಾವಣೆಗೂ ಮುನ್ನ ಟಿವಿಕೆ ಗೆಲುವಿನ ಭವಿಷ್ಯ ನುಡಿದಿದ್ದರು. ಅವರು ನುಡಿದಂತೆ ಟಿವಿಕೆ ಅತೀ ದೊಡ್ಡ ಪಕ್ಷವಾಗಿ ಹೊರಹೊಮ್ಮಿ, ವಿಜಯ್ ಮುಖ್ಯಮಂತ್ರಿಯಾಗಿದ್ದಾರೆ. ಇದೀಗ ಗೆಲುವಿನ ಭವಿಷ್ಯ ನುಡಿದಿದ್ದ ಜ್ಯೋತಿಷಿಯವರ ಅದೃಷ್ಟವೂ ಬದಲಾಗಿ ಅವರು ಸಿಎಂ ವಿಶೇಷ ಕರ್ತವ್ಯಾಧಿಕಾರಿಯಾಗಿ ನೇಮಕಗೊಂಡಿದ್ದಾರೆ. ತಮಿಳುನಾಡು ರಾಜ್ಯಪಾಲರು ಆರಂಭದಲ್ಲಿ ಸರ್ಕಾರ ರಚನೆಗೆ ಒಪ್ಪದ ನಂತರವೂ ಬೆಂಬಲ ಸೂಚಿಸಿದ ಶಾಸಕರ ಸಹಿಯೊಂದಿಗೆ 4ನೇ ಬಾರಿಗೆ ಭೇಟಿ ಮಾಡಿ, ಪ್ರಮಾಣ ವಚನ ಬೋಧನೆಗೆ ಹಕ್ಕು ಮಂಡಿಸಿದ್ದರು. ಲೋಕಭವನದ ಕರೆಯಂತೆ ಮೇ 10ರಂದು ತಮಿಳುನಾಡು ಸಿಎಂ ಆಗಿ ವಿಜಯ್ ಪ್ರಮಾಣ ವಚನ ಸ್ವೀಕರಿಸಿದರು. ಆ ದಿನ ಮಧ್ಯಾಹ್ನ 3.45ಕ್ಕೆ ಕಾರ್ಯಕ್ರಮ ನಿಗದಿಯಾಗಿತ್ತು. ಆದರೆ ಜ್ಯೋತಿಷಿಯವರ ಸಲಹೆ ಮೇರೆಗೆ ಬೆಳಿಗ್ಗೆ 10ಕ್ಕೆ ಸಮಯ ಬದಲಾವಣೆ ಮಾಡಲಾಯಿತು.

ಮುಂಗಾರು ಪ್ರವೇಶ ಹಿನ್ನೆಲೆ ಅಗತ್ಯ ಮುನ್ನೆಚ್ಚರಕ್ಕೆ ಡಿಸಿ ಸೂಚನೆ

ಮಡಿಕೇರಿ, ಮೇ 12–ಜೂನ್ ಮೊದಲ ಅಥವಾ ಎರಡನೇ ವಾರದಲ್ಲಿ ಜಿಲ್ಲೆಗೆ ಮುಂಗಾರು ಪ್ರವೇಶ ಆಗುವ ಸಾಧ್ಯತೆ ಇದ್ದು, ಆ ದಿಸೆಯಲ್ಲಿ ಅಗತ್ಯ ಸಿದ್ಧತೆಗಳನ್ನು ಮಾಡಿಕೊಳ್ಳುವಂತೆ ಜಿಲ್ಲಾ ಮತ್ತು ತಾಲೂಕು ಮಟ್ಟದ ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಎಸ್.ಜೆ.ಸೋಮಶೇಖರ್ ಸೂಚಿಸಿದ್ದಾರೆ.



ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರ ಸಭೆಯನ್ನು ಜಿಲ್ಲಾಧಿಕಾರಿ ನಡೆಸಿದರು.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಮಂಗಳವಾರ ನಡೆದ 'ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರ' ಸಭೆಯ ಅಧ್ಯಕ್ಷತೆ ವಹಿಸಿದ್ದ ಅವರು ಮಾತನಾಡಿ, ಈ ಬಾರಿ ಜನವರಿಯಿಂದ ಇಲ್ಲಿಯವರೆಗೆ ಶೇ.50 ಕ್ಕಿಂತಲೂ ಕಡಿಮೆ ಮಳೆ ಆಗಿದೆ. ಆದರೂ ಸಹ ಮಳೆಗಾಲದ ಅವಧಿಯಲ್ಲಿ ಹೆಚ್ಚಿನ ಮಳೆಯಾಗುವ ಸಾಧ್ಯತೆ ಇರುವುದರಿಂದ ಅಗತ್ಯ ಮುನ್ನೆಚ್ಚರಿಕಾ ಕ್ರಮ ವಹಿಸಬೇಕಿದೆ. ಆ ನಿಟ್ಟಿನಲ್ಲಿ ಈ ಹಿಂದಿನಂತೆ ಅಗತ್ಯ ಸಿದ್ಧತೆ ಮಾಡಿ ಕೊಳ್ಳುವಂತೆ ನಿರ್ದೇಶನ ನೀಡಿದರು.

ಪ್ರವಾಹ ಪೀಡಿತ ಹಾಗೂ ಭೂಕುಸಿತ ಪ್ರದೇಶ ಸೇರಿದಂತೆ ಸೂಕ್ಷ್ಮ ಪ್ರದೇಶಗಳನ್ನು ಈಗಾಗಲೇ ಗುರುತಿಸಲಾಗಿದ್ದು, ಅಂತಹ ಪ್ರದೇಶಗಳಲ್ಲಿ ಹೆಚ್ಚಿನ ಎಚ್ಚರವಹಿಸಬೇಕು

ಈಗಾಗಲೇ ನೋಡಲ್ ಅಧಿಕಾರಿಗಳನ್ನು ನಿಯೋಜಿಸಲಾಗಿದ್ದು, ನೋಡಲ್ ಅಧಿಕಾರಿಗಳು, ತಹಸೀಲ್ದಾರರು, ತಾ.ಪಂ. ಇಒಗಳು, ಸ್ಥಳೀಯ ಪೊಲೀಸ್ ಇನ್ಸ್‌ಪೆಕ್ಟರ್, ಸ್ಥಳೀಯ ಎಂಜಿನಿಯರ್‌ಗಳು ಸಮನ್ವಯತೆಯಿಂದ ಕಾರ್ಯನಿರ್ವಹಿಸಬೇಕು ಎಂದು ಜಿಲ್ಲಾಧಿಕಾರಿಗಳು ಹೇಳಿದರು.

ತಾಲೂಕು ಮಟ್ಟದಲ್ಲಿ ಶಾಸಕರ ನೇತೃತ್ವದಲ್ಲಿ ಕಾರ್ಯಪಡೆ ಸಭೆ ನಡೆಸಬೇಕಿದ್ದು, ಆ ನಿಟ್ಟಿನಲ್ಲಿ ತಾಲೂಕು ಮಟ್ಟದಲ್ಲಿಯೂ ಸಹ ಸಭೆ ನಡೆಸಿ ಪ್ರವಾಹ ಪೀಡಿತ ಹಾಗೂ ಭೂಕುಸಿತ ಪ್ರದೇಶಗಳಲ್ಲಿ ಅಗತ್ಯ ಮುನ್ನೆಚ್ಚರ ವಹಿಸಲು ಮಾಹಿತಿ ನೀಡುವಂತಾಗಬೇಕು. ಈಗಾಗಲೇ ಜಿಲ್ಲಾ ಮಟ್ಟದಲ್ಲಿ ಸಹಾಯವಾಣಿ ಕೇಂದ್ರವಿದ್ದು, ತಾಲೂಕು ಮಟ್ಟದಲ್ಲಿಯೂ ಸಹ ಸಹಾಯವಾಣಿ ಕೇಂದ್ರ ಆರಂಭಿಸಬೇಕು ಎಂದು ಅವರು ನುಡಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಿಂದು ಮಣಿ ಮಾತನಾಡಿ, ಈಗಾಗಲೇ ಪೊಲೀಸ್ ಇಲಾಖೆಯಿಂದ ಅಗತ್ಯ ತಯಾರಿ ಮಾಡಿಕೊಳ್ಳಲಾಗಿದೆ. ಪೊಲೀಸ್ ಇಲಾಖೆಯಿಂದ ನಾಲ್ಕು ತಂಡಗಳನ್ನು ರಚಿಸಲಾಗಿದ್ದು, ಅಗ್ನಿಶಾಮಕ, ಅರಣ್ಯ, ವಿದ್ಯುತ್ ಇಲಾಖೆ ಸೇರಿದಂತೆ ಎಲ್ಲಾ ಹಂತದ ಅಧಿಕಾರಿಗಳು ಸ್ಥಳೀಯವಾಗಿ ಪೊಲೀಸ್ ಅಧಿಕಾರಿ ಜೊತೆ ಸಮನ್ವಯತೆ ಸಾಧಿಸಿ ಕಾರ್ಯ ನಿರ್ವಹಿಸಬೇಕು ಎಂದರು.

ಜಿ.ಪಂ.ಸಿಇಒ ಆನಂದ ಪ್ರಕಾಶ್ ಮೀನಾ ಮಾತನಾಡಿ, ಈ ಬಾರಿ ಜಿಲ್ಲೆಯಲ್ಲಿ ಅತಿ ಕಡಿಮೆ ಮಳೆಯಾಗಿದೆ. ಒಂದು ರೀತಿ ಬಿಸಿಲಿನ ವಾತಾವರಣ ಮುಂದುವರೆದಿದ್ದು, ಒಂದು ಕಡೆ ಅನಾವೃಷ್ಟಿ, ಮುಂದಿನ ದಿನಗಳಲ್ಲಿ ಅತೀವೃಷ್ಟಿಯೂ ಸಂಭವಿಸಬಹುದು. ಹೀಗೆ ಎರಡರ ಬಗ್ಗೆಯೂ ಸಹ ಅವಲೋಕನ ಮಾಡಬೇಕಿದೆ ಎಂದು ತಿಳಿಸಿದರು.

ಹೆಚ್ಚುವರಿ ಜಿಲ್ಲಾಧಿಕಾರಿ ಸಹನಾ ಎಸ್. ಹಾದಿಮನಿ, ಉಪ ಅರಣ್ಯ ಸಂರಕ್ಷಣಾಧಿ ಕಾರಿ ಅಭಿಷೇಕ್, ಜಗನ್ನಾಥ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಸತೀಶ್ ಕುಮಾರ್, ತಹಸೀಲ್ದಾರ್ ಪ್ರವೀಣ್ ಕುಮಾರ್, ಕೃಷ್ಣಮೂರ್ತಿ, ಕಿರಣ್ ಗೌರಯ್ಯ, ಸಂಜನಾ, ಶ್ರೀಧರ, ಸೆಸ್ಕ್ ಇಇ ರಾಮಚಂದ್ರ, ಲೋಕೋಪಯೋಗಿ ಇಲಾಖೆ ಇಇ ಕೆ.ಟಿ. ಪ್ರಭು, ಜಿ.ಪಂ.ಇಇ ಜಿ.ಕೆ.ನಾಯಕ್, ಪೊಲೀಸ್ ಇನ್ಸ್‌ಪೆಕ್ಟರ್ ಐ.ಪಿ.ಮೇದಪ್ಪ, ತಾ.ಪಂ. ಇಒಗಳು, ಇತರರು ಹಲವು ಮಾಹಿತಿ ನೀಡಿದರು.

ಕೊಡವರಿಗೆ ಪ್ರತ್ಯೇಕ ಕ್ಷೇತ್ರಕ್ಕೆ ಆಗ್ರಹಿಸಿ

ಸಿಎನ್‌ಸಿ ಅಹೋರಾತ್ರಿ ಸತ್ಯಾಗ್ರಹಕ್ಕೆ ಚಾಲನೆ

ಮಡಿಕೇರಿ, ಮೇ 12–ಕ್ಷೇತ್ರ ಮನರ್ ವಿಂಗಡಣೆಯ ಸಂದರ್ಭ ಕೊಡವರಿಗೆ ಪ್ರತ್ಯೇಕ ವಿಧಾನಸಭೆ ಮತ್ತು ಲೋಕಸಭಾ ಕ್ಷೇತ್ರವನ್ನು ರಚಿಸಬೇಕೆಂದು ಆಗ್ರಹಿಸಿ ಕೊಡವ ನ್ಯಾಷನಲ್ ಕೌನ್ಸಿಲ್ ಸಂಘಟನೆ 48 ಗಂಟೆಗಳ ಅಹೋರಾತ್ರಿ ಸತ್ಯಾಗ್ರಹವನ್ನು ಇಂದು ಆರಂಭಿಸಿತು.



ಸಿಎನ್‌ಸಿ 48 ಗಂಟೆಗಳ ಅಹೋರಾತ್ರಿ ಸತ್ಯಾಗ್ರಹ ಆರಂಭಿಸಿತು.

ನಗರದ ಕೊಡವ ಮಂದ್‌ನಲ್ಲಿ ಸಾಂಪ್ರದಾಯಿಕ ಪ್ರಾರ್ಥನೆಯನ್ನು ಸಲ್ಲಿಸಿ, ಮೂರು ಬಾರಿ ಕುಶಾಲತೋಪು ಹಾರಿಸುವ ಮೂಲಕ ಶಾಂತಿಯುತ ಸತ್ಯಾಗ್ರಹ ಆರಂಭಿಸಲಾಯಿತು. ಸತ್ಯಾಗ್ರಹದಲ್ಲಿ ವಿವಿಧ ಹಕ್ಕೊತ್ತಾಯಗಳನ್ನು ಮಂಡಿಸಿ, ಕೊಡವರಿಗೆ ಪ್ರತ್ಯೇಕ ವಿಧಾನಸಭೆ ಮತ್ತು ಲೋಕಸಭಾ ಕ್ಷೇತ್ರ ನೀಡಬೇಕೆಂದು ಆಗ್ರಹಿಸಿರುವ ಮನವಿ ಪತ್ರವನ್ನು ರಾಷ್ಟ್ರಪತಿ, ಪ್ರಧಾನಮಂತ್ರಿ ಹಾಗೂ ಮುಖ್ಯ ಚುನಾವಣಾ ಆಯುಕ್ತರಿಗೆ ಸಲ್ಲಿಸಲಾಗುವುದು. ಕೊಡವ ಮಂದ್‌ನಲ್ಲಿ ಮೇ 14ರಂದು ಬೆಳಗ್ಗೆ 10.30ರವರೆಗೂ ಸತ್ಯಾಗ್ರಹ ನಡೆಸಲಾಗುವುದು ಎಂದು ಸಿಎನ್‌ಸಿ ಅಧ್ಯಕ್ಷ ಎನ್.ಯು.ನಾಚಪ್ಪ ತಿಳಿಸಿದರು.

ಮುಂಬರುವ 2027ರ ರಾಷ್ಟ್ರೀಯ ಜನಗಣತಿಯಲ್ಲಿ ಕೊಡವರಿಗಾಗಿ ಪ್ರತ್ಯೇಕ ಕೋಡ್ ಮತ್ತು ಕಾಲಂ ಒದಗಿಸಬೇಕು ಎಂದು ಒತ್ತಾಯಿಸಿದ ಅವರು, ಕೊಡವ ಪ್ರಾತಿನಿಧ್ಯ ಮತ್ತು ಜನಗಣತಿ ಮಾನ್ಯತೆಗಾಗಿ ಇರುವ ಸಾಂವಿಧಾನಿಕ ಅಂಶಗಳನ್ನು ವಿವರಿಸಿದರು. ಅಪ್ಪಾರಂಡ ನಂದಿನಿ ನಂಜಪ್ಪ, ಅರೆಯಡ ಸವಿತಾ ತಿಮ್ಮಯ್ಯ, ಅಳ್ಮಂಡ ಜೈ ಗಣಪತಿ, ನಂದೇಟಿರ ರವಿ ಸುಬ್ಬಯ್ಯ, ಪಟ್ಟಮಡ ಕುಶ, ಅರೆಯಡ ಗಿರೀಶ್ ತಿಮ್ಮಯ್ಯ, ಪುದಿಯೊಕ್ಕಡ ಕಾಶಿ ಕರುಂಬಯ್ಯ, ಕಿರಿಯಮಾಡ ಶೆರಿನ್, ಮಂದಪಂಡ ಮನೋಜ್ ಮಂದಣ್ಣ, ಬಡುವಂಡ ವಿಜಯ, ಮಂದಪಂಡ ಸೂರಜ್, ಚೋಳಪಂಡ ನಾಣಯ್ಯ, ನಂದಿನೆರವಂಡ ವಿಜು, ಪುದಿಯೊಕ್ಕಡ ಪೃಥ್ವಿ, ನಂದಿನೆರವಂಡ ಅಯ್ಯಣ್ಣ, ಕೊಟ್ಟುಕತ್ತಿರ ಬಾಬಿ ಪಳಂಗಪ್ಪ, ಐಲಪಂಡ ಮಿಟ್ಟು, ಚಂಡಿರ ರಾಜ ತಿಮ್ಮಯ್ಯ, ಪಾಲೇಕಂಡ ಪ್ರಧಾನ್ ಪೂಣಚ್ಚ, ಸಾದೇರ ರಮೇಶ್ ಹಾಗೂ ಮಡಿಕೇರಿ ಕೊಡವ ಸಮಾಜದ ನಿರ್ದೇಶಕ ನಂದಿ ನೆರವಂಡ ದಿನೇಶ್ ಸತ್ಯಾಗ್ರಹದಲ್ಲಿ ಪಾಲ್ಗೊಂಡಿದ್ದರು.

ಸಮ್ಮೇಳನಾಧ್ಯಕ್ಷರಿಗೆ ಅಧಿಕೃತ ಆಹ್ವಾನ



ಸಮ್ಮೇಳನಾಧ್ಯಕ್ಷ ಅಬ್ದುಲ್ ರಶೀದ್ ಅವರಿಗೆ ಸ್ವಾಗತ ಸಮಿತಿ ಅಧಿಕೃತ ಆಹ್ವಾನ ನೀಡಿತು.

ಮಡಿಕೇರಿ, ಮೇ 12–ಜಿಲ್ಲಾ 17ನೇ ಕನ್ನಡ ಸಾಹಿತ್ಯ ಸಮ್ಮೇಳನ ಸರ್ವಾಧ್ಯಕ್ಷರಾಗಿ ಆಯ್ಕೆಯಾಗಿರುವ ಹಿರಿಯ ಸಾಹಿತಿ ಅಬ್ದುಲ್ ರಶೀದ್ ಅವರನ್ನು ಗೌರವಿಸುವ ಮೂಲಕ ಸಮ್ಮೇಳನಕ್ಕೆ ಅಧಿಕೃತ ಆಹ್ವಾನ ನೀಡಲಾಯಿತು.

ಹುಣಸೂರಿನ ಬನ್ನಿಕುಪ್ಪೆ ಗ್ರಾಮದ ನಿವಾಸದಲ್ಲಿ ನಡೆದ ಸರಳ ಸಮಾರಂಭದಲ್ಲಿ ಪರಿಷತ್ತಿನ ಜಿಲ್ಲಾ ಅಧ್ಯಕ್ಷ ಎಂ.ಪಿ ಕೇಶವ ಕಾಮತ್, ಸಮ್ಮೇಳನದ ಸ್ವಾಗತ ಸಮಿತಿ ಉಪಾಧ್ಯಕ್ಷ ಲೋಕೇಶ್ ಕುಮಾರ್, ಪ್ರಧಾನ ಕಾರ್ಯದರ್ಶಿ ಪಿ.ಎಫ್.ಸಬಾಸ್ಟಿನ್, ಆಹಾರ ಸಮಿತಿ ಅಧ್ಯಕ್ಷ ಹರೀಶ್ ಗುಡ್ಡೆಮನೆ ಸಮ್ಮೇಳನದ ಅಧ್ಯಕ್ಷರನ್ನು ಸನ್ಮಾನಿಸಿದರು. ಅಬ್ದುಲ್ ರಶೀದ್ ಪತ್ನಿ ಮೋಳಿ ವರ್ಗಿಸ್ ಉಪಸ್ಥಿತರಿದ್ದರು.

ಕುಟುಂಬ ರಕ್ಷಣೆಯಲ್ಲಿ ತಾಯಿಯ ಪಾತ್ರ ಮಹತ್ವದ್ದು

ವಿರಾಜಪೇಟೆ, ಮೇ 12–ಬೇಸಿಗೆ ಮಳೆಗಾಲ ಯಾವುದಕ್ಕೂ ಲೆಕ್ಕಿಸದೆ ದುಡಿಯುವವಳು ತಾಯಿ, ಕುಟುಂಬದ ರಕ್ಷಣೆ ಬಗ್ಗೆ ದುಡಿಯುವ ತಾಯಿಯ ಪಾತ್ರ ಮಹತ್ವಾದದ್ದು ಎಂದು ಗೋಣಿಕೊಪ್ಪಲು ಕಾವೇರಿ ಕಾಲೇಜು ಸಹಾಯಕ ಪ್ರಾಧ್ಯಾಪಕಿ ಎಸ್.ಎಂ.ರಜನಿ ಹೇಳಿದರು



ಹೊಂಬೆಳಕು ಕಿರಣ ತತ್ವಚಿಂತನಾಗೋಷ್ಠಿಯನ್ನು ಉದ್ಘಾಟಿಸುತ್ತಿರುವ ಬಾಲಕಿ.

ವಿರಾಜಪೇಟೆ ಸಮೀಪದ ಅರಮೇರಿ ಕಳಂಚೇರಿ ಮಠದ ಶ್ರೀ ಲಿಂಗರಾಜೇಂದ್ರ ಭವನದಲ್ಲಿ ನಡೆದ ಹೊಂಬೆಳಕು ಕಿರಣ 243 ಮಾಸಿಕ ತತ್ವಚಿಂತನಾಗೋಷ್ಠಿ ಕಾರ್ಯಕ್ರಮದಲ್ಲಿ ವಿಶ್ವ ತಾಯಂದಿರ ದಿನದ ಅಂಗವಾಗಿ ನಡೆದ ಕಾರ್ಯಕ್ರಮದಲ್ಲಿ 'ಕುಟುಂಬದ ರಕ್ಷಣೆಯಲ್ಲಿ ದುಡಿಯುವ ಮಹಿಳೆಯರ ಪಾತ್ರ' ಎಂಬ ವಿಷಯದ ಬಗ್ಗೆ ಉಪನ್ಯಾಸ ನೀಡಿದ ಅವರು, ಯಾವುದೇ ಮಗು ಮೊದಲು ನೋಡುವುದೇ ತಾಯಿಯನ್ನು ನಂತರ ಮನೆಯೇ ಮೊದಲ ಪಾಠಶಾಲೆಯಾಗಿ ಬೆಳೆಯುತ್ತದೆ. ಬಾಲ್ಯದಿಂದಲೂ ಮಗುವಿಗೆ ಯಾವುದೇ ತೊಂದರೆ ಆಗದಂತೆ ಪ್ರೀತಿ–ಮಮತೆಯಿಂದ ನೋಡಿಕೊಳ್ಳುವವಳು ತಾಯಿ. ಮಕ್ಕಳು ಉತ್ತಮ ಗುಣವಂತರಾಗಲು ತಾಯಿಯ ಪಾತ್ರ ಬಹುಮುಖ್ಯ ಎಂದರು.

ಮೊದಲಿಗೆ ಕಡಂಗ ಸರಕಾರಿ ಪ್ರಾಥಮಿಕ ಶಾಲಾ ಉಪಾಧ್ಯಾಯಿನಿ ವತ್ಸಲಾ ಶ್ರೀಶ ಕಾರ್ಯಕ್ರಮಕ್ಕೆ ಚಾಲನೆ ನೀಡಿ, ಮನೆಯ ಎಲ್ಲಾ ಕೆಲಸಗಳನ್ನು ಮುಗಿಸಿ ಮಕ್ಕಳನ್ನು ಬಾಲ್ಯದಿಂದಲು ಯೋಗಕ್ಷೇಮ ನೋಡಿಕೊಳ್ಳುವವಳು ತಾಯಿ, ಮಕ್ಕಳ ಭವಿಷ್ಯಕ್ಕಾಗಿ ದುಡಿಯುವವಳೆ ತಾಯಿ, ಮನೆಯಲ್ಲಿ ಎಷ್ಟು ಜನರಿದ್ದರೂ ಮಗುವನ್ನು ತಾಯಿಯೇ ನೋಡಿಕೊಳ್ಳುತ್ತಾಳೆ. ತಂದೆ ತಾಯಿ ಕಲಿಸಿದ ಸಂಸ್ಕಾರವನ್ನು ಮಕ್ಕಳು ಕಲಿಯುವಂತಾಗಬೇಕು ಎಂದರು.

ಅರಮೇರಿ ಕಳಂಚೇರಿ ಮಠದ ಪೀಠಾಧಿಪತಿಗಳಾದ ಶಾಂತಮಲ್ಲಿಕಾರ್ಜುನ ಸ್ವಾಮೀಜಿ ಸಾನಿಧ್ಯ ವಹಿಸಿ, ತಾಯಿಯ ರೂಪದಲ್ಲಿ ದೇವರನ್ನು ಕಾಣಬಹುದು, ಹಿಂದಿನ ದಿನದಲ್ಲಿ ವಿದ್ಯೆ ಇಲ್ಲದಿದ್ದರು ಸರಿ ತಪ್ಪು ಎಂಬುದನ್ನು ವಿಮರ್ಶೆ ಮಾಡುವ ಜ್ಞಾನವಿತ್ತು, ತಾಯಿ ಮಕ್ಕಳ ಯೋಗಕ್ಷೇಮವನ್ನು ನೋಡಿಕೊಂಡು ಶಿಕ್ಷಣದ ಬಗ್ಗೆ ಗಮನ ಹರಿಸುತ್ತಿದ್ದರು. ಯಾರು ತಂದೆ–ತಾಯಿ ಆಶೀರ್ವಾದ ಪಡೆಯುತ್ತಾರೊ ಅವರು ಉತ್ತಮರಾಗಲು ಸಾಧ್ಯ ಎಂದರು.

ಡಾ.ಎಸ್.ವಿ.ನರಸಿಂಹನ್ ತಾಯಂದಿರ ದುಡಿಮೆಯ ಬಗ್ಗೆ ಮಾತನಾಡಿದರು. ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಕೇಶವ ಕಾಮತ್, ಸಾಹಿತಿ ಕಿಗ್ಗಾಲು ಗಿರೀಶ್, ವೈಲೇಶ್, ಕೃಷಿಕರಾದ ತಿಮ್ಮಯ್ಯ, ವೆಂಕಟಗಿರಿ, ಉಪನ್ಯಾಸಕ ಹರೀಶ್ ಕಿಗ್ಗಾಲು ಮಾತನಾಡಿದರು.

ಪ್ರಪಾತಕ್ಕೆ ಉರುಳಿದ ಜೀಪು: ಚಾಲಕ ಸಾವು

ಮಡಿಕೇರಿ, ಮೇ 12– ನಿಯಂತ್ರಣ ಕಳೆದುಕೊಂಡ ಜೀಪು ಪ್ರಪಾತಕ್ಕೆ ಮಗುಚಿ ಬಿದ್ದು ಚಾಲಕ ಮೃತಪಟ್ಟ ಘಟನೆ ನಿನ್ನೆ ಸಂಭವಿಸಿದೆ.



ಬಾಲಕೃಷ್ಣನ್

ಜೀಪು (ಕೆಎಲ್ 13, ಎಡಬ್ಲ್ಯು–8672) ಚಾಲಕ ಕಣ್ಣಾನೂರು ನಿವಾಸಿ ಬಾಲಕೃಷ್ಣನ್ ಮೃತಪಟ್ಟ ಚಾಲಕ. ಸೋಮವಾರ ರಾತ್ರಿ ವಿರಾಜಪೇಟೆಯಿಂದ ಕೇರಳದ ಕಣ್ಣಾನೂರಿಗೆ ತೆರಳುತ್ತಿದ್ದ ಸಂದರ್ಭದಲ್ಲಿ ಉಂಟಾದ ಅಪಘಾತದಲ್ಲಿ ಪೆರಂಬಾಡಿ ಚೆಕ್ ಪೋಸ್ಟ್‌ನಿಂದ 5 ಕಿ.ಮೀ ದೂರದಲ್ಲಿ ರುವ ಪ್ರಪಾತದಲ್ಲಿ ಜೀಪು ಸಹಿತ ಬಾಲಕೃಷ್ಣನ್ ಅವರ ಮೃತ ದೇಹ ಪತ್ತೆ ಯಾಗಿದೆ. ವಿರಾಜಪೇಟೆ ಗ್ರಾಮಾಂತರ ಠಾಣಾ ಪೊಲೀಸರು ಪ್ರಕರಣ ದಾಖಲಿಸಿಕೊಂಡು ಮುಂದಿನ ಕ್ರಮ ಕೈಗೊಂಡಿದ್ದಾರೆ.

ವೆಂಕಟೇಶ್ ರಾಜಿನಾಮೆ

ಮಡಿಕೇರಿ, ಮೇ 12–ಭಾಗಮಂಡಲ ವಲಯ ಕಾಂಗ್ರೆಸ್ ಅಧ್ಯಕ್ಷ ಸ್ಥಾನಕ್ಕೆ ಕೋಳಿಬೈಲು ವೆಂಕಟೇಶ್ ರಾಜೀನಾಮೆ ನೀಡಿದ್ದಾರೆ. ವೈಯುಕ್ತಿಕ ಕಾರಣ ನೀಡಿರುವ ಅವರು, ರಾಜೀನಾಮೆ ಪತ್ರವನ್ನು ಕೊಡಗು ಜಿಲ್ಲಾ ಕಾಂಗ್ರೆಸ್ ಸಮಿತಿಯ ಅಧ್ಯಕ್ಷ ಧರ್ಮಜ ಉತ್ತಪ್ಪ ಅವರಿಗೆ ಸಲ್ಲಿಸಿದ್ದಾರೆ.

ಪೊನ್ನಪ್ಪ ನಿಧನ



ನಾಪೋಕ್ಲು, ಮೇ 12 –ಸಮೀಪದ ನೆಲಜಿ ಗ್ರಾಮ ನಿವಾಸಿ ನಿವೃತ್ತ ಶಿಕ್ಷಕ ಮಣವಟ್ಟಿರ ಪೊನ್ನಪ್ಪ (ಪೊನ್ನು ಮಣಿ 78) ಸೋಮವಾರ ನಿಧನರಾದರು. ಮೃತರು ಪತ್ನಿ, ಪುತ್ರ ಮತ್ತು ಪುತ್ರಿಯನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಸ್ವ ಗ್ರಾಮದಲ್ಲಿ ಮಂಗಳವಾರ ನೆರವೇರಿತು.

ಪದ್ಮನಾಭ ನಿಧನ



ನಾಪೋಕ್ಲು: ಮೂಲತಃ ಅರವತ್ತೊಕ್ಲು ಗ್ರಾಮದ ಹೊಸಪಟ್ಟಣ ನಿವಾಸಿ ದಿ. ತುಂತಜಿರ ಶಿವಯ್ಯ ಅವರ ಮಗ ಕುಶಾಲನಗರ ಗೌಡ ಸಮಾಜದ ಮ್ಯಾನೇಜರ್ ಆಗಿದ್ದ ಪದ್ಮನಾಭ (ಗಿರಿ 56) ಅನಾರೋಗ್ಯದಿಂದ ಮಂಗಳವಾರ ನಿಧನರಾದರು. ಮೃತರು ಪತ್ನಿ, ಪುತ್ರ, ಹಾಗೂ ಪುತ್ರಿಯನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಸ್ವಗ್ರಾಮ ಹೊಸಪಟ್ಟಣದಲ್ಲಿ ಬುಧವಾರ ನಡೆಯಲಿದೆ.

ಹಳೆಯ ಮರ ಬಿದ್ದು ಸುಗಮ ಸಂಚಾರಕ್ಕೆ ಅಡ್ಡಿ



ನಾಪೋಕ್ಲು, ಮೇ 12– ಸಮೀಪದ ಬೊಮ್ಮಂಜಿಕೇರಿಯಲ್ಲಿ ಸೋಮವಾರ ರಾತ್ರಿ ಮರ ಬಿದ್ದು ರಸ್ತೆ ಸಂಪರ್ಕ ಸ್ಥಗಿತಗೊಂಡು ಸಮಸ್ಯೆ ಎದುರಾಗಿದೆ. ಈಸ್ಟ್ ಕೊಳಕೇರಿ ಬೊಮ್ಮಂಜಿಕೇರಿಯ ಮಾನಿವಾಡೆ ಮುಂದಿನ ಐತಿಹಾಸಿಕ ಮಂದ್ ಮರ ಬುಡ ಸಮೇತ ಬಿದ್ದು ಸಮಸ್ಯೆ ಎದುರಾಗಿದೆ . ಈ ಮರವು ನೂರಾರು ವರ್ಷ ಹಳೆಯ ಅತಿ ದೊಡ್ಡ ಮಂದ್ ಮರವಾಗಿತ್ತು. ಮರ ಬಿದ್ದ ರಭಸಕ್ಕೆ ವಿದ್ಯುತ್ ಕಂಬ ಮುರಿದು ಬಿದ್ದು, ಸುತ್ತಮುತ್ತಲಿನ ಮನೆಗಳಿಗೆ ವಿದ್ಯುತ್ ಸಂಪರ್ಕ ಕಡಿತಗೊಂಡಿದ್ದಲ್ಲದೆ. ಬೊಮ್ಮಂಜಿಕೇರಿ–ಕೋಟೇರಿ ರಸ್ತೆ ಸಂಪರ್ಕ ಕಡಿತಗೊಂಡಿದ್ದು ವಾಹನ ಸಂಚಾರಕ್ಕೆ ಅಡಚಣೆ ಉಂಟಾಗಿದೆ.

ಬಿಜೆಪಿಯೇ ನಿಜವಾದ ಮಹಿಳಾ ಮೀಸಲಾತಿ ವಿರೋಧಿ

ಚಾಮರಾಜನಗರ, ಮೇ 12–ಬಿಜೆಪಿ ನಿಜವಾದ ಮಹಿಳಾ ಮೀಸಲಾತಿ ವಿರೋಧಿ ಎಂದು ಕೆಪಿಸಿಸಿ ಪ್ರಚಾರ ಸಮಿತಿ ರಾಜ್ಯ ಉಪಾಧ್ಯಕ್ಷ ಎಸ್. ನಾರಾಯಣ್ ಆರೋಪಿಸಿದರು.



ಕೆಪಿಸಿಸಿ ಪ್ರಚಾರ ಸಮಿತಿ ರಾಜ್ಯ ಉಪಾಧ್ಯಕ್ಷ ಎಸ್.ನಾರಾಯಣ್ ಬ್ಲಾಕ್ ಸಮಿತಿ ಪದಾಧಿಕಾರಿಗಳಿಗೆ ನೇಮಕಾತಿ ಆದೇಶಪತ್ರ ವಿತರಿಸಿದರು

ನಗರದ ಸತ್ತಿರಸ್ತೆಯಲ್ಲಿರುವ ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ನಡೆದ ಜಿಲ್ಲಾ ಕಾರ್ಯಕಾರಿಣಿ ಸಭೆ, ಬ್ಲಾಕ್ ಸಮಿತಿ ಪದಾಧಿಕಾರಿಗಳಿಗೆ ನೇಮಕಾತಿ ಪತ್ರ ವಿತರಿಸಿ ಮಾತನಾಡಿದ ಅವರು, ದೇಶಕ್ಕಾಗಿ ಸ್ವಾತಂತ್ರ್ಯ ತಂದುಕೊಟ್ಟದ್ದು ಕಾಂಗ್ರೆಸ್, ಸ್ವಾತಂತ್ರ್ಯ ಪೂರ್ವದಿಂದಲೂ ಮಹಿಳಾ ಮೀಸಲಾತಿ ಪರವಾಗಿದೆ ಹೊರತು ವಿರೋಧ ಮಾಡುತ್ತಿಲ್ಲ. ಕೂಡಲೇ ಮಹಿಳಾ ಮೀಸಲಾತಿ ಜಾರಿ ಮಾಡ ಬೇಕು ಎಂದು ಒತ್ತಾಯಿಸಿದರು.

ಸೇನಾನಿಗಳಂತೆ ಕೆಲಸ ಮಾಡಿ : ಕಾಂಗ್ರೆಸ್ ಪ್ರಚಾರ ಸಮಿತಿ ಬಲಿಷ್ಠವಾಗಿದಷ್ಟು ಪಕ್ಷ ಸದೃಢವಾಗಿರುತ್ತದೆ. ಯುದ್ಧದ ಸೇನಾನಿಗಳ ತರ ಕೆಲಸ ಮಾಡುವುದು ಕಾಂಗ್ರೆಸ್ ಪ್ರಚಾರ ಸಮಿತಿ ಕೆಲಸ. ಪ್ರಚಾರ ಸಮಿತಿ ಎಂದರೆ ನೇಮಕಾತಿ ಆದೇಶ ಪಡೆದು, ವಿಸಿಟಿಂಗ್ ಕಾರ್ಡ್ ಮಾಡಿಸಿಕೊಂಡು, ಕಾರ್‌ಗೆ ನಾಮಫಲಕ ಹಾಕಿಕೊಳ್ಳುವುದು ಅಲ್ಲ. ಯುದ್ಧದ ಸೇನಾನಿಗಳ ತರ ಕೆಲಸ ಮಾಡುವುದು ಪ್ರಚಾರ ಸಮಿತಿಯ ಉದ್ದೇಶವಾಗಿದೆ. ಎಂದರು.

ಕಾಂಗ್ರೆಸ್ ಪಕ್ಷದಿಂದ ಸಾಮಾಜಿಕ ನ್ಯಾಯ: ಶಾಸಕ ಎ.ಆರ್.ಕೃಷ್ಣಮೂರ್ತಿ ಮಾತನಾಡಿ, ಕಾಂಗ್ರೆಸ್ ಪಕ್ಷವು ಎಲ್ಲ ವರ್ಗ, ಧರ್ಮಗಳಿಗೆ ಸಾಮಾಜಿಕ ನ್ಯಾಯ ಕೊಡುತ್ತದೆ. ಕಾಂಗ್ರೆಸ್ ಪ್ರಚಾರ ಸಮಿತಿಯ 23 ಮಂದಿಗೆ ನೇಮಕಾತಿ ಆದೇಶಪತ್ರ ವಿತರಿಸಲಾಗಿದೆ. ಮುಂದಿನ ದಿನಗಳಲ್ಲಿ ಕೊಳ್ಳೇ ಗಾಲ ಕ್ಷೇತ್ರದಲ್ಲೂ ಎಲ್ಲ ರೀತಿಯ ಸಹಕಾರ ಕೊಡುವುದಾಗಿ ತಿಳಿಸಿದರು.

ಚೂಡಾ ಅಧ್ಯಕ್ಷ ಪಿ.ಮರಿಸ್ವಾಮಿ, ಜಿಲ್ಲಾ ಕಾಂಗ್ರೆಸ್ ಪ್ರಚಾರ ಸಮಿತಿ ಅಧ್ಯಕ್ಷ ಮಧುಸೂದನ್ ಮಾತನಾಡಿದರು.

ಸಭೆಯಲ್ಲಿ ಕಾಂಗ್ರೆಸ್ ಪ್ರಚಾರ ಸಮಿತಿಯ ಜಿಲ್ಲಾ ಉಪಾಧ್ಯಕ್ಷ, ಸೈಯದ್ ನಜುರುಲ್ಲಾ, ಆರ್.ಸಿದ್ದರಾಜು, ಇರಸವಾಡಿ ಅಶೋಕ ಕುಮಾರ್, ಹೆಗ್ಗವಾಡಿ ಕೆಂಪರಾಜು, ಕೆರೆಹಳ್ಳಿ, ರವಿಕುಮಾರ್, ರಾಜಕುಮಾರ, ಗುಂಡ್ಲುಪೇಟೆ ಶಾನೀಜಾ ಮುದ್ದೀನ್, ಆರ್.ಡಿ.ಉಲ್ಲಾಸ್, ವಿ.ಶಿವಕುಮಾರ್, ಕಲಾವತಿ, ಬ್ಲಾಕ್ ಅಧ್ಯಕ್ಷ ರವಿ ಬಿಸಲವಾಡಿ, ಅಪ್ಸರ್ ಅಹಮದ್, ಡಿ.ಕೆ.ಶಿವಕುಮಾರ್, ಮನೋಹರ್, ಕೋಟೆಕೆರೆ ಶಂಕರನಾಯಕ, ಪ್ರಸಾದ್, ಸೋಮಳ್ಳಿ ಮುರುಳಿ ಸೇರಿದಂತೆ ಇತರರು ಭಾಗವಹಿಸಿದ್ದರು.

ಗರ್ಭಿಣಿ ಸಾವು; ಜಿಲ್ಲಾ ಆಸ್ಪತ್ರೆ ಮುಂದೆ ಪ್ರತಿಭಟನೆ

ಚಾಮರಾಜನಗರ, ಮೇ 12–ವೈದ್ಯರ ನಿರ್ಲಕ್ಷ್ಯದಿಂದ ಗರ್ಭಿಣಿ ಮಹಿಳೆಯೊಬ್ಬರು ಮೃತಪಟ್ಟಿದ್ದಾರೆ ಎಂದು ಆರೋಪಿಸಿ ನಗರದ ಜಿಲ್ಲಾಸ್ಪತ್ರೆಯ ಮುಂಭಾಗ ಮೃತ ಗರ್ಭಿಣಿ ಮಹಿಳೆಯ ಕುಟುಂಬಸ್ಥರು ಹಾಗೂ ವಿವಿಧ ಸಂಘಟನೆಗಳ ಪದಾಧಿಕಾರಿಗಳು ಪ್ರತಿಭಟನೆ ನಡೆಸಿದರು.



ಜಿಲ್ಲಾಸ್ಪತ್ರೆ ಮುಂಭಾಗ ಜಮಾಯಿಸಿದ ಪ್ರತಿಭಟನಾಕಾರರು ವೈದ್ಯರ ವಿರುದ್ಧ ಘೋಷಣೆಗಳನ್ನು ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ನಗರದ ಬಿ. ರಾಚಯ್ಯ ಜೋಡಿ ರಸ್ತೆಯಲ್ಲಿರುವ ಸರ್ಕಾರಿ ತಾಯಿ ಮತ್ತು ಮಕ್ಕಳ ಜಿಲ್ಲಾಸ್ಪತ್ರೆ ಮುಂಭಾಗ ಜಮಾಯಿಸಿದ ಪ್ರತಿಭಟನಾಕಾರರು ವೈದ್ಯರ ವಿರುದ್ಧ ಘೋಷಣೆಗಳನ್ನು ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಬಿಎಸ್‌ಪಿ ಪಕ್ಷದ ಮುಖಂಡ ಹ.ರಾ.ಮಹೇಶ್ ಮಾತನಾಡಿ, ತಾಲೂಕಿನ ಅರಳೀಪುರ ಗ್ರಾಮದ ಲೀಲಾವತಿ ಹಾಗೂ ಪರಶಿವ ಅವರ ಪುತ್ರಿ ಹಾಗೂ ನಂಜರಾಜಪುರ (ಅಗ್ರಹಾರ) ಗ್ರಾಮದ ಸುರೇಶ್ ಅವರ ಪತ್ನಿ ರೂಪಾ ಕಳೆದ 9 ತಿಂಗಳಿಂದ ಸ್ತ್ರೀರೋಗ ತಜ್ಞೆ ಡಾ. ಭಾರತಿ ಅವರ ಬಳಿ ಚಿಕಿತ್ಸೆ ಪಡೆಯುತ್ತಿದ್ದರು. ಈ ವೇಳೆ ಮೇ 3ರಂದು ಹೆರಿಗೆ ನೋವು ಕಾಣಿಸಿಕೊಂಡ ಹಿನ್ನೆಲೆಯಲ್ಲಿ ಸರ್ಕಾರಿ ಜಿಲ್ಲಾಸ್ಪತ್ರೆಗೆ ದಾಖಲಿಸಲಾಗಿತ್ತು. ಈ ವೇಳೆ ಡಾ. ಭಾರತಿ ಆಸ್ಪತ್ರೆಗೆ ಬಂದು ನೋಡುತ್ತೇನೆ ಎಂದು ಹೇಳಿ ಮೇ 4 ಮತ್ತು 5ರಂದು ಆಸ್ಪತ್ರೆಗೆ ಭೇಟಿ ನೀಡದೆ ನಿರ್ಲಕ್ಷ್ಯ ವಹಿಸಿದ್ದಾರೆ ಎಂದು ದೂರಿದರು.

ಮೇ 6ರಂದು ಹೆರಿಗೆ ನೋವು ಹೆಚ್ಚಾದ ಹಿನ್ನೆಲೆ ರೂಪ ಅವರನ್ನು ಹೆರಿಗೆ ಕೊಠಡಿಗೆ ಕರೆದೊಯ್ಯಲಾಗಿತ್ತು. ಈ ವೇಳೆ ಡಾ.ಕೌಶಲ್ಯ ಅವರು 5 ಸಾವಿರ ರೂ. ಹಣಕ್ಕೆ ಬೇಡಿಕೆ ಇಟ್ಟಿದ್ದು, ಹಣ ನೀಡದ ಹಿನ್ನೆಲೆಯಲ್ಲಿ ಅಸಭ್ಯವಾಗಿ ವರ್ತಿಸಿ ಮಾನಸಿಕ ಹಾಗೂ ದೈಹಿಕವಾಗಿ ಕಿರುಕುಳ ನೀಡಿದ್ದಲ್ಲದೆ, ಹೆರಿಗೆ ವೇಳೆ ವೈದ್ಯರು ರೂಪ ಅವರ ಹೊಟ್ಟೆ ಮೇಲೆ ಬಲವಾಗಿ ಒತ್ತಿದ ತಕ್ಷಣ ಮಗು ಜನಿಸಿದರೂ, ರೂಪ ಪ್ರಜ್ಞೆ ತಪ್ಪಿ ಬಿದ್ದಿದ್ದಾಳೆ. ಬಳಿಕ ಐಸಿಯುಗೆ ದಾಖಲಿಸಿ ಚಿಕಿತ್ಸೆ ನೀಡುತ್ತಿರುವಂತೆ ತೋರಿಸಲಾಗಿದ್ದು, ಸಂಜೆ ವೇಳೆಗೆ ಮೈಸೂರಿನ ಕಾವೇರಿ ಆಸ್ಪತ್ರೆಗೆ ಕರೆದೊಯ್ಯಲಾಗಿತ್ತು. ಆದರೆ ಅಲ್ಲಿನ ವೈದ್ಯರು ರೂಪ ನಾಲ್ಕು ಗಂಟೆಗಳ ಹಿಂದೆಯೇ ಮೃತಪಟ್ಟಿರುವುದಾಗಿ ತಿಳಿಸಿದ್ದಾರೆ ಎಂದು ಆರೋಪಿಸಿ, ಅವರ ಸಾವಿಗೆ ಕಾರಣರಾದ ವೈದ್ಯರ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಂಡು, ನ್ಯಾಯ ಒದಗಿಸಬೇಕು ಎಂದು ಆಗ್ರಹಿಸಿ, ಪ್ರತಿಭಟನಾ ಸ್ಥಳಕ್ಕೆ ಸಿಮ್ಸ್ ಡೀನ್, ಡಿಎಚ್‌ಒ, ಜಿಲ್ಲಾಧಿಕಾರಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಆಗಮಿಸಬೇಕು ಎಂದು ಪ್ರತಿಭಟನಾಕಾರರು ಪಟ್ಟುಹಿಡಿದರು.

ಜಿಲ್ಲಾಧಿಕಾರಿ ಭೇಟಿ: ಪ್ರತಿಭಟನಾ ಸ್ಥಳಕ್ಕೆ ಜಿಲ್ಲಾಧಿಕಾರಿ ಶ್ರೀರೂಪಾ ಭೇಟಿ ನೀಡಿ, ಅಹವಾಲು ಸ್ವೀಕರಿಸಿದರು. ಈ ಬಗ್ಗೆ ಮೇಲಾಧಿಕಾರಿಗಳೊಂದಿಗೆ ಚರ್ಚಿಸಿ ಕ್ರಮವಹಿಸಲಾಗುವುದು ಎಂದರು. ಪ್ರತಿಭಟನೆಯಲ್ಲಿ ಬಿಎಸ್‌ಪಿ ಪಕ್ಷದ ನಾಗಯ್ಯ, ಬಸವಣ್ಣ ಬ್ಯಾಡಮೂಡ್ಲು, ಎಸ್‌ಡಿಪಿಐ ಪಕ್ಷದ ಅಬ್ರಾರ್ ಅಹಮ್ಮದ್, ಸೈಯದ್ ಆರೀಫ್, ಕಲೀಲ್‌ವುಲ್ಲಾ, ಮಹೇಶ್, ರೈತ ಸಂಘದ ಹೆಬ್ಬಸೂರು ಬಸವಣ್ಣ, ವಿವಿಧ ಸಂಘಟನೆಗಳ ಮುಖಂಡರಾದ ವಾಸು ಹೊಂಡರಬಾಳು, ಬಾಬು ರಾಮಸಮುದ್ರ, ಬೆಳ್ಳಿಯಪ್ಪ, ಮಹದೇವಸ್ವಾಮಿ, ಶಿವಶಂಕರ್ ಚೆಟ್ಟು, ಮೃತಳ ತಾಯಿ ಲೀಲಾವತಿ, ಪತಿ ಸುರೇಶ್ ಇತರರು ಭಾಗವಹಿಸಿದ್ದರು.

ನಗರಸಭೆಯಲ್ಲಿ ನ್ಯೂನತೆ ಬಗ್ಗೆ ತನಿಖೆಗೆ ಮೂವರು ಅಧಿಕಾರಿಗಳ ತಂಡ ರಚನೆ

ಜಿಲ್ಲಾಧಿಕಾರಿ ಶ್ರೀರೂಪ ಘೋಷಣೆ

ಕೊಳ್ಳೇಗಾಲ, ಮೇ 12–ಕೊಳ್ಳೇಗಾಲ ನಗರಸಭೆಯಲ್ಲಿ ನ್ಯೂನ್ಯತೆ, ಸಾರ್ವಜನಿಕರಿಗೆ ಕೆಲಸ ಕಾರ್ಯ ಆಗದ ಹಿನ್ನೆಲೆ ಸಾಕಷ್ಟು ದೂರಿನ ಸಂಬಂಧ ತನಿಖೆಗಾಗಿ ಮೂವರು ಅಧಿಕಾರಿಗಳ ತಂಡವನ್ನು ನೇಮಿಸುವುದಾಗಿ ಜಿಲ್ಲಾಧಿಕಾರಿ ರೂಪ ಹೇಳಿದ್ದಾರೆ.



ಜಿಲ್ಲಾಧಿಕಾರಿ ಶ್ರೀರೂಪ ಅವರಲ್ಲಿ ಸಮಸ್ಯೆ ಹೇಳಿಕೊಳ್ಳಲು ಸಾರ್ವಜನಿಕರು ಮುಗಿಬಿದ್ದಿರುವುದು.

ಈತಿಂಗಳ ಅಂತ್ಯದಲ್ಲೇ ವರದಿ ಸಲ್ಲಿಸುವಂತೆ ಅಧಿಕಾರಿಗಳಿಗೆ ಸೂಚಿಸಲಾಗುವುದು ನಗರಸಭೆ ಅಧಿಕಾರಿಗಳು ಕರ್ತವ್ಯ ಲೋಪವೆಸಗಿರುವುದು ವರದಿಯಲ್ಲಿ ದೃಢಪಟ್ಟರೆ ಅಂಥ ಅಧಿಕಾರಿ ವಿರುದ್ಧ ಶಿಸ್ತು ಕ್ರಮಕೈಗೊಳ್ಳಲಾಗುವುದೆಂದು ತಿಳಿಸಿದರು.

ನಗರಸಭೆಗೆ ಭೇಟಿ ನೀಡಿ ಸಾರ್ವಜನಿಕರ ಅಹವಾಲು ಸ್ವೀಕರಿಸಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿ, ಇಲ್ಲಿನ ಅಧಿಕಾರಿಗಳಿಂದ ನ್ಯೂನ್ಯತೆಯಾಗಿದ್ದರೆ ವಿಚಾರಣೆ ನಡೆಸಲಾಗುವುದು. ಇ ಸ್ವತ್ತು ತಿದ್ದುಪಡಿ ವಿಚಾರದಲ್ಲಿ ತಂತ್ರಾಂಶದ ಲೋಪವಿದ್ದು ಇದನ್ನು ಪರಿಶೀಲಿಸಲಾಗುತ್ತಿದೆ. ಇಲ್ಲಿನ ನ್ಯೂನ್ಯತೆ ಕುರಿತು ಕಂದಾಯ ಇಲಾಖೆಯ ಎಸಿ, ನಗರಾಬಿವೃದ್ಧಿ ಕೋಶದ ಅಧಿಕಾರಿ, ಕಂದಾಯ ಇಲಾಖೆಯ ಅಧಿಕಾರಿ ಸೇರಿದಂತೆ ಮೂವರಿಂದ ತನಿಖೆ ನಡೆಸಿ ಈ ತಿಂಗಳಲ್ಲಿ ವರದಿ ಪಡೆದು ಮುಂದಿನ ಕ್ರಮ ಜರುಗಿಲಾಗುತ್ತದೆ ಎಂದರು

ನಗರಸಭೆ ಮಾಜಿ ಅಧ್ಯಕ್ಷೆ ರೇಖಾ ರಮೇಶ್, ಬಸ್ತಿಪುರ ಶಾಂತರಾಜು, ಉಪಾಧ್ಯಕ್ಷ ಎ.ಪಿ.ಶಂಕರ್, ಮಾಜಿ ಸದಸ್ಯ ಮಂಜುನಾಥ್, ಮಧು ರೈತ ಮುಖಂಡ ರಾಮಕೃಷ್ಣ, ಶ್ರೀನಿವಾಸ್ ಇನ್ನಿತರಿದ್ದರು

ಸಮಸ್ಯೆ ಹೇಳಿಕೊಳ್ಳಲು ಮುಗಿಬಿದ್ದರು: ನಗರಸಭೆಗೆ ಆಗಮಿಸಿದ ಜಿಲ್ಲಾಧಿಕಾರಿ ಶ್ರೀರೂಪ ಅವರನ್ನು ನೂರಾರು ಮಂದಿ ನಾಗರೀಕರು ಸುತ್ತುವರಿದು ತಮ್ಮ ತಮ್ಮ ಸಮಸ್ಯೆ ಹೇಳಿಕೊಳ್ಳಲು ಮುಗಿಬಿದ್ದ ಪ್ರಸಂಗ ಎದುರಾಯಿತು. ಜಿಲ್ಲಾಧಿಕಾರಿಗಳು ನಗರಸಭೆಗೆ ಬಂದಿದ್ದಾರೆ ಎಂಬ ವಿಚಾರ ತಿಳಿಯುತ್ತಿದ್ದಂತೆ ನೂರಾರು ಮಂದಿ ಸಾರ್ವಜನಿಕರು, ಸಂಘಟನೆಗಳ ಮುಖಂಡರು, ಆಗಮಿಸಿ ಇಲ್ಲಿನ ಆಯುಕ್ತರಿಂದ ಸಾರ್ವಜನಿಕ ಕೆಲಸ ಕಾರ್ಯಗಳಿಗೆ ಸ್ಪಂದನೆ ಸಿಗುತ್ತಿಲ್ಲ, ನೂರೂರು ಬಾರಿ ನಗರಸಭೆಗೆ ಬಂದರೂ ಕೆಲಸ ಆಗುತ್ತಿಲ್ಲ ಎಂಬಿತ್ಯಾದಿಯಾಗಿ ತಮ್ಮ ತಮ್ಮ ಸಮಸ್ಯೆಗಳ ಸರಮಾಲೆಯನ್ನೇ ಜಿಲ್ಲಾಧಿಕಾರಿಗಳ ಮುಂದೆ ತೆರೆದಿಟ್ಟ ಪ್ರಸಂಗ ಕಂಡು ಬಂತು

ನಗರಸಭೆ ಮಾಜಿ ಸದಸ್ಯೆ ಶ್ರೀಮತಿ ಜಯಮರಿ ಮಾತನಾಡಿ, ಸಕಾಲದಲ್ಲಿ ಅರ್ಜಿ ತೆಗೆದುಕೊಳ್ಳುವ ಹೊಣೆ ಇಲ್ಲಿತನಕ ಯಾವ ನೌಕರರುಗಳಿಗೆ ನೀಡಿಲ್ಲ, ಅಭಿವೃದ್ಧಿ ಕಾಣದ ಬಡಾವಣೆಯೊಂದಕ್ಕೆ ನಿಯಮ ಮೀರಿ ಪೌರಾಯುಕ್ತರು ಪರಿಶೀಲಿಸದೆ ಇಸ್ವತ್ತು ನೀಡಿ ಲೋಪ ಎಸಗಿದ್ದಾರೆ. ಹಿಂದಿನ ಪೌರಾಯುಕ್ತ ನಾಗಶೆಟ್ಟಿ ಅಕ್ರಮ ಇಸ್ವತ್ತುಗಳನ್ನು ನೀಡಿ ವಿವಾದಕ್ಕಿಡಾಗಿದ್ದರು. ಈ ಪ್ರಕರಣದಲ್ಲಿ ತಕರಾರು ಅರ್ಜಿ ಸಲ್ಲಿಸಿದ್ದರೂ ಸಹಾ ನಿಯಮ ಮೀರಿ ಅವುಗಳಿಗೆ ಇಲ್ಲಿ ಇ ಸ್ವತ್ತು ನೀಡಲಾಗಿದೆ, ಕೆಲಸವೆ ಗೊತ್ತಿಲ್ಲದ ಡಿ ಗ್ರೂಪ್ ನೌಕರರಿಗೆ ನಿಯಮ ಉಲ್ಲಂಘಿಸಿ ಹೆಚ್ಚುವರಿ ಹೊಣೆ ನೀಡಲಾಗಿದೆ. ಕೆಲಸ ಗೊತ್ತಿದ್ದವರನ್ನು ಮೂಲೆಗೆ ಕೂರಿಸಲಾಗಿದೆ. ಇದರಿಂದ ಕೆಲಸ ಕಾರ್ಯಗಳು ವಿಳಂಬವಾಗುತ್ತಿವೆ, ಈ ಕುರಿತು ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ದೂರಿದರು.

ಸುವರ್ಣ ಮಹೋತ್ಸವದ ಭಿತ್ತಿಪತ್ರ ಬಿಡುಗಡೆ

ಗುಂಡ್ಲುಪೇಟೆ, ಮೇ 12(ಎಸ್‌ಜಿ)–ಹಳೆಯ ವಿದ್ಯಾರ್ಥಿಗಳು ತಮ್ಮ ಬಾಲ್ಯದ ನೆನಪುಗಳನ್ನು ಮೆಲುಕು ಹಾಕುವಂತೆ ಶಾಲೆಯ 50 ವರ್ಷಗಳ ಇತಿಹಾಸವನ್ನು ಸ್ಮರಿಸುವ ಸುವರ್ಣ ಮಹೋತ್ಸವ ಕಾರ್ಯಕ್ರಮ ಮಾಡಿದೆ ಎಂದು ಅಕ್ಷರದಾಸೋಹ ಯೋಜನೆಯ ಸಹಾಯಕ ನಿರ್ದೇಶಕ ಕೆ.ಸಿ.ಸತೀಶ್ ಅಭಿಪ್ರಾಯಪಟ್ಟರು.



ಸುವರ್ಣ ಮಹೋತ್ಸವ ಕಾರ್ಯಕ್ರಮದ ಪೋಸ್ಟರ್ ಅನ್ನು ಬಿಡುಗಡೆ ಮಾಡಲಾಯಿತು.

ಪಟ್ಟಣದ ನಿರ್ಮಲ ಕಾನ್ವೆಂಟ್ ಶಾಲೆಯ ಸುವರ್ಣ ಮಹೋತ್ಸವದ ಅಂಗವಾಗಿ ಆಯೋಜಿಸಿದ್ದ ಸ್ನೇಹ ಸಮ್ಮಿಲನ ಕಾರ್ಯಕ್ರಮವನ್ನು ಉದ್ಘಾಟಿಸಿ, ಸದ್ಯ ನಾನಾ ಕಡೆಗಳಲ್ಲಿ ನೆಲೆಸಿರುವ ಹಳೆಯ ವಿದ್ಯಾರ್ಥಿಗಳು ಕಾರ್ಯಕ್ರಮಕ್ಕೆ ಹಾಜರಾಗಿ ತಮ್ಮ ಹಳೆಯ ಸಹಪಾಠಿಗಳನ್ನು ಭೇಟಿಮಾಡಿ ಬಾಲ್ಯದ ನೆನಪುಗಳನ್ನು ಮೆಲುಕು ಹಾಕುವ ಜತೆಗೆ ತಮಗೆ ವಿದ್ಯೆ ಕಲಿಸಿದ ಗುರುಗಳಿಗೆ ವಂದನೆ ಸಲ್ಲಿಸುವ ಮೂಲಕ ಮೌಲ್ಯಗಳನ್ನು ಅನುಸರಿಸಿದ ಬಗ್ಗೆ ಸತೀಶ್ ಅವರು ಮೆಚ್ಚುಗೆ ವ್ಯಕ್ತಪಡಿಸಿದರು.

ವಿವಿಧ ವರ್ಷಗಳ ಬ್ಯಾಚ್‌ಗಳ ಪರಿಚಯದ ನಂತರ ನಡೆದ ವೈವಿಧ್ಯಮಯ ಸಾಂಸ್ಕೃತಿಕ ಕಾರ್ಯಕ್ರಮಗಳು ಎಲ್ಲರ ಗಮನ ಸೆಳೆದವು. ಕಾರ್ಯಕ್ರಮದಲ್ಲಿ ಹಳೆಯ ವಿದ್ಯಾರ್ಥಿಗಳು ಮುಖ್ಯ ಶಿಕ್ಷಕರು ಹಾಗೂ ಹಿರಿಯ ಶಿಕ್ಷಕರಿಗೆ ಗುರುವಂದನೆ ಸಲ್ಲಿಸಿದರು. ಹಳೆಯ ವಿದ್ಯಾರ್ಥಿಗಳ ಬ್ಯಾಚ್‌ಗಳಿಂದ ಶಾಲೆಯ ಅಭಿವೃದ್ಧಿಗೆ ದೇಣಿಗೆ ಸಮರ್ಪಿಸಿದರು. ಇದೇ ಸಂದರ್ಭದಲ್ಲಿ ನಿರ್ಮಲ ಶಾಲೆಯ ಹಿರಿಯ ವಿದ್ಯಾರ್ಥಿಗಳ ಸಂಘ, ನಿರ್ಮಲ ರೂಟ್ಸ್ ಅಂಡ್ ವಿಂಗ್ಸ್ ಅನ್ನು ಅಧಿಕೃತವಾಗಿ ಉದ್ಘಾಟಿಸಲಾಯಿತು.

ಮುಖ್ಯ ಶಿಕ್ಷಕಿ ಸಿಸ್ಟರ್ ಆರೋಗ್ಯ ಮೇರಿ, ಸಿಸ್ಟರ್ ಕಾರ್ಮಿನ್ ಡಿಸೋಜಾ, ಸಹ ಶಿಕ್ಷಕಿಯರಾದ ಕ್ರಾಸ್ತಾ, ಲೀನಾ ಡಿಸೋಜಾ ಆರೋಗ್ಯ ಮೇರಿ, ಸಿಸ್ಟರ್ಸ್ ಮೋತಿ, ಫಿಲೋಮಿನಾ, ಸಂತೋಷ್, ಒಲಿವಿಯ, ರೀಟಾ, ಜುವಾನ ಶಿಕ್ಷಕರಾದ ವೆರೋನಿಕ, ನಿರ್ಮಲ ಆಂಜನೇಯ, ರುದ್ರಪ್ಪ, ಮಲ್ಲಪ್ಪ ಹಾಗೂ ಇತರರು ಇದ್ದರು.

ಸಮಸ್ಯೆ ಆಲಿಸಲು ಅಧಿಕಾರಿಗಳ ವಿಳಂಬ: ರೈತ ಸಂಘದಿಂದ ಪ್ರತಿಭಟನೆ

ಕೊಳ್ಳೇಗಾಲ: ಹಲವು ಹಕ್ಕೊತ್ತಾಯಗಳಿಗೆ ಸ್ಪಂದಿಸುವಂತೆ ಆಗ್ರಹಿಸಿ ರಾಜ್ಯ ರೈತ ಸಂಘದ ಕಾರ್ಯ ಕರ್ತರು ನಡೆಸುತ್ತಿದ್ದ ಪ್ರತಿಭಟನೆ ವೇಳೆ ಸಮಸ್ಯೆಯನ್ನು ಆಲಿಸಲು ಸಂಬಂಧಿಸಿದ ಯಾವುದೇ ಅಧಿಕಾರಿಗಳು ಸ್ಥಳಕ್ಕೆ ಆಗಮಿಸದ ಹಿನ್ನೆಲೆಯಲ್ಲಿ ಬೇಸತ್ತ ರೈತ ಮುಖಂಡರು ಆಕ್ರೋಶಗೊಂಡು ಕೆಲಕಾಲ ರಸ್ತೆ ತಡೆ ನಡೆಸಿದ ಪ್ರಸಂಗ ಜರುಗಿತು.

ಪಟ್ಟಣದ ಎಪಿಎಂಸಿ ಆವರಣದಿಂದ ತಾಲೂಕು ಕಚೇರಿಯವರೆಗೆ ತಮ್ಮ ಹಕ್ಕೊತ್ತಾಯಗಳನ್ನು ಈಡೇರಿಸುವಂತೆ ಆಗ್ರಹಿಸಿ ರೈತ ಮುಖಂಡರು ಮೆರವಣಿಗೆ ಮೂಲಕ ತಾಲೂಕು ಕಚೇರಿ ತಲುಪಿದರು. ಸಮಸ್ಯೆ ಆಲಿಸಲು ಸಂಬಂಧಿಸಿದ ಅಧಿಕಾರಿಗಳು ಬಾರದ ಹಿನ್ನೆಲೆ ಆಕ್ರೋಶಗೊಂಡು, ಗ್ರಾಮಾಂತರ ಪೊಲೀಸ್ ಠಾಣೆ ಮುಂಭಾಗದಲ್ಲೇ ಕೆಲಕಾಲ ರಸ್ತೆ ತಡೆ ನಡೆಸಿ ಅಧಿಕಾರಿಗಳ ಗಮನ ಸೆಳೆದರು.

ರಾಚಪ್ಪಾಜಿ ನಗರದಿಂದ ಕಾಡಂಚಿನವರೆಗೆ ಇರುವ ಜಮೀನುಗಳು ಅರಣ್ಯದಿಂದ ಬಿಡುಗಡೆಗೊಂಡಿದ್ದರೂ ಸಹ ಕಂದಾಯ ಇಲಾಖೆ 90ಮಂದಿಗೆ ಸಾಗುವಳಿ ಪತ್ರ ನೀಡಿಲ್ಲ, ಸಮರ್ಪಕ ರೀತಿ ವಿದ್ಯುತ್ ಪೂರೈಕೆ ಆಗುತ್ತಿಲ್ಲ, ರಸ್ತೆ, ಕಾಲುವೆಗಳು ದುರಸ್ಥಿಯಾಗಿಲ್ಲ, ಅತಿಕ್ರಮ ತೆರವಾಗಬೇಕು, ಬಂಡಿ ದಾರಿಗಳು ಅತಿಕ್ರಮವಾಗಿದ್ದು ಈ ನಿಟ್ಟಿನಲ್ಲಿ ತೆರವಿಗೆ ಕ್ರಮವಹಿಸಬೇಕು ಎಂಬಿತ್ಯಾದಿ ಬೇಡಿಕೆ ಈಡೇರಿಕೆಗೆ ಆಗ್ರಹಿಸಿದರು.

ಒಪ್ಪಂದ ಉಲ್ಲಂಘಿಸಿ 4.70 ಕೋಟಿ ದುರುಪಯೋಗ ಆರೋಪ ಪ್ರಕರಣ

ಚೈತ್ರಾ ಎಜುಕೇಷನ್ ಟ್ರಸ್ಟ್‌ನ ಗುರುರಾಜ್‌ಗೆ ಜಾಮೀನು ಮಂಜೂರು

ಮೈಸೂರು, ಮೇ 12– ಶಿಕ್ಷಣ ಸಂಬಂಧಿತ ಒಪ್ಪಂದ ಉಲ್ಲಂಘಿಸಿ ಕೋಟ್ಯಾಂತರ ರೂ. ಹಣ ದುರುಪಯೋಗಪಡಿಸಿಕೊಂಡಿರುವ ಆರೋಪದಡಿ ಬಂಧಿತರಾಗಿದ್ದ ಮೈಸೂರಿನ ಚೈತ್ರಾ ಎಜುಕೇಷನ್ ಟ್ರಸ್ಟ್‌ನ ಟ್ರಸ್ಟಿ ಎಸ್. ಗುರುರಾಜ್ ಅವರಿಗೆ ನ್ಯಾಯಾಲಯ ಷರತ್ತುಬದ್ಧ ಜಾಮೀನು ನೀಡಿದೆ.


ಗುರುರಾಜ್

ಮೈಸೂರಿನ ನಾಲ್ಕನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜೆಎಂಎಫ್‌ಸಿ ಸಿ.ಎನ್.ಚಂದನ್ ಅವರು ಮೇ 6ರಂದು ಜಾಮೀನು ಮಂಜೂರು ಮಾಡಿದ್ದು, 1 ಲಕ್ಷದ ಸೆಲ್ಫ್ ಬಾಂಡ್ ಜೊತೆಗೆ ಅಷ್ಟೇ ಮೊತ್ತದ ಎರಡು ಶ್ಯೂರಿಟಿ ಸಲ್ಲಿಸಲು ಸೂಚಿಸಿದ್ದಾರೆ. ಅಲ್ಲದೆ, ಬೆದರಿಕೆ ಮೂಲಕ ಯಾವುದೇ ಸಾಕ್ಷ್ಯಗಳನ್ನು ನಾಶಪಡಿಸುವಂತಿಲ್ಲ. ಜೊತೆಗೆ ಇನ್ನಿತರ ಯಾವುದೇ ಅಪರಾಧ ಕೃತ್ಯಗಳಲ್ಲಿ ಭಾಗಿಯಾಗುವಂತಿಲ್ಲ. ನ್ಯಾಯಾಲಯದ ಅನುಮತಿ ಇಲ್ಲದೆ ವಿದೇಶ ಪ್ರವಾಸ ಕೈಗೊಳ್ಳುವಂತಿಲ್ಲ. ಅನಿವಾರ್ಯವಾಗಿ ವಿಳಾಸ ಬದಲಿಸಿದರೆ ಆ ಬಗ್ಗೆ ತನಿಖಾಧಿಕಾರಿಗಳಿಗೆ ಮಾಹಿತಿ ನೀಡಬೇಕು. ಪ್ರಕರಣದ ಅಂತಿಮ ವರದಿ ಸಲ್ಲಿಸುವವರೆಗೂ 15 ದಿನಗಳಿಗೊಮ್ಮೆ ತನಿಖಾಧಿಕಾರಿ ಮುಂದೆ ಹಾಜರಾಗಬೇಕು ಎಂದು ಷರತ್ತು ವಿಧಿಸಲಾಗಿದೆ.

ಮೈಸೂರಿನ ಶ್ರೀರಾಂಪುರದ ಚೈತ್ರಾ ಪಬ್ಲಿಕ್ ಸ್ಕೂಲ್‌ನ ಚೈತ್ರಾ ಎಜುಕೇಷನ್ ಟ್ರಸ್ಟ್‌ನ ಟ್ರಸ್ಟಿ, ಶ್ರೀರಾಂಪುರ ಬೆಮೆಲ್ ನಗರದ ನಿವಾಸಿಯಾದ ಎಸ್.ಗುರುರಾಜ್, ಟ್ರಸ್ಟಿ ಬಿ.ವಿ.ಪುಷ್ಪಲತಾ ಹಾಗೂ ಚೈತ್ರಾ ಪಬ್ಲಿಕ್ ಸ್ಕೂಲ್ ಪ್ರಾಂಶುಪಾಲೆ ಬಿ.ಯು.ದೇಚಮ್ಮ ಅವರೊಂದಿಗೆ ಸೇರಿ 4.70 ಕೋಟಿ ರೂ. ದುರುಪಯೋಗ ಮಾಡಿಕೊಂಡಿರುವ ಆರೋಪದಡಿ ಕುವೆಂಪುನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು ಈ ಹಿನ್ನೆಲೆಯಲ್ಲಿ ಪ್ರಮುಖ ಆರೋಪಿ ಗುರುರಾಜ್ ಅವರನ್ನು ಪೊಲೀಸರು ಬಂಧಿಸಿದ್ದರು.

ಆಂಧ್ರ ಪ್ರದೇಶ ಮೂಲದ ಎನ್‌ಎಸ್‌ಪಿಐಆರ್‌ಎ ಮ್ಯಾನೇಜ್‌ಮೆಂಟ್ ಸರ್ವೀಸಸ್ ಪ್ರೈವೇಟ್ ಲಿಮಿಟೆಡ್ ಮತ್ತು ಚೈತ್ರಾ ಎಜುಕೇಷನ್ ಟ್ರಸ್ಟ್ ನಡುವೆ 2022ರ ಜೂ.15ರಂದು ಮಾಸ್ಟರ್ ಸರ್ವೀಸಸ್ ಸಂಬಂಧ ಒಪ್ಪಂದವಾಗಿದ್ದು, ಜಂಟಿ ಸಹಿ ನಿಯಂತ್ರಣದೊಂದಿಗೆ ಸಂಗ್ರಹ ಹಾಗೂ ಆದಾಯ ಖಾತೆ ನಿರ್ವಹಿಸಲಾಗುತ್ತಿತ್ತು. ಅದರಲ್ಲಿ ಶಾಲೆಯ ಎಲ್ಲಾ ಆದಾಯವನ್ನು ಜಮಾ ಮಾಡಲಾಗುತ್ತಿತ್ತು. ಆದರೆ, ಒಪ್ಪಂದ ಉಲ್ಲಂಘಿಸಿ ಎನ್‌ಎಸ್‌ಪಿಐಆರ್‌ಎನ ಅಧಿಕೃತ ಪ್ರತಿನಿಧಿ ಸೈಯದ್ ಮುದ್ದಸ್ಸಿರ್ ಅವರನ್ನು ಸಂಗ್ರಹ ಖಾತೆಯಿಂದ ಕೈಬಿಟ್ಟು ಆ ಜಾಗಕ್ಕೆ ಬಿ.ಯು.ದೇಚಮ್ಮ ಅವರನ್ನು ನೇಮಿಸಿಕೊಂಡು, ಹಣಕಾಸು ನಿಯಂತ್ರಣ ಕಾರ್ಯವಿಧಾನ ಅಸ್ಥಿರಗೊಳಿಸಿ, ಸದರಿ ಸಂಗ್ರಹ ಖಾತೆಯಿಂದ 4.70 ಕೋಟಿ ರೂ. ಅನ್ನು ಯಾವುದೇ ಅನುಮತಿ ಇಲ್ಲದೇ ವರ್ಗಾಯಿಸಿಕೊಂಡಿದ್ದಾರೆ ಎಂದು ಎನ್‌ಎಸ್‌ಪಿಐಆರ್‌ಎ ಸಂಸ್ಥೆಯ ಚೀಫ್ ರಿಸ್ಕ್ ಆಫೀಸರ್ ಆಂಜನೇಲು ನಿಡ್ಜೆಲ್ಲಿ, ಪೊಲೀಸರಿಗೆ ನೀಡಿರುವ ದೂರಿನಲ್ಲಿ ಆರೋಪಿಸಿದ್ದರು.

ಶುಶ್ರೂಷಕರ ಸೇವೆ ತಾಯಿಯ ಆರೈಕೆಯಂತೆ

● ಪ್ರಾದೇಶಿಕ ಆಯುಕ್ತ ನಿತೇಶ್ ಪಾಟೀಲ್ ಅಭಿಮತ ● ಎಲ್ಲಾ ಕಾಲದಲ್ಲೂ ಇವರೇ ಆರೋಗ್ಯ ಕ್ಷೇತ್ರದ ಬೆನ್ನೆಲುಬು

ಮೈಸೂರು, ಮೇ 12(ವಿವಿಹೆಚ್)– ಎಲ್ಲಾ ಕಾಲಘಟ್ಟದಲ್ಲಿಯೂ ಶುಶ್ರೂಷಕರು ಆರೋಗ್ಯ ಕ್ಷೇತ್ರದ ಬೆನ್ನೆಲುಬು ಎಂದು ಮೈಸೂರು ವಿಭಾಗದ ಪ್ರಾದೇಶಿಕ ಆಯುಕ್ತರಾದ ನಿತೇಶ್ ಪಾಟೀಲ್ ಅಭಿಪ್ರಾಯಪಟ್ಟರು.

ನಗರದ ಜೆಎಸ್‌ಎಸ್ ಆಸ್ಪತ್ರೆಯ ಶ್ರೀ ರಾಜೇಂದ್ರ ಶತಮಾನೋತ್ಸವ ಭವನದಲ್ಲಿ ಜೆಎಸ್‌ಎಸ್ ಮಹಾವಿದ್ಯಾಪೀಠ, ಜೆಎಸ್‌ಎಸ್ ಆಸ್ಪತ್ರೆ ಜೆಎಸ್‌ಎಸ್ ಕಾಲೇಜ್ ಆಫ್ ನರ್ಸಿಂಗ್, ಜೆಎಸ್‌ಎಸ್ ಸ್ಕೂಲ್ ಆಫ್ ನರ್ಸಿಂಗ್ ಸಹಯೋಗದಲ್ಲಿ ಮಂಗಳವಾರ ನಡೆದ ವಿಶ್ವ ಶುಶ್ರೂಷಕ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಪ್ರಾಮಾಣಿಕ ಸೇವೆ ಸಲ್ಲಿಸುವ ಶುಶ್ರೂಷಕರು ಆರೋಗ್ಯ ಕ್ಷೇತ್ರದಲ್ಲಿ ಬಹುಮುಖ್ಯ ಅಂಗವಾಗಿದ್ದಾರೆ. ಅವರಿಲ್ಲದ ಆರೋಗ್ಯ ಕ್ಷೇತ್ರವನ್ನು ಊಹಿಸುವುದು ಅಸಾಧ್ಯವಾಗಿದೆ. ಶುಶ್ರೂಷಕರು ವೈದ್ಯರು ಮತ್ತು ರೋಗಿಗಳ ನಡುವಣ ಕೊಂಡಿಯಾಗಿ ನಿಸ್ವಾರ್ಥ ಸೇವೆ ಮಾಡುತ್ತಾರೆ ಎಂದು ಬಣ್ಣಿಸಿದರು.

ಶುಶ್ರೂಷಕರು, ಕೋವಿಡ್ ವೇಳೆಯಲ್ಲಿ ಕೊರೋನಾ ರೋಗಿಗಳನ್ನು ಕಂಡರೆ ಮನೆ ಯುವರೂ ಕೂಡ ದೂರ ಸರಿಯುತ್ತಿದ್ದು. ಅಂತಹ ವಿಷಮ ಪರಿಸ್ಥಿತಿಯಲ್ಲಿ ರೋಗಿ ಗಳ ಆರೈಕೆಯಲ್ಲಿ ತಮ್ಮ ಜೀವವನ್ನೇ ಪಣ ಕ್ಕಿಟ್ಟು ಕೆಲಸ ಮಾಡಿ ಸಾರ್ಥಕತೆ ಮೆರೆದ ವರು. ಜೀವ ಭಯದಲ್ಲಿ ಕಾಲ ಕಳೆಯುತ್ತಿದ್ದ ವರಿಗೆ ಬದುಕಿನ ಭರವಸೆ ತಂದುಕೊಟ್ಟ ವರು ಶುಶ್ರೂಷಕರು ಎಂದು ತಿಳಿಸಿದರು.


ನಗರದ ಜೆಎಸ್‌ಎಸ್ ಆಸ್ಪತ್ರೆಯ ಶ್ರೀ ರಾಜೇಂದ್ರ ಶತಮಾನೋತ್ಸವ ಭವನದಲ್ಲಿ ನಡೆದ ವಿಶ್ವ ಶುಶ್ರೂಷಕ ದಿನಾಚರಣೆ ಕಾರ್ಯಕ್ರಮವನ್ನು ಮೈಸೂರು ವಿಭಾಗದ ಪ್ರಾದೇಶಿಕ ಆಯುಕ್ತರಾದ ನಿತೇಶ್ ಪಾಟೀಲ್ ಜ್ಯೋತಿ ಬೆಳಗಿಸುವ ಮೂಲಕ ಉದ್ಘಾಟಿಸಿದರು. ಜೆಎಸ್‌ಎಸ್ ಕಾರ್ಯನಿರ್ವಾಹಕ ಕಾರ್ಯದರ್ಶಿ ಸಿ.ಜಿ.ಬೆಟಸೂರಮಠ ಇತರರಿದ್ದಾರೆ.

ರೋಗಿಗೆ ವೈದ್ಯರು ನೀಡುವ ಚಿಕಿತ್ಸೆ ಎಷ್ಟು ಮುಖ್ಯವೋ, ಚಿಕಿತ್ಸೆ ನಂತರದ ಆರೈಕೆಯೂ ಅಷ್ಟೇ ಮುಖ್ಯ. ಇವರು ಕೇವಲ ಸೇವೆ ಮಾಡುವವರು ಮಾತ್ರವಲ್ಲ, ಮಾನವೀಯತೆಯ ರಕ್ಷಕರು ಆಗಿದ್ದಾರೆ. ಮಾನವನ ಹುಟ್ಟು, ಸಾವು, ಹುಟ್ಟಿದ ಮಗುವಿನ ಆರೈಕೆಯಿಂದ ಹಿಡಿದು, ವಯೋವೃದ್ಧರ ಸೇವೆವರೆಗೂ ಇವರ ಪಾತ್ರ ಬಹಳವಿದೆ. ಆದ್ದರಿಂದ ಇವರ ವೃತ್ತಿಯನ್ನು ಎಲ್ಲರೂ ಗೌರವಿಸುವ ಅಗತ್ಯವಿದೆ ಎಂದು ವಿವರಿಸಿದರು.

ಶುಶ್ರೂಷಕರ ಸೇವೆ ತಾಯಿಯ ಆರೈಕೆಯಂತಿರುತ್ತದೆ ರಾಜ್ಯದ ನಾನಾ ಭಾಗಗಳಲ್ಲಿಯೂ ಶುಶ್ರೂಷಕರ ಹುದ್ದೆಗಳು ಖಾಲಿಯಿವೆ ಎಂದರು.

ನರ್ಸಿಂಗ್ ವೃತ್ತಿಯು ಪ್ರಸ್ತುತ ಮತ್ತು ಭವಿಷ್ಯದಲ್ಲಿ ಅತ್ಯಂತ ಹೆಚ್ಚಿನ ಬೇಡಿಕೆ ಹೊಂದಿರುವ ಉದ್ಯೋಗಗಳಲ್ಲಿ ಒಂದಾಗಿದೆ. ಹೆಚ್ಚುತ್ತಿರುವ ಜನಸಂಖ್ಯೆ, ವಯಸ್ಸಾದವರ ಆರೈಕೆ ಮತ್ತು ಆರೋಗ್ಯ ರಕ್ಷಣಾ ಮೂಲಸೌಕರ್ಯಗಳ ವಿಸ್ತರಣೆಯಿಂದಾಗಿ ಈ ಕ್ಷೇತ್ರದಲ್ಲಿ ಉದ್ಯೋಗಾವಕಾಶಗಳು ಹೆಚ್ಚುತ್ತಿವೆ ಎಂದು ತಿಳಿಸಿದರು.

ನರ್ಸಿಂಗ್ ಓದಿದವರು ನಾಗರಿಕ ಸೇವಾ ಇಲಾಖೆಗಳಲ್ಲಿ ಉನ್ನತ ಹುದ್ದೆಯನ್ನು ಅಲಂಕರಿಸಿದ್ದಾರೆ. ಐಎಎಸ್, ಐಪಿಎಸ್ ಅಧಿಕಾರಿಗಳಾಗಿರುವ ಉದಾ ಹರಣೆಗಳು ನಮ್ಮ ಕಣ್ಣ ಮುಂದಿವೆ. ಇರುವ ಅವಕಾಶವ ಬಳಸಿಕೊಂಡು ಯಶಸ್ವಿಯಾಗಲು ಪ್ರಯತ್ನಿಸುವುದನ್ನು ವಿದ್ಯಾರ್ಥಿ ದೆಸೆಯಲ್ಲಿಯೇ ಕಲಿಯಬೇಕು ಎಂದು ಕಿವಿಮಾತು ಹೇಳಿದರು.

ಟ್ರಸ್ಟ್‌ನ ಮ್ಯಾನೇಜಿಂಗ್ ಟ್ರಸ್ಟಿ ಸುಧಾ ಮೃತ್ಯುಂಜಯಪ್ಪ ಮಾತನಾಡಿ, ಫ್ಲಾರೆನ್ಸ್ ನೈಟಿಂಗೇಲ್ ಅವರು ಮಾಡಿದ ಸೇವೆ ವಿಶ್ವಕ್ಕೆ ಮಾದರಿಯಾಗಿದೆ. ನರ್ಸಿಂಗ್ ಕ್ಷೇತ್ರಕ್ಕೆ ಸಾಕಷ್ಟು ಕೊಡುಗೆ ನೀಡಿದ್ದಾರೆ. ಅವರನ್ನು ನೆನೆಯುವ ಉದ್ದೇಶದಿಂದ ಅವರ ಜನ್ಮದಿನವನ್ನು ಶುಶ್ರೂಷಕರ ದಿನವನ್ನಾಗಿ ಆಚರಿಸುತ್ತಿದ್ದಾರೆ ಎಂದು ತಿಳಿಸಿದರು.

ಫ್ಲಾರೆನ್ಸ್ ನೈಟಿಂಗೇಲ್ ಅವರು ನರ್ಸಿಂಗ್ ಕ್ಷೇತ್ರಕ್ಕೆ ಸಾಕಷ್ಟು ಕೊಡುಗೆ ನೀಡಿದ್ದಾರೆ. ಶುಶ್ರೂಷಕರು ಅವರನ್ನು ಮಾದರಿಯಾಗಿಸಿಕೊಳ್ಳಬೇಕು. ಅವರಂತೆಯೇ ನಿಸ್ವಾರ್ಥ ಸೇವೆಯನ್ನು ಮಾಡುವಂತಾಗಬೇಕು ಎಂದರು.

ಇದೇ ಸಂದರ್ಭದಲ್ಲಿ ಉತ್ತಮ ಸೇವೆ ನೀಡಿದ ಶುಶ್ರೂಷಕರನ್ನು ಸನ್ಮಾನಿಸಲಾಯಿತು. ನಶಾ ಮುಕ್ತ ಭಾರತ ಮ್ಯಾರಾಥಾನ್‌ನಲ್ಲಿ ಭಾಗವಹಿಸಿ ಬಹುಮಾನ ಪಡೆದವರನ್ನು ಗೌರವಿಸಲಾಯಿತು.

ಜೆಎಸ್‌ಎಸ್ ಕಾರ್ಯನಿರ್ವಾಹಕ ಕಾರ್ಯದರ್ಶಿ ಸಿ.ಜಿ.ಬೆಟಸೂರಮಠ, ಜೆಎಸ್‌ಎಸ್ ಆಸ್ಪತ್ರೆ ನಿರ್ದೇಶಕ ಸಿ.ಪಿ. ಮಧು, ವೈದ್ಯಕೀಯ ಶಿಕ್ಷಣ ವಿಭಾಗದ ನಿರ್ದೇಶಕ ಆರ್.ಮಹೇಶ್, ಜೆಎಸ್‌ಎಸ್ ಆಸ್ಪತ್ರೆ ನರ್ಸಿಂಗ್ ಸೇವೆಗಳ ಮುಖ್ಯಸ್ಥೆ ಜಾನೆಟ್ ಮಥಿಯಾಸ್, ಸಹ ಪ್ರಾಧ್ಯಾಪಕಿ ಡಾ.ಪುರೋಹಿತ್ ಸರಸ್ವತಿ, ಜೆಎಸ್‌ಎಸ್ ಕಾಲೇಜ್ ಆಫ್ ನರ್ಸಿಂಗ್ ಪ್ರಾಂಶುಪಾಲೆ ಅಶ್ವತಿ ದೇವಿ, ಜೆಎಸ್‌ಎಸ್ ಸ್ಕೂಲ್ ಆಫ್ ನರ್ಸಿಂಗ್ ಪ್ರಾಂಶುಪಾಲೆ ರೇಣುಕಾ ದೇವಿ ಉಪಸ್ಥಿತರಿದ್ದರು.

10 ಲಕ್ಷ ಕೊಟ್ಟು ನೀಟ್ ಪ್ರಶ್ನೆ ಪತ್ರಿಕೆ ಖರೀದಿಸಿದ್ದ ವೈದ್ಯ ವಿದ್ಯಾರ್ಥಿ ಬಂಧನ

ನವದೆಹಲಿ, ಮೇ 12– 2026ರ ನೀಟ್– ಯುಜಿ ಪ್ರಶ್ನೆ ಪತ್ರಿಕೆ ಸೋರಿಕೆ ಹಗರಣದ ಕೇಂದ್ರಬಿಂದುವಾಗಿರುವ 'Guess Paper' ಅನ್ನು ಖರೀದಿಸಿದ ಆರೋಪದ ಮೇಲೆ ಮಹಾರಾಷ್ಟ್ರದ ನಾಸಿಕ್‌ನಲ್ಲಿ ಆಯುರ್ವೇದ ಔಷಧ ಮತ್ತು ಶಸ್ತ್ರಚಿಕಿತ್ಸೆಯ ಪದವಿ (ಬಿಎ ಎಂಎಸ್) ವಿದ್ಯಾರ್ಥಿಯನ್ನು ಬಂಧಿಸಲಾಗಿದೆ.

ಆರೋಪಿಯನ್ನು ಶುಭಂ ಖೈರ್ನರ್ ಎಂದು ಗುರುತಿಸಲಾಗಿದೆ. ಟೆಲಿಗ್ರಾಮ್ ಮೂಲಕ ಪ್ರಶ್ನೆ ಪತ್ರಿಕೆ ಖರೀದಿಸಿದ ಆತ, ಹರಿಯಾಣ ಮೂಲದ ವ್ಯಕ್ತಿಗಳಿಗೆ ಮಾರಾಟ ಮಾಡಿದ್ದಾನೆ ಎಂದು ಆರೋಪಿಸಲಾಗಿದೆ. ಖೈರ್ನರ್ ಅವರನ್ನು ನಾಸಿಕ್ ಅಪರಾಧ ವಿಭಾಗದ ಅಧಿಕಾರಿಗಳು ಬಂಧಿಸಿದ್ದಾರೆ.

ಪ್ರಶ್ನೆ ಪತ್ರಿಕೆ ಸೋರಿಕೆ ಪ್ರಕರಣದ ತನಿಖೆ ವಹಿಸಿಕೊಂಡಿರುವ ಕೇಂದ್ರ ತನಿಖಾ ದಳದ ನಾಲ್ಕು ತಂಡಗಳು ಖೈರ್ನರ್ ಅವರನ್ನು ವಶಕ್ಕೆ ಪಡೆಯಲು ನಾಸಿಕ್‌ಗೆ ಆಗಮಿಸಿವೆ ಎಂದು ಸುದ್ದಿ ಸಂಸ್ಥೆ ಎಎನ್‌ಐ ವರದಿ ಮಾಡಿದೆ.

ಈ ಬಂಧನವು ನಾಸಿಕ್ ಮುದ್ರಣಾಲಯದಿಂದ ಪ್ರಶ್ನೆ ಪತ್ರಿಕೆ ಸೋರಿಕೆಯಾಗಿದೆ ಎಂಬ ಅನುಮಾನಗಳಿಗೆ ಇಂಬು ನೀಡಿದೆ. ಆದರೆ, ಪ್ರಶ್ನೆ ಪತ್ರಿಕೆಯನ್ನು ಅಲ್ಲಿ ಮುದ್ರಿಸಲಾಗಿಲ್ಲ ಎಂದು ಪೊಲೀಸ್ ಮೂಲಗಳು ಹೇಳುತ್ತಿವೆ.

ಪದವಿಪೂರ್ವ ಮಟ್ಟದಲ್ಲಿ ವೈದ್ಯಕೀಯ ಶಿಕ್ಷಣ ಕೋರ್ಸ್‌ಗಳಿಗೆ ಪ್ರವೇಶ ಬಯಸುವ ವಿದ್ಯಾರ್ಥಿಗಳಿಗಾಗಿ ರಾಷ್ಟ್ರೀಯ ಪರೀಕ್ಷಾ ಸಂಸ್ಥೆ(ಎನ್‌ಟಿಎ) ಮೇ 3ರಂದು ರಾಷ್ಟ್ರೀಯ ಅರ್ಹತಾ ಮತ್ತು ಪ್ರವೇಶ ಪರೀಕ್ಷೆ (ನೀಟ್) ಅನ್ನು ನಡೆಸಿತ್ತು.

ಪರೀಕ್ಷೆ ನಡೆದು ಒಂದು ವಾರಕ್ಕೂ ಹೆಚ್ಚು ಸಮಯದ ನಂತರ ಮೇ 12ರಂದು, ಪ್ರಶ್ನೆ ಪತ್ರಿಕೆ ಸೋರಿಕೆ ಆರೋಪ ಕೇಳಿಬಂದ ಬಳಿಕ ಎನ್‌ಟಿಎ ಪರೀಕ್ಷೆಯನ್ನು ರದ್ದುಗೊಳಿಸಿದೆ.


ಸ್ಕೂಟರ್‌ಗೆ ಟ್ಯಾಂಕರ್ ಡಿಕ್ಕಿ ; ಮಹಿಳೆ ಸಾವು

ಮೈಸೂರು,ಮೇ 12(ಪಿಎಂ)– ಮೈಸೂರಿನ ಮೇಟಗಳ್ಳಿ ರಿಂಗ್ ರಸ್ತೆಯಲ್ಲಿ ಜಿಎಆರ್‌ಎಸ್ ಫ್ಯಾಂಟಸಿ ಪಾರ್ಕ್ ಸಮೀಪ ಮಂಗಳವಾರ ಬೆಳಗ್ಗೆ ಟ್ಯಾಂಕರ್ ಡಿಕ್ಕಿ ಹೊಡೆದ ಪರಿಣಾಮ ಸ್ಕೂಟರ್‌ನಿಂದ ಬಿದ್ದು ಗಾಯಗೊಂಡಿದ್ದ ಮಹಿಳೆಯೊಬ್ಬರು ಸಾವನ್ನಪ್ಪಿದ್ದಾರೆ. ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣ ತಾಲೂಕಿನ ಮೊಗರಹಳ್ಳಿಮಂಟಿ ಗ್ರಾಮದ ನಿವಾಸಿ ಎ.ಲಕ್ಷ್ಮೀದೇವಿ ಮೃತಪಟ್ಟ ಸ್ಕೂಟರ್ ಸವಾರರು.

ಮೈಸೂರಿನ ಬನ್ನಿಮಂಟಪದ ಗಾರ್ಮೆಂಟ್ಸ್‌ವೊಂದರಲ್ಲಿ ಕೆಲಸ ಮಾಡುತ್ತಿದ್ದ ಲಕ್ಷ್ಮೀದೇವಿ, ರಿಂಗ್ ರಸ್ತೆಯಲ್ಲಿ ಇಲ್ಲಿನ ಜಂಕ್ಷನ್ ಕಡೆಯಿಂದ ಸರ್ವೀಸ್ ರಸ್ತೆಗೆ ಸಂಪರ್ಕ ಪಡೆಯಲು ಸ್ಕೂಟರ್ ಅನ್ನು ತಿರುವು ಪಡೆದಿದ್ದು, ಇದೇ ವೇಳೆ ಅದೇ ದಿಕ್ಕಿನಲ್ಲಿ ಬಂದ ಟ್ಯಾಂಕರ್, ಲಕ್ಷ್ಮೀದೇವಿಯವರ ಸ್ಕೂಟರ್‌ಗೆ ಡಿಕ್ಕಿ ಹೊಡೆದಿದೆ. ಪರಿಣಾಮ ಕೆಳಗೆ ಬಿದ್ದು ಗಾಯಗೊಂಡಿದ್ದ ಅವರು ಚಿಕಿತ್ಸೆಗೆ ಸ್ಪಂದಿಸದೇ ಮೃತಪಟ್ಟಿದ್ದಾರೆ. ಈ ಸಂಬಂಧ ವಿವಿ ಪುರಂ ಸಂಚಾರ ಠಾಣೆಯಲ್ಲಿ ಟ್ಯಾಂಕರ್ ಚಾಲಕನ ವಿರುದ್ಧ ಪ್ರಕರಣ ದಾಖಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಎಲೆಕ್ಟ್ರಿಕ್ ಬೈಕ್ ಬ್ಯಾಟರಿ ಬ್ಲಾಸ್ಟ್; ವ್ಯಕ್ತಿ ಸಾವು

ಬೆಂಗಳೂರು, ಮೇ 12– ಎಲೆಕ್ಟ್ರಿಕಲ್ ಬೈಕ್ ಬ್ಯಾಟರಿ ಬ್ಲಾಸ್ಟ್ ಆಗಿ ವ್ಯಕ್ತಿ ಸಾವನ್ನಪ್ಪಿರುವ ಘಟನೆ ಹಲಸೂರು ಪೊಲೀಸ್ ಠಾಣಾ ವ್ಯಾಪ್ತಿಯ ಮರ್ಫಿ ಟೌನ್‌ನಲ್ಲಿ ನಡೆದಿದೆ.


ಲೂಥ್‌ನಾಥನ್

ಲೂಥ್ ನಾಥನ್ (62) ಮೃತ ವ್ಯಕ್ತಿ. ಮನೆಯಲ್ಲಿ ರಾತ್ರಿ ಬೈಕನ್ನು ಚಾರ್ಜ್‌ಗೆ ಹಾಕಿ, ವ್ಯಕ್ತಿ ಹಾಲ್‌ನಲ್ಲಿ ಮಲಗಿದ್ದ. ಈ ವೇಳೆ ಬ್ಯಾಟರಿ ಸ್ಫೋಟಗೊಂಡು ಮೃತಪಟ್ಟಿದ್ದಾನೆ.

ಮೃತ ವ್ಯಕ್ತಿ ಆಟೋ ಚಾಲಕನಾಗಿ ಕೆಲಸ ಮಾಡ್ತಿದ್ದರು. ಘಟನೆ ದಿನ ಮನೆಯ ಗ್ರೌಂಡ್ ಫ್ಲೋರ್‌ನಲ್ಲಿ ಒಬ್ಬರೇ ಮಲಗಿದ್ದರು. ಫಸ್ಟ್ ಫ್ಲೋರ್‌ನಲ್ಲಿ ಮಕ್ಕಳು ವಾಸವಾಗಿದ್ದರು. ಮುಂಜಾನೆ 3:15ರ ವೇಳೆ ಬ್ಯಾಟರಿ ಬ್ಲಾಸ್ಟ್ ಆಗಿದೆ.

ಎಲೆಕ್ಟ್ರಿಕ್ ಬೈಕನ್ನು ಚಾರ್ಜ್‌ಗೆ ಹಾಕಿ ಲೂಥ್ ನಾಥನ್ ಪಕ್ಕದಲ್ಲೇ ಮಲಗಿದ್ದರು. ಬ್ಲಾಸ್ಟ್ ಆಗಿ ಮನೆ ಸಂಪೂರ್ಣ ಸುಟ್ಟು ಕರಕಲಾಗಿದೆ. ಸುಟ್ಟ ಸ್ಥಿತಿಯಲ್ಲಿ ಮೃತದೇಹ ಪತ್ತೆಯಾಗಿದೆ. ಬ್ಯಾಟರಿ ಬ್ಲಾಸ್ಟ್ ಆದ ನಂತರ ಮನೆ ಸಂಪೂರ್ಣ ಹೊತ್ತಿ ಉರಿದಿದೆ. ಈ ಸಂಬಂಧ ಹಲಸೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಚಾಮುಂಡಿಬೆಟ್ಟದಲ್ಲಿ ಕಳೆದುಕೊಂಡ ಪದಾರ್ಥಗಳು ಕೆಲವೇ ಕ್ಷಣದಲ್ಲಿ ಮತ್ತೆ ಕೈ ಸೇರುತ್ತವೆ!

ಮೈಸೂರು, ಮೇ.12(ಜಿಎ)–ಚಾಮುಂಡಿಬೆಟ್ಟದಲ್ಲಿ ಭಕ್ತರು, ಪ್ರವಾಸಿಗರು ಕಳೆದುಕೊಂಡ ಹಣ, ಮೊಬೈಲ್ ಅನ್ನು ದೂರು ನೀಡಿದ ಕೆಲವೇ ನಿಮಿಷದಲ್ಲಿ ಪತ್ತೆ ಹಚ್ಚಿ ಪೊಲೀಸರು ಚಮತ್ಕಾರ ಮೆರೆಯುತ್ತಿದ್ದಾರೆ.! ಆ ಮೂಲಕ ಕಳೆದುಕೊಂಡವರಲ್ಲಿ ನಿರಾಳತೆ ತಂದಿದ್ದಾರೆ.

ಇತ್ತೀಚೆಗೆ ಬೆಟ್ಟದಲ್ಲಿ ಯಾತ್ರಿಕರು ಮೂರು ಪ್ರಕರಣಗಳಲ್ಲಿ ಕಳೆದುಕೊಂಡಿದ್ದ ನಗದು ಹಾಗೂ ಮೊಬೈಲ್ ಫೋನ್‌ಗಳನ್ನು ದೂರು ನೀಡಿದ ಕೆಲವು ನಿಮಿಷದಲ್ಲಿ ಪತ್ತೆ ಮಾಡಿ 35 ಸಾವಿರ ರೂ. ನಗದು ಹಾಗೂ ಒಂದು ಮೊಬೈಲ್ ಫೋನ್ ಪತ್ತೆ ಮಾಡಿ ವಾರಸುದಾರರಿಗೆ ಹಿಂದಿರುಗಿಸುವ ಮೂಲಕ ಪ್ರವಾಸಿಗರ ಮೊಗದಲ್ಲಿ ಮಂದಹಾಸ ತಂದಿದ್ದಾರೆ.

ಪ್ರತಿ ನಿತ್ಯವೂ ಸಾವಿರಾರು ಭಕ್ತರು, ಪ್ರವಾಸಿಗರು ಮೈಸೂರಿನ ಪ್ರಮುಖ ಪ್ರವಾಸಿ ತಾಣ, ಧಾರ್ಮಿಕ ಕೇಂದ್ರವೂ ಆದ ಚಾಮುಂಡಿಬೆಟ್ಟಕ್ಕೆ ಭೇಟಿ ನೀಡಿ ಚಾಮುಂಡೇಶ್ವರಿ ದರ್ಶನ ಪಡೆಯುತ್ತಾರೆ. ಈ ನಡುವೆ ಗಡಿಬಿಡಿಯಲ್ಲಿ ಕೆಲವರು ತಮ್ಮೊಂದಿಗೆ ತಂದಿದ್ದ ವಸ್ತುಗಳನ್ನು ದೇವಸ್ಥಾನದ ಆವರಣದಲ್ಲಿ ಮರೆಯುವುದು, ಕಳೆದುಕೊಳ್ಳುವುದು ಸಾಮಾನ್ಯವಾಗಿದೆ.

ಹೀಗೆ ತಮ್ಮ ವಸ್ತುಗಳನ್ನು ಕಳೆದುಕೊಂಡ ತಕ್ಷಣ ಬೆಟ್ಟದಲ್ಲಿರುವ ಪೊಲೀಸ್ ಠಾಣೆಗೆ ದೂರು ಸಲ್ಲಿಸುತ್ತಾರೆ. ಕೆಲವರು ಈ ರಶ್‌ನಲ್ಲಿ ನಮ್ಮ ವಸ್ತು ಸಿಗುವುದಿಲ್ಲ ಎಂದು ದೂರು ಸಲ್ಲಿಸುವುದಿಲ್ಲ. ಆದರೆ, ಇತ್ತೀಚೆಗೆ ಚಾಮುಂಡಿಬೆಟ್ಟಕ್ಕೆ ಭೇಟಿ ನೀಡುವ ಪ್ರವಾಸಿಗರು ಏನಾದರೂ ಸಮಸ್ಯೆ ಆದರೆ ತಕ್ಷಣ ಪೊಲೀಸರ ಗಮನಕ್ಕೆ ತರುತ್ತಾರೆ.

ಇತ್ತೀಚೆಗೆ ಚಾಮುಂಡೇಶ್ವರಿ ದೇವಿ ದರ್ಶನ ಮುಗಿಸಿ ಹೊರಗೆ ಬಂದ ಭಕ್ತರು, 25 ಸಾವಿರ ನಗದಿದ್ದ ಪರ್ಸ್ ಕಾಣೆಯಾಗಿದ್ದು, ಪೊಲೀಸರಿಗೆ ದೂರು ಸಲ್ಲಿಸಿದ್ದಾರೆ. ಮತ್ತೊಬ್ಬರು ತಮ್ಮ ಮೊಬೈಲ್ ಕಾಣೆಯಾಗಿದೆ ಎಂದು ದೂರು ನೀಡಿದ್ದಾರೆ. ಇನ್ನೊಬ್ಬ ಮಹಿಳೆ 10 ಸಾವಿರವಿದ್ದ ಪರ್ಸ್ ಕಾಣೆಯಾಗಿದೆ ಎಂದು ದೂರು ಸಲ್ಲಿಸಿದ್ದಾರೆ.

ದೂರು ಬಂದ ತಕ್ಷಣ ಕಾರ್ಯ ಪ್ರವೃತ್ತರಾದ ಚಾಮುಂಡಿ

ಬೆಟ್ಟದಲ್ಲಿ ಪೊಲೀಸರ ಚಮತ್ಕಾರ!


ಮಹಿಳೆಯೊಬ್ಬರು ಕಳೆದುಕೊಂಡಿದ್ದ ವಸ್ತುವನ್ನು ಹಿಂದಿರುಗಿಸುತ್ತಿರುವುದು

ಬೆಟ್ಟದ ಪೊಲೀಸ್ ಠಾಣೆಯ ಸಿಬ್ಬಂದಿ ದೇವಸ್ಥಾನದ ಮೈಕ್ ಮೂಲಕ ಹೀಗೆ ಕಳೆದುಕೊಂಡ ವಸ್ತುಗಳ ಬಗ್ಗೆ ಪ್ರಕಟಿಸಿದ್ದಾರೆ. ನಂತರ ಕಳೆದ ಮೊಬೈಲ್ ಫೋನ್‌ಗೂ ಕರೆ ಮಾಡಿದ್ದಾರೆ. ಸಿಸಿಟಿವಿ ಕ್ಯಾಮರಾದಲ್ಲಿ ಸೆರೆಯಾಗಿರುವ ದೃಶ್ಯಗಳನ್ನು ಪರಿಶೀಲಿಸಿದಾಗ ಪ್ರವಾಸಿಗರು ತಮ್ಮ ಪರ್ಸ್ ಮತ್ತು ಫೋನ್ ಅನ್ನು ಯಾವ ಸ್ಥಳದಲ್ಲಿ ಕಳೆದುಕೊಂಡಿದ್ದಾರೆ ಎಂಬುದನ್ನು ಪತ್ತೆ ಮಾಡಿದ್ದಾರೆ.

ವಾರಸುದಾರರಿಗೆ ತಕ್ಷಣ ಅವುಗಳನ್ನು ನೀಡದೇ ಆ ಪರ್ಸ್‌ನಲ್ಲಿ ಏನಿದೆ ಎಂದು ಅವರನ್ನು ಪ್ರಶ್ನಿಸಿ, ಈ ವಸ್ತುಗಳಿಗೆ ಅವರೇ ವಾರಸುದಾರರೇ ಎಂದು ಖಚಿತಪಡಿಸಿಕೊಂಡು ನಂತರ ಅವರಿಗೆ ವಸ್ತುಗಳ ಮರಳಿಸಿದ್ದಾರೆ. ಇದೇ ರೀತಿ ಕಳೆದ ಹತ್ತು ದಿನಗಳಲ್ಲಿ ಪೊಲೀಸರು 35 ಸಾವಿರ ರೂ. ನಗದು, ಒಂದು ಮೊಬೈಲ್ ಫೋನ್ ಇತರೆ ಪದಾರ್ಥಗಳನ್ನು ವಾರಸುದಾರರಿಗೆ ದೂರು ನೀಡಿದ ಗಂಟೆಯೊಳಗೆ ತಲುಪಿಸಿದ್ದು, ಪೊಲೀಸರಿಗೆ ಪ್ರವಾಸಿಗರು ಧನ್ಯವಾದ ತಿಳಿಸಿದ್ದಾರೆ.

ಕಿವುಡು, ಮೂಕ ಮಕ್ಕಳ ಉಚಿತ ವಸತಿ ಶಾಲಾ ಪ್ರವೇಶಾತಿಗೆ ಅರ್ಜಿ ಆಹ್ವಾನ

ಮೈಸೂರು,ಮೇ.12– ಮೈಸೂರಿನ ಬನ್ನಿಮಂಟಪ ಬಡಾವಣೆಯಲ್ಲಿರುವ ಸಾಯಿರಂಗ ವಿದ್ಯಾಸಂಸ್ಥೆ (ಉಚಿತ ಕಿವುಡು ಗಂಡುಮಕ್ಕಳ ವಸತಿ ಶಾಲೆ)ಯ ವತಿಯಿಂದ 2026–27 ನೇ ಸಾಲಿನ 1 ರಿಂದ 3ನೇ ತರಗತಿಗಳ ಉಚಿತ ಪ್ರವೇಶಾತಿಗೆ ಕಿವುಡು ಮತ್ತು ಮೂಕ ವಿಶೇಷ ಚೇತನ ಮಕ್ಕಳಿಂದ ಅರ್ಜಿ ಆಹ್ವಾನಿಸಿದೆ.

ಪ್ರವೇಶಾತಿ ಪಡೆದ ಮಕ್ಕಳಿಗೆ ಊಟ, ವಸತಿ, ಶಿಕ್ಷಣ ಹಾಗೂ ವೈದ್ಯಕೀಯ ಸೌಲಭ್ಯಗಳನ್ನು 1 ರಿಂದ 10ನೇ ತರಗತಿಯ ವರೆಗೆ ಸಂಸ್ಥೆಯ ವತಿಯಿಂದ ಸಂಪೂರ್ಣ ಉಚಿತವಾಗಿ ನೀಡಲಾಗುತ್ತದೆ. ಹೆಚ್ಚಿನ ಮಾಹಿತಿಗೆ ಶಾಲೆಯ ಮುಖ್ಯೋಪಾಧ್ಯಾಯರು ರಘುನಾಥ ಗೌಡ.ವೈ.ವಿ ಮೊ: 9342112736 ಸಂಪರ್ಕಿಸಬಹುದು.

ವಿಧಾನಸಭೆಯ ನಡಾವಳಿಯಲ್ಲಿ ಏಕರೂಪತೆ ತರುವ ನಿಟ್ಟಿನಲ್ಲಿ ಸಭಾಧ್ಯಕ್ಷರ ಸಮಿತಿ ರಚನೆ; ಮೈಸೂರಲ್ಲಿ ಮೊದಲ ಸಭೆ

ಮೈಸೂರು ಮೇ 12(ಎಸ್‌ಪಿಎನ್)– ದೇಶದ ಎಲ್ಲಾ ರಾಜ್ಯಗಳ ವಿಧಾನ ಮಂಡಲದ ಕಾರ್ಯ ವಿಧಾನಗಳ ನೀತಿ–ನಿರೂಪಣೆಯಲ್ಲಿ ಏಕತೆ ತರಲು ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಅವರು, ಆರು ರಾಜ್ಯಗಳ ವಿಧಾನಸಭಾಧ್ಯಕ್ಷರನ್ನೊಳಗೊಂಡ ಸಮಿತಿಯನ್ನು ರಚಿಸಿದ್ದಾರೆ ಎಂದು ಸಮಿತಿ ಅಧ್ಯಕ್ಷರೂ ಆದ ಉತ್ತರ ಪ್ರದೇಶದ ವಿಧಾನಸಭಾ ಸಭಾಧ್ಯಕ್ಷ ಸತೀಶ್ ಮಹನಾ ತಿಳಿಸಿದರು.



ರಾಜ್ಯಗಳ ಶಾಸಕಾಂಗ ಕಾರ್ಯ ವಿಧಾನ ಮತ್ತು ನಡಾವಳಿಕೆಯಲ್ಲಿ ಏಕರೂಪತೆ ತರುವ ಸಲುವಾಗಿ ರಚನೆಯಾಗಿರುವ ಉನ್ನತ ಸಮಿತಿಯ ಪ್ರಥಮ ಪೂರ್ವಭಾವಿ ಸಭೆಯ ಬಳಿಕ ಸಮಿತಿ ಅಧ್ಯಕ್ಷರೂ ಆದ ಉತ್ತರ ಪ್ರದೇಶದ ವಿಧಾನಸಭಾ ಸಭಾಧ್ಯಕ್ಷ ಸತೀಶ್ ಮಹನಾ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು. ಈ ವೇಳೆ ಸದಸ್ಯರಾದ ಕರ್ನಾಟಕ ವಿಧಾನ ಸಭೆ ಸಭಾಧ್ಯಕ್ಷ ಯು.ಟಿ.ಖಾದರ್, ನಾಗಾಲ್ಯಾಂಡ್ ವಿಧಾನಸಭೆಯ ಸಭಾಧ್ಯಕ್ಷ ಶ್ಯಾರಿಗ್ಯಾನ್ ಲಾಂಗ್‌ಕುಮೇರ್, ಹಿಮಾಚಲ ಪ್ರದೇಶದ ವಿಧಾನಸಭೆಯ ಸಭಾಧ್ಯಕ್ಷ ಕುಲ್‌ದೀಪ್ ಸಿಂಗ್ ಪಠಾನೀಯ ಹಾಗೂ ದೆಹಲಿ ವಿಧಾನಸಭೆಯ ಸಭಾಧ್ಯಕ್ಷ ವಿಜೇಂದರ್ ಗುಪ್ತ ಉಪಸ್ಥಿತರಿದ್ದರು.

ಮೈಸೂರು ಖಾಸಗಿ ಹೋಟೆಲ್‌ನಲ್ಲಿ ರಾಜ್ಯಗಳ ಶಾಸಕಾಂಗಗಳ ಕಾರ್ಯ ವಿಧಾನ ಮತ್ತು ನಡಾವಳಿಕೆಯಲ್ಲಿ ಏಕರೂಪತೆ ತರುವ ಸಲುವಾಗಿ ರಚನೆಯಾಗಿರುವ ಉನ್ನತ ಸಮಿತಿಯ ಪ್ರಥಮ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ, ಬಳಿಕ ಮಾಧ್ಯಮಗಳೊಂದಿಗೆ ಅವರು ಮಾತನಾಡಿದರು.

40 ವರ್ಷಗಳ ಹಿಂದೆ ವಿಧಾನ ಮಂಡಲದ ನೀತಿ–ನಿಯಮಗಳನ್ನು ರೂಪಿಸಲಾಗಿತ್ತು. ಈ ಹಿಂದೆ 25ರಿಂದ 30 ವರ್ಷಗಳಿಗೆ ತಲೆಮಾರು ಬದಲಾವಣೆಯಾಗುತ್ತಿತ್ತು. ಈಗ ಐದು ವರ್ಷಗಳಲ್ಲಿ ಒಂದು ತಲೆಮಾರು ಬದಲಾವಣೆಯಾಗುತ್ತಿವೆ. ಈ ಹಿನ್ನೆಲೆಯಲ್ಲಿ ಉತ್ತಮ ಸಲಹೆಗಳನ್ನು ಪಡೆದು ಏಕರೂಪತೆ ತರುವ ನಿಟ್ಟಿನಲ್ಲಿ ಸಮಿತಿ ಕಾರ್ಯ ನಿರ್ವಹಿಸುತ್ತಿದೆ ಎಂದರು.

ತಂತ್ರಜ್ಞಾನ, ಮೂಲಸೌಕರ್ಯ, ಹಣಕಾಸು ವ್ಯವಹಾರ ಸೇರಿದಂತೆ ವಿವಿಧ ವ್ಯವಸ್ಥೆಗಳು ಬದಲಾವಣೆ ಹಾಗೂ ಸಾರ್ವಜನಿಕರ ಶ್ರೇಯೋಭಿವೃದ್ಧಿಯನ್ನು ಮುಖ್ಯವಾಗಿರಿಸಿಕೊಂಡು ಸಮಿತಿ ಚರ್ಚೆ ನಡೆಸುತ್ತಿದೆ. ಸಮಿತಿಯು ವರದಿಯನ್ನು ಸಿದ್ಧಪಡಿಸಿ ಲೋಕಸಭಾಧ್ಯಕ್ಷರಿಗೆ ಸಲ್ಲಿಸಲಿದೆ. ಈ ಹಿನ್ನೆಲೆಯಲ್ಲಿ ಮೈಸೂರಿನಲ್ಲಿ ಪ್ರಥಮ ಸಭೆ ನಡೆಸಲಾಗಿದೆ. ಮುಂದಿನ ಸಭೆಯನ್ನು ಒಂದೂವರೆ ತಿಂಗಳೊಳಗಾಗಿ ದೆಹಲಿಯಲ್ಲಿ ನಡೆಸಲಾಗುವುದು. ಸಮಿತಿಗೆ ವರದಿ ನೀಡಲು 6 ತಿಂಗಳ ಕಾಲಾವಕಾಶ ನಿಗದಿಪಡಿಸಲಾಗಿದೆ ಎಂದರು.

ಈ ಸಮಿತಿಯಲ್ಲಿ ನಾಗಲ್ಯಾಂಡ್, ಹಿಮಾಚಲ ಪ್ರದೇಶ, ಕರ್ನಾಟಕ, ಮಹಾರಾಷ್ಟ್ರ ಹಾಗೂ ದೆಹಲಿಯ ವಿಧಾನಸಭಾ ಸಭಾಧ್ಯಕ್ಷರು ಸದಸ್ಯರಾಗಿರುತ್ತಾರೆ.

ಇತ್ತೀಚಿನ ದಿನಗಳಲ್ಲಿ ದೇಶದ ವಿವಿಧ ರಾಜ್ಯಗಳ ವಿಧಾನಸಭೆಯಲ್ಲಿ ಚರ್ಚೆಗಳು ಸರಿಯಾದ ದಿಕ್ಕಿನಲ್ಲಿ ನಡೆಯುತ್ತಿಲ್ಲ ಎಂಬ ಮಾಧ್ಯಮಗಳ ಪ್ರಶ್ನೆಗೆ ಉತ್ತರಿಸಿದ ಅವರು, ಹೌದು, ಈ ದಿಕ್ಕಿನಲ್ಲೂ ನಮ್ಮ ಸಮಿತಿ ಚರ್ಚೆ ನಡೆಸುತ್ತಿದೆ. ಈಗಿನ ಜನಪ್ರತಿನಿಧಿಗಳ ಮನಸ್ಥಿತಿ ಹಾಗೂ ಅವರು ಪ್ರತಿನಿಧಿಸುವ ಪಕ್ಷಗಳ ಸಿದ್ಧಾಂತವೂ ಜನಪ್ರತಿನಿಧಿಗಳ ನಡವಳಿಕೆ ನಿರ್ಧರಿಸಬಹುದಾಗಿದೆ ಎಂದು ಮಾಧ್ಯಮಗಳ ಪ್ರಶ್ನೆಗೆ ಉತ್ತರಿಸಿದರು.

ಮೊದಲ ಸಭೆಯಲ್ಲಿ ವಿಧಾನಸಭೆಯ ನಡಾವಳಿಗಳ ಬಗ್ಗೆ ಕಾರ್ಯದರ್ಶಿಗಳು ಮಾಹಿತಿ ನೀಡಿದ್ದು, ಮಸೂದೆಗಳ ಚರ್ಚೆಯಲ್ಲಿ ಸದಸ್ಯರು ಕಡ್ಡಾಯವಾಗಿ ಪಾಲ್ಗೊಳ್ಳಬೇಕು. ತಿದ್ದುಪಡಿಯ ಜೊತೆಗೆ ಉತ್ತಮ ಕಾಯ್ದೆಯಾಗಿ ಹೊರಹೊಮ್ಮಲು ಇಂತಹ ಸಂವಾದಗಳು ಅತ್ಯಗತ್ಯ ಎಂದು ಪ್ರತಿಪಾದಿಸಿದರು.

ನಾಳೆ(ಬುಧವಾರ) ಸಭೆ ಮುಂದುವರಿಯಲಿದೆ. ಸಮಿತಿಯು ಎಲ್ಲ ರಾಜ್ಯಗಳ ವಿಧಾನ ಮಂಡಲದಲ್ಲಿರುವ ನೀತಿ ಹಾಗೂ ನಿಯಮಗಳನ್ನು ಉತ್ತಮಗೊಳಿಸುವ ಬಗ್ಗೆ ಚರ್ಚೆ ನಡೆಸಿ ವರದಿ ಸಿದ್ಧಪಡಿಸಲಿದೆ. ಇದರೊಂದಿಗೆ ಬೇರೆ ರಾಜ್ಯಗಳ ಸಭಾಧ್ಯಕ್ಷರು ನೀಡುವ ಸಲಹೆಗಳನ್ನು ಸಮಿತಿ ಪರಿಗಣಿಸಲಿದೆ ಎಂದು ಮಾಧ್ಯಮಗಳ ಪ್ರಶ್ನೆಗೆ ಉತ್ತರಿಸಿದರು.

ಗೋಷ್ಠಿಯಲ್ಲಿ ಸಮಿತಿಯ ಸದಸ್ಯರುಗಳಾದ ನಾಗಾಲ್ಯಾಂಡ್ ವಿಧಾನಸಭೆಯ ಸಭಾಧ್ಯಕ್ಷ ಶ್ಯಾರಿಗ್ಯಾನ್ ಲಾಂಗ್‌ಕುಮೇರ್, ಹಿಮಾಚಲ ಪ್ರದೇಶದ ವಿಧಾನಸಭೆಯ ಸಭಾಧ್ಯಕ್ಷ ಕುಲ್‌ದೀಪ್ ಸಿಂಗ್ ಪಠಾನೀಯ ಹಾಗೂ ದೆಹಲಿ ವಿಧಾನಸಭೆಯ ಸಭಾಧ್ಯಕ್ಷ ವಿಜೇಂದರ್ ಗುಪ್ತ ಉಪಸ್ಥಿತರಿದ್ದರು.

ಒಕ್ಕೂಟ ವ್ಯವಸ್ಥೆಗೆ ಯಾವ ಧಕ್ಕೆಯೂ ಇಲ್ಲ

ಸ್ಪೀಕರ್ ಯು.ಟಿ.ಖಾದರ್ ಸ್ಪಷ್ಟನೆ

ಮೈಸೂರು, ಮೇ 12(ಎಸ್‌ಪಿಎನ್)– ದೇಶದ ಪ್ರತಿಯೊಂದು ರಾಜ್ಯದ ವಿಧಾನಸಭೆ ನೀತಿ–ನಿರೂಪಣೆಗಳ ಏಕರೂಪ ಕಾಯ್ದೆ ಜಾರಿಯಿಂದ ಒಕ್ಕೂಟ ವ್ಯವಸ್ಥೆಗೆ ಯಾವುದೇ ಧಕ್ಕೆಯಿಲ್ಲ ಎಂದು ಕರ್ನಾಟಕ ವಿಧಾನ ಸಭೆ ಸಭಾಧ್ಯಕ್ಷ ಯು.ಟಿ.ಖಾದರ್ ಪ್ರತಿಪಾದಿಸಿದರು.

ವಿವಿಧ ದೇಶದ ರಾಜ್ಯಗಳ ವಿಧಾನ ಸಭೆಗಳ ಕಾರ್ಯ ವಿಧಾನ ಮತ್ತು ನಡಾವಳಿಯಲ್ಲಿ ಏಕರೂಪತೆ ತರುವ ನಿಟ್ಟಿನಲ್ಲಿ ರಚನೆಯಾಗಿರುವ ಸಮಿತಿಯ ಮೊದಲ ಸಭೆಯಲ್ಲಿ ಭಾಗವಹಿಸಿದ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ವಿಧಾನಸಭೆ ಕಾರ್ಯ–ಕಲಾಪಗಳಲ್ಲಿ ಏಕರೂಪತೆ ತರುವ ಕಾಯ್ದೆಯಿಂದ ಒಕ್ಕೂಟ ವ್ಯವಸ್ಥೆಗೆ ಧಕ್ಕೆಯಾಗುವುದಿಲ್ಲವೇ ಎಂಬ ಮಾಧ್ಯಮದವರ ಪ್ರಶ್ನೆಗೆ ಉತ್ತರಿಸಿದ ಅವರು, ಏಕರೂಪದ ನಿಯಮ ಜಾರಿಯಿಂದ ಭಾರತವು ಮತ್ತಷ್ಟು ಗಟ್ಟಿಯಾಗಲಿದೆ. 1891ರಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ತಮ್ಮ ಆಸ್ಥಾನದಲ್ಲಿ ಪ್ರಜಾಪ್ರತಿನಿಧಿ ಸಭೆ ನಡೆಸಿದ್ದು, ಈಗ ಇತಿಹಾಸ. ಇಂತಹ ನಾಡಿನಲ್ಲಿ ಸಮಿತಿಯ ಪ್ರಥಮ ಸಭೆ ನಡೆಯಲಿರುವುದು ಸಂತೋಷದ ಸಂಗತಿ ಎಂದರು.

ಪ್ರತಿ ರಾಜ್ಯದ ವಿಧಾನಸಭೆಯಲ್ಲಿ ಒಂದೊಂದು ನಿಯಮವಿದೆ. ಸರಿಯಾದ ಕೋರಂ, ಸದಸ್ಯರ ಭಾಗವಹಿಸುವಿಕೆ, ಪ್ರಶ್ನೋತ್ತರ ವಿಧಾನ, ಸದನವನ್ನು ಸರಿಯಾದ ಮಾರ್ಗದಲ್ಲಿ ನಡೆಸಲು ಯಾವ ರೀತಿ ನಿಯಮ ಜಾರಿಗೆ ತರಬೇಕು ಎಂದು ಚರ್ಚೆ ಮಾಡಿ ಅಂತಿಮ ವರದಿಯನ್ನು ಲೋಕಸಭೆ ಸಭಾಧ್ಯಕ್ಷರಿಗೆ ಸಲ್ಲಿಸುತ್ತೇವೆ. 40 ವರ್ಷಗಳ ಬಳಿಕ ದೇಶದ ಎಲ್ಲ ರಾಜ್ಯಗಳ ವಿಧಾನ ಸಭೆಗಳ ಕಾರ್ಯ ವಿಧಾನ ಮತ್ತು ನಡವಳಿಕೆಯಲ್ಲಿ ಏಕರೂಪತೆ ತರುವ ನಿಟ್ಟಿನಲ್ಲಿ ರಚನೆಯಾಗಿರುವ ಸಮಿತಿಯು ಆರು ತಿಂಗಳಲ್ಲಿ ಲೋಕಸಭಾ ಸ್ಪೀಕರ್ ಅವರಿಗೆ ವರದಿ ಸಲ್ಲಿಸಲಿದೆ ಎಂದು ಹೇಳಿದರು.

ರಾಜ್ಯಪಾಲರು ವಿಧಾನಸಭೆಗಳಿಗೆ ಅಸಹಕಾರ ತೋರುವ ಬಗ್ಗೆ ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿದ ಖಾದರ್, ಇದು ತಮ್ಮ ವ್ಯಾಪ್ತಿಗೆ ಬರುವುದಿಲ್ಲ. ಸದಸ್ಯರಿಗೆ ಸವಲತ್ತು ಕೊಡುವ ಬಗ್ಗೆ ಮುಂದಿನ ಸಭೆಯಲ್ಲಿ ಚರ್ಚೆ ಮಾಡುತ್ತೇವೆ ಎಂದು ಹೇಳಿದರು.

ಸನ್‌ರೈಸರ್ಸ್ ಸದೆಬಡಿದು ಅಗ್ರಸ್ಥಾನಕ್ಕೇರಿದ ಗುಜರಾತ್

ಅಹಮದಾಬಾದ್, ಮೇ 12 (ವಿವಿಹೆಚ್)– ಸಾಯ್ ಸುದರ್ಶನ್, ವಾಷಿಂಗ್ಟನ್ ಸುಂದರ್ ಅರ್ಧಶತಕ, ಹೋಲ್ಡರ್ ಹಾಗೂ ರಬಾಡ ಅವರ ಕರಾರುವಕ್ಕಾದ ಬೌಲಿಂಗ್ ದಾಳಿಯ ನೆರವಿನಿಂದ ಬಲಿಷ್ಠ ಸನ್‌ರೈಸರ್ಸ್ ಹೈದರಾಬಾದ್ ತಂಡವನ್ನು ಗುಜರಾತ್ ಟೈಟನ್ಸ್ 82 ರನ್ ಗಳಿಂದ ಬಗ್ಗುಬಡಿಯಿತು.



ಆ ಮೂಲಕ 12 ಪಂದ್ಯಗಳಲ್ಲಿ 4ರಲ್ಲಿ ಸೋತು, 8ರಲ್ಲಿ ಗೆಲುವು ಕಾಣುವ ಮೂಲಕ 16 ಪಾಯಿಂಟ್‌ಗಳೊಂದಿಗೆ ಅಗ್ರಸ್ಥಾನಕ್ಕೇರಿತು.

ಇಲ್ಲಿನ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ಮಂಗಳವಾರ ನಡೆದ ಐಪಿಎಲ್–2026ರ 56ನೇ ಲೀಗ್ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಜಿಟಿ ನಿಗದಿತ 20 ಓವರ್‌ಗಳಲ್ಲಿ 5 ವಿಕೆಟ್ ನಷ್ಟಕ್ಕೆ 168 ರನ್ ಗಳಿಸಿತು. ಈ ಸ್ಪರ್ಧಾತ್ಮಕ ಮೊತ್ತ ಬೆನ್ನತ್ತುವಲ್ಲಿ ಎಡವಿದ ಹೈದರಾಬಾದ್ 14.5 ಓವರ್‌ಗಳಲ್ಲಿ ಸರ್ವಪತನ ಕಂಡು 86 ರನ್ ಗಳಿಸಿ ಸೋಲೊಪ್ಪಿಕೊಂಡಿತು.

ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಅತಿಥೇಯ ಗುಜರಾತ್ ಟೈಟನ್ಸ್ ಆರಂಭಿಕ ಬ್ಯಾಟರ್ ಸಾಯ್ ಸುದರ್ಶನ್ ಹಾಗೂ ಆಲ್‌ರೌಂಡರ್ ವಾಷಿಂಗ್ಟನ್ ಸುಂದರ್ ಅವರ ಜವಾಬ್ದಾರಿಯುತ ಅರ್ಧಶತಕದಾಟದ ಬಲದಿಂದ ಸ್ಪರ್ಧಾತ್ಮಕ ಮೊತ್ತ ಕಲೆಹಾಕಿತು.

ಸಾಯ್ ಸುದರ್ಶನ್ 44 ಎಸೆತಗಳಲ್ಲಿ 5 ಬೌಂಡರಿ, 2 ಸಿಕ್ಸರ್ ಸಹಿತ 61 ರನ್ ಗಳಿಸಿದರೆ, ಸುಂದರ್ 33 ಎಸೆತಗಳಲ್ಲಿ 7 ಬೌಂಡರಿ, 1 ಸಿಕ್ಸರ್ ಸಹಿತ 50 ರನ್ ಗಳಿಸಿ ಔಟಾದರು.

ನಿಶಾಂತ್ ಸಿಂಧು 22(14), ಜಾಸನ್ ಹೋಲ್ಡರ್ ಅಜೇಯ 11(10) ರನ್ ಗಳಿಸಿದರು. ಉಳಿದಂತೆ ನಾಯಕ ಶುಭ್‌ಮನ್ ಗಿಲ್ 5(7), ಜೊಸ್ ಬಟ್ಲರ್ 7(11), ರಾಹುಲ್ ತೆವಾಟಿಯ ಅಜೇಯ 4(1) ರನ್ ಗಳಿಸಿದರು.

ಎಸ್‌ಆರ್‌ಹೆಚ್ ಪರ ಪ್ರಫುಲ್ ಹಿಂಗೆ ಹಾಗೂ ಶಕೀಬ್ ಹಸನ್ ತಲಾ 2 ವಿಕೆಟ್, ನಾಯಕ ಪ್ಯಾಟ್ ಕಮಿನ್ಸ್ ಒಂದು ವಿಕೆಟ್ ಕಿತ್ತರು.

ಈ ಸ್ಪರ್ಧಾತ್ಮಕ ಮೊತ್ತ ಬೆನ್ನತ್ತಿದ ಹೈದರಾಬಾದ್‌ಗೆ ಜಿಟಿ ಬೌಲರ್‌ಗಳು ಕಾಡಿದರು. ಜಿಟಿ ಬೌಲರ್‌ಗಳ ಕರಾರುವಕ್ಕಾದ ದಾಳಿಗೆ ಮಂಕಾದ ಎಸ್‌ಆರ್‌ಹೆಚ್ ಬ್ಯಾಟರ್‌ಗಳು ರನ್ ಕದಿಯಲು ತಿಣುಕಾಡಿದರು. ನಾಯಕ ಪ್ಯಾಟ್ ಕಮಿನ್ಸ್ 19(9) ರನ್ ಗಳಿಸಿದ್ದೆ ತಂಡದ ಪರ ವೈಯಕ್ತಿಕ ಗರಿಷ್ಠ ರನ್ ಆಗಿತ್ತು. ಇಶಾನ್ ಕಿಶನ್ 11(7), ಹೆನ್ರಿಚ್ ಕ್ಲಾಸೆನ್ 14(16), ಸಲೀಲ್ ಅರೋರ 16(13) ರನ್ ಗಳಿಸಿದರು. ಇವರ ಹೊರತಾಗಿ ಬೇರ್‍ಯಾವ ಬ್ಯಾಟರ್ ಒಂದಂಕಿ ಮೊತ್ತ ದಾಟದೇ ಇದ್ದದ್ದು ತಂಡದ ಸೋಲಿಗೆ ಪ್ರಮುಖ ಕಾರಣವಾಯಿತು.

ಉಳಿದಂತೆ ಟ್ರಾವಿಸ್ ಹೆಡ್ ಡಕ್‌ಔಟ್, ಅಭಿಷೇಕ್ ಶರ್ಮಾ 6(4), ಸಮರನ್ ರವಿಚಂದ್ರನ್ 9(15), ನಿತೀಶ್‌ಕುಮಾರ್ ರೆಡ್ಡಿ 2(4), ಶಿವಾಂಗ್ ಕುಮಾರ್ 4(6) ಹಾಗೂ ಪ್ರಫುಲ್ ಹಿಂಗೆ 3(8) ರನ್ ಗಳಿಸಿದರು.

ಗುಜರಾತ್ ಪರ ಕಗಿಸೋ ರಬಾಡ ಹಾಗೂ ಜಾಸನ್ ಹೋಲ್ಡರ್ ತಲಾ 3 ವಿಕೆಟ್ ಕಬಳಿಸಿದರು. ಪ್ರಸಿದ್ಧ್ ಕೃಷ್ಣ 2, ಮೊಹಮ್ಮದ್ ಸಿರಾಜ್ ಹಾಗೂ ರಶೀದ್ ಖಾನ್ ತಲಾ ಒಂದೊಂದು ವಿಕೆಟ್ ಪಡೆದು ಮಿಂಚಿದರು.

ಬದನವಾಳು ಖಾದಿ ಕೇಂದ್ರವನ್ನು ಪ್ರವಾಸೋದ್ಯಮ ಕೇಂದ್ರ ಮಾಡಲು

ಗುಜರಾತ್ ಮಾದರಿ ಅಭಿವೃದ್ಧಿ: ಅತೀ ದೊಡ್ಡ ಚರಕ ನಿರ್ಮಾಣ

ಅಧಿಕಾರಿಗಳೊಂದಿಗೆ ಖಾದಿ ಕೇಂದ್ರ ಪರಿಶೀಲಿಸಿದ ಶಾಸಕ ದರ್ಶನ್ ಧ್ರುವನಾರಾಯಣ್

ನಂಜನಗೂಡು, ಮೇ 12– ತಾಲೂಕಿನ ಬದನವಾಳು ಗ್ರಾಮದಲ್ಲಿರುವ ಖಾದಿ ಮತ್ತು ಗ್ರಾಮೋದ್ಯೋಗ ಕೇಂದ್ರವನ್ನು ಪ್ರವಾಸೋದ್ಯಮ ಕೇಂದ್ರವನ್ನಾಗಿ ರೂಪಿಸಲು ಪ್ರಪಂಚದಲ್ಲೇ ಅತಿ ದೊಡ್ಡದಾದ ಚರಕ ನಿರ್ಮಿಸಲಾಗುವುದು ಎಂದು ಶಾಸಕ ದರ್ಶನ್ ಧ್ರುವನಾರಾಯಣ್ ತಿಳಿಸಿದರು.



ಶಾಸಕ ದರ್ಶನ್ ಧ್ರುವನಾರಾಯಣ್ ಅವರು ಅಧಿಕಾರಿಗಳೊಂದಿಗೆ ಪರಿಶೀಲನೆ ನಡೆಸಿದರು.

ತಾಲೂಕಿನ ಬದನವಾಳು ಗ್ರಾಮದಲ್ಲಿರುವ ಖಾದಿ ಮತ್ತು ಗ್ರಾಮೋದ್ಯೋಗ ಕೇಂದ್ರವನ್ನು ಅಭಿವೃದ್ಧಿಪಡಿಸುವ ದೃಷ್ಟಿಯಿಂದ ಖಾದಿ ಮಂಡಳಿ ಅಧಿಕಾರಿಗಳ ಜೊತೆ ಸ್ಥಳ ಪರಿಶೀಲಿಸಿ ಅವರು ಮಾತನಾಡಿದರು.

ಸ್ವತಃ ಮಹಾತ್ಮ ಗಾಂಧೀಜಿ ಅವರು ಇಲ್ಲಿಗೆ ಭೇಟಿ ನೀಡಿ ಗುಡಿ ಕೈಗಾರಿಕೆ ಉತ್ತೇಜಿಸುವ ಹಿತದೃಷ್ಟಿಯಿಂದ ಖಾದಿ ಮತ್ತು ನೂಲುವ ಕೇಂದ್ರ ಸ್ಥಾಪಿಸಿದರು. ಹೀಗಾಗಿ ಈ ಕೇಂದ್ರವನ್ನು ಸಂರಕ್ಷಿಸಿ ಪ್ರವಾಸೋದ್ಯಮ ಕೇಂದ್ರವನ್ನಾಗಿ ರೂಪಿಸುವ ಸಲುವಾಗಿ ರಾಜ್ಯ ಸರ್ಕಾರ ಬಜೆಟ್‌ನಲ್ಲಿ 40 ಕೋಟಿ ರೂ. ಮಂಜೂರು ಮಾಡಿದೆ. ಸುಮಾರು 5.6 ಎಕರೆ ಪ್ರದೇಶದಲ್ಲಿ ಇಲ್ಲಿನ ಇತಿಹಾಸವನ್ನು ಸಂರಕ್ಷಿಸುವ ಸಲುವಾಗಿ ಪಾರಂಪರಿಕ ಮಾದರಿ ಕಟ್ಟಡ ನಿರ್ಮಿಸಲಾಗುವುದು. ಅಲ್ಲದೇ ಗುಜರಾತ್‌ನಲ್ಲಿರುವ ಗಾಂಧೀಜಿಯವರ ಶಬರಮತಿ ಆಶ್ರಮದ ಮಾದರಿ ವಸ್ತು ಸಂಗ್ರಹಾಲಯ, ಯೋಗ ಕೇಂದ್ರ, ಗೋಶಾಲೆ, ಗುಡಿ ಕೈಗಾರಿಕೆಗಳನ್ನು ನಿರ್ಮಿಸಲಾಗುವುದು. ಪ್ರಮುಖ ಪ್ರವಾಸಿ ಕೇಂದ್ರವನ್ನಾಗಿ ರೂಪಿಸಲು ಜನರನ್ನು ಆಕರ್ಷಿಸುವ ಸಲುವಾಗಿ ಪ್ರಪಂಚದಲ್ಲೇ ಅತಿ ದೊಡ್ಡ ಚರಕ ನಿರ್ಮಿಸಲಾಗುವುದು. ಈ ಚರಕಕ್ಕೆ ಮೋಟರ್ ಅಳವಡಿಕೆ ಮಾಡಿ ಚಾಲ್ತಿಯಾಗಿರುವಂತೆ ಮಾಡಲಾಗುವುದು. ಜೊತೆಗೆ ಸ್ವಚ್ಛಂದವಾದ ಪರಿಸರ ನಿರ್ಮಾಣ ಮಾಡಿ ಆ ಮೂಲಕ ಗುಡಿ ಕೈಗಾರಿಕೆಗಳನ್ನು ಉತ್ತೇಜಿಸಿ ಖಾದಿ ಬಟ್ಟೆ ತಯಾರಿಕೆಗೆ ಹೆಚ್ಚಿನ ಪ್ರೋತ್ಸಾಹ ನೀಡಲಾಗುವುದು. ಇನ್ನು ಖಾದಿ ಬಟ್ಟೆ ತಯಾರಿಕೆಯ ಮಹತ್ವ ಜಾಗತಿಕ ಮಟ್ಟದಲ್ಲಿ ಖಾದಿ ಬಟ್ಟೆಗೆ ಇರುವ ಬೆಲೆಯನ್ನು ಇಂದಿನ ಯುವಕರಿಗೆ ತಿಳಿಸಿ ಖಾದಿ ಬಟ್ಟೆ ತಯಾರಿಕೆ ತರಬೇತಿ ನೀಡಿ ಯುವಕರನ್ನು ಆಕರ್ಷಿಸಲಾಗುವುದು. 2ನೇ ಹಂತದ ಅಭಿವೃದ್ಧಿ ಕಾರ್ಯದಲ್ಲಿ ಬೆಂಕಿ ಪೊಟ್ಟಣ ತಯಾರಿಕೆ, ಪೇಪರ್ ತಯಾರಿಕೆ ಸೇರಿದಂತೆ ಗ್ರಾಮೀಣ ಗುಡಿ ಕೈಗಾರಿಕೆಗಳನ್ನು ಸ್ಥಾಪಿಸಲಾಗುವುದು. ಪ್ರಮುಖವಾಗಿ ಮುಂದಿನ ಪೀಳಿಗೆಗೆ ಖಾದಿ, ಗಾಂಧೀಜಿಯವರ ಹೋರಾಟದ ಇತಿಹಾಸ ತಿಳಿಸುವ ಗುರಿ ಹೊಂದಲಾಗಿದೆ ಎಂದು ಮಾಹಿತಿ ನೀಡಿದರು.

ಖಾದಿ ಮಂಡಳಿ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ನಟೇಶ್ ಮಾತನಾಡಿ, ಶಾಸಕರು ಬದನವಾಳು ಗ್ರಾಮದ ಖಾದಿ ಕೇಂದ್ರವನ್ನು ಸಮಗ್ರವಾಗಿ ಅಭಿವೃದ್ಧಿ ಪಡಿಸಲು ಸಂಪೂರ್ಣ ಆಸಕ್ತಿ ತೋರಿದ್ದಾರೆ. 1927ರಲ್ಲಿ ಈ ಖಾದಿ ಕೇಂದ್ರವನ್ನು ಗಾಂಧೀಜಿಯವರು ಸ್ಥಾಪನೆ ಮಾಡಿದ್ದು, ಮುಂದಿನ ವರ್ಷದ ಶತಮಾನೋತ್ಸವ ವೇಳೆಗೆ ಕಾಮಗಾರಿ ಪೂರ್ಣಗೊಳಿಸಿ ಉದ್ಘಾಟನೆ ಮಾಡುವಂತೆ ಸೂಚನೆ ನೀಡಿದ್ದಾರೆ. ಈ ಖಾದಿ ಕೇಂದ್ರದಲ್ಲಿ ಗಾಂಧೀಜಿಯವರು ನಮ್ಮ ಜೊತೆಗೆ ಇರುವಂತೆ ಡಿಜಿಟಲ್ ಭಾವಚಿತ್ರ, ಗಾಂಧೀಜಿಯವರ ಸತ್ಯಾಗ್ರಹದ ಹೋರಾಟದ ವಿಡಿಯೋ ತುಣುಕುಗಳನ್ನು ಒಳಗೊಂಡ ಡಿಜಿಟಲ್ ಪರದೆ ನಿರ್ಮಿಸಿ ಗಾಂಧೀಜಿಯವರ ಹೋರಾಟದ ಇತಿಹಾಸ ತಿಳಿಸಲಾಗುವುದು. ಪ್ರಸ್ತುತ ಈ ಕೇಂದ್ರದಲ್ಲಿ ಹೊಳೆನರಸೀಪುರದ ಸೊಸೈಟಿ ವತಿಯಿಂದ ಖಾದಿ ಬಟ್ಟೆ ಮತ್ತು ನೂಲುವ ಕೆಲಸ ನಿರ್ವಹಿಸ ಲಾಗುತ್ತಿದ್ದು, ಮುಂದಿನ ದಿನಗಳಲ್ಲಿ ಬದನವಾಳು ಖಾದಿ ಸೊಸೈಟಿ ನಿರ್ಮಿಸಿ ಆ ಸೊಸೈಟಿ ಮೂಲಕವೇ ಖಾದಿ ಬಟ್ಟೆ ತಯಾರಿಸಲಾಗುವುದು. ಜೊತೆಗೆ ಈ ಕೇಂದ್ರದಲ್ಲಿ ಹಗ್ಗ, ಬೆಂಕಿ ಪುಟ್ಟಣ ಸೇರಿದಂತೆ ಗ್ರಾಮೀಣ ಗುಡಿ ಕೈಗಾರಿಕೆಗಳನ್ನು ಸ್ಥಾಪಿಸಲಾಗುವುದು ಎಂದರು.

ಈ ವೇಳೆ ಮಾಜಿ ಶಾಸಕ ಕಳಲೆ ಕೇಶವಮೂರ್ತಿ, ತಹಸೀಲ್ದಾರ್ ಸ್ಮಿತಾರಾಮು, ಖಾದಿ ಮಂಡಳಿಯ ಶಬೀರ್, ಕೆಆರ್‌ಐಡಿಎಲ್ ಎಇಇ ಶರಣ್, ಎಇ ಲೋಕೇಶ್, ಮುಖಂಡರಾದ ಶ್ರೀನಿವಾಸಮೂರ್ತಿ, ಸೋಮು, ವಿಜಯ್ ಕುಮಾರ್, ಮಹೇಶ್ ಸೇರಿದಂತೆ ಹಲವರಿದ್ದರು.

ನಾನು ಪ್ರಾಮಾಣಿಕವಾಗಿ ಜನರ ಸೇವೆ ಮಾಡಿದ್ದೇನೆ

ಬೀಳ್ಕೊಡುಗೆ ಸಮಾರಂಭದಲ್ಲಿ ಆಹಾರ ಶಿರಸ್ತೇದಾರ್ ಚಿದಾನಂದ್

ತಿ.ನರಸೀಪುರ, ಮೇ 12– ನಾನು ಇಲ್ಲಿಯವರೆಗೆ ಸೇವೆ ಸಲ್ಲಿಸಿರುವ ಸ್ಥಳಗಳಲ್ಲಿ ಪ್ರಾಮಾಣಿಕವಾಗಿ ಜನರ ಸೇವೆ ಮಾಡಿದ್ದೇನೆ. ಸೇವೆಯೇ ನನ್ನ ಮುಖ್ಯ ಧ್ಯೇಯ ಎಂದು ಆಹಾರ ಶಿರಸ್ತೇದಾರ್ ಚಿದಾನಂದ್ ತಿಳಿಸಿದರು.



ಆಹಾರ ಶಿರಸ್ತೇದಾರ್ ಚಿದಾನಂದ ಅವರನ್ನು ಸನ್ಮಾನಿಸಲಾಯಿತು.

ಮುಂಬಡ್ತಿ ಪಡೆದು ಉಡುಪಿಗೆ ವರ್ಗಾವಣೆಗೊಂಡ ಹಿನ್ನೆಲೆಯಲ್ಲಿ ಪಟ್ಟಣದ ತಾಪಂ ಸಭಾಂಗಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ನ್ಯಾಯಬೆಲೆ ಅಂಗಡಿ ಮಾಲೀಕರಿಂದ ಸನ್ಮಾನ ಸ್ವೀಕರಿಸಿ ಮಾತನಾಡಿದ ಅವರು, ಕಳೆದ 2 ವರ್ಷ 8 ತಿಂಗಳಲ್ಲಿ ನಾನು ತಾಲೂಕಿನ ಜನರಿಗೆ ಉತ್ತಮ ಸೇವೆ ನೀಡಿದ್ದೇನೆ. ಯಾವುದೇ ರೀತಿಯ ಪಡಿತರ ಸಮಸ್ಯೆಗಳಿದ್ದರೂ ಅದನ್ನು ಸರಿದೂಗಿಸಿಕೊಂಡು ಕೆಲಸ ಮಾಡಿದ್ದೇನೆ ಎಂದರು.

ಪುರಸಭೆ ಮಾಜಿ ಅಧ್ಯಕ್ಷ ಹಾಗೂ ನ್ಯಾಯಬೆಲೆ ಅಂಗಡಿ ಮಾಲೀಕ ವೀರೇಶ್ ಮಾತನಾಡಿ, ಚಿದಾನಂದ ಅವರು ತಮ್ಮ ಸೇವಾವಧಿಯಲ್ಲಿ ಉತ್ತಮ ಕೆಲಸ ಮಾಡಿ ಸಾರ್ವಜನಿಕರ ಪ್ರಶಂಸೆಗೆ ಪಾತ್ರರಾಗಿದ್ದರು. ಇದೀಗ ಅವರು ಮುಂಬಡ್ತಿ ಪಡೆದು ಇಲ್ಲಿಂದ ಉಡುಪಿಗೆ ವರ್ಗಾವಣೆಯಾಗಿದ್ದು, ಅಲ್ಲಿಯೂ ಉತ್ತಮ ಕೆಲಸ ಮಾಡಿ ಒಳ್ಳೆಯ ಹೆಸರುಗಳಿಸಲಿ ಎಂದು ಆಶಿಸಿ ಅವರನ್ನು ನ್ಯಾಯಬೆಲೆ ಅಂಗಡಿ ಮಾಲೀಕರು ಸನ್ಮಾನಿಸಿ ಬೀಳ್ಕೊಟ್ಟಿದ್ದೇವೆ ಎಂದರು.

ಇದೇ ವೇಳೆ ನೂತನ ಶಿರಸ್ತೇದಾರ್ ಆಗಿ ಅಧಿಕಾರ ಸ್ವೀಕರಿಸಿದ ಬಸವರಾಜು ಅವರನ್ನು ನ್ಯಾಯಬೆಲೆ ಅಂಗಡಿ ಮಾಲೀಕರು ಸನ್ಮಾನಿಸಿದರು. ನ್ಯಾಯಬೆಲೆ ಅಂಗಡಿ ಮಾಲೀಕರಾದ ಕೆಂಪಯ್ಯನ ಹುಂಡಿ ಎಂ.ಶಿವಪ್ರಸಾದ್, ಮೂಗೂರು ಎಂ.ಕೆ.ಸಿದ್ದರಾಜು, ಬನ್ನೂರು ಗೋಪಾಲ್, ಮೂಗೂರು ಕುನ್ನಪ್ಪ, ದೊಡ್ಡಪುರ ಚಂದ್ರು, ಬಿಲಿಗೆರೆ ಹುಂಡಿ ಮಂಟೆಲಿಂಗಪ್ಪ, ಚಿನ್ನಬುದ್ಧಿ, ನಿಲಸೋಗೆ ಗುಂಡಣ್ಣ, ಫುಡ್ ಇನ್ಸ್‌ಪೆಕ್ಟರ್ ಮಾದೇಗೌಡ, ದಿನಕರ್ ಹಾಜರಿದ್ದರು.

ಕುರುಬೂರು ಪಿಎಸಿಎಸ್ ಕಟ್ಟಡ ಅನುದಾನಕ್ಕೆ ಮನವಿ

ತಿ.ನರಸೀಪುರ, ಮೇ 12– ತಾಲೂಕಿನ ಕುರುಬೂರು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ, ಉಪಾಧ್ಯಕ್ಷ ಹಾಗೂ ಸದಸ್ಯರ ನಿಯೋಗ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅವರನ್ನು ಭೇಟಿ ಮಾಡಿ, ಸಚಿವರನ್ನು ಸನ್ಮಾನಿಸಿ ಸಂಘದ ಕಚೇರಿ ನಿರ್ಮಾಣಕ್ಕೆ ಅನುದಾನ ನೀಡುವಂತೆ ಮನವಿ ಸಲ್ಲಿಸಿದರು.



ಕುರುಬೂರು ಪಿಎಸಿಎಸ್ ಆಡಳಿತ ಮಂಡಳಿ ಸದಸ್ಯರು ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅವರನ್ನು ಸನ್ಮಾನಿಸಿದರು.

ಮೈಸೂರಿನ ಸಚಿವರ ನಿವಾಸದಲ್ಲಿ ಅವರನ್ನು ಭೇಟಿ ಮಾಡಿದ ಮುಖಂಡರು ಕುರುಬೂರು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಕಟ್ಟಡ ತೀರಾ ಹಳೆಯದಾಗಿದ್ದು, ಕುಸಿದು ಬೀಳುವ ಹಂತದಲ್ಲಿದೆ. ಹೀಗಾಗಿ ಕೂಡಲೇ ನೂತನ ಕಟ್ಟಡ ನಿರ್ಮಾಣಕ್ಕೆ ಅಗತ್ಯ ಅನುದಾನ ನೀಡುವಂತೆ ಮನವಿ ಮಾಡಿದರು.

ಈ ವೇಳೆ ಸನ್ಮಾನ ಸ್ವೀಕರಿಸಿ ಮಾತನಾಡಿದ ಸಚಿವ ಹೆಚ್.ಸಿ.ಮಹದೇವಪ್ಪ, ಕುರುಬೂರು ಪಿಎಸಿಎಸ್ ಕಟ್ಟಡ ಕಾಮಗಾರಿಗೆ ಅಗತ್ಯ ಅನುದಾನ ನೀಡುವುದಾಗಿ ತಿಳಿಸಿದರು. ಅಲ್ಲದೇ ಪಟ್ಟಣ ಸೇರಿದಂತೆ ತಾಲೂಕಿನ ಸಮಗ್ರ ಅಭಿವೃದ್ಧಿಗೂ ವಿಶೇಷ ಅನುದಾನ ಕೊಡಿಸಿದ್ದೇನೆ. ಮತ್ತಷ್ಟು ಕಾಮಗಾರಿಗೂ ಶೀಘ್ರ ಹಣ ಕೊಡಿಸುವುದಾಗಿ ಭರವಸೆ ನೀಡಿದರು.

ಯಾವುದೇ ಅಭಿವೃದ್ಧಿ ಕಾರ್ಯ ಸ್ಥಗಿತಗೊಂಡಿದ್ದರೂ ಮೊದಲು ಅದನ್ನು ಕಾರ್ಯರೂಪಕ್ಕೆ ತರಬೇಕು ಎಂದ ಅವರು, ಜನರಿಗೆ ಮೂಲ ಸೌಕರ್ಯ ಒದಗಿಸಿ ಮಾದರಿ ಸಹಕಾರ ಸಂಘ ಮಾಡಲು ಎಲ್ಲರೂ ಒಟ್ಟಾಗಿ ದುಡಿಯಿರಿ ಎಂದರು.

ರಾಜಕೀಯ ಅಧಿಕಾರ ಕೊಟ್ಟಿರುವ ಕ್ಷೇತ್ರದ ಜನರ ಋಣವನ್ನು ಅಭಿವೃದ್ಧಿ ಕಾರ್ಯಗಳ ಮೂಲಕ ತೀರಿಸುತ್ತಿದ್ದೇವೆ. ಮುಂಬರುವ 2 ವರ್ಷಗಳ ಅಧಿಕಾರಾವಧಿಯಲ್ಲಿ ಮತ್ತಷ್ಟು ಅಭಿವೃದ್ಧಿ ಯೋಜನೆಗಳನ್ನು ತಂದು ನರಸೀಪುರವನ್ನು ಮಾದರಿ ಕ್ಷೇತ್ರವಾಗಿ ಅಭಿವೃದ್ಧಿ ಪಡಿಸುತ್ತೇವೆ ಎಂದು ಭರವಸೆ ನೀಡಿದರು.

ಈ ವೇಳೆ ಕುರುಬೂರು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಮಹದೇವಸ್ವಾಮಿ, ಉಪಾಧ್ಯಕ್ಷ ಕನ್ನಳ್ಳಿ ಶಿವಕುಮಾರ್, ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಶ್ರೀನಿವಾಸಮೂರ್ತಿ, ನಿರ್ದೇಶಕರಾದ ತೊಟ್ಟವಾಡಿ ರವಿ, ಆನಂದ ಮೂರ್ತಿ, ಶಿವಮಲ್ಲಪ್ಪ, ಶಾಂತ, ಗ್ರಾಪಂ ಮಾಜಿ ಅಧ್ಯಕ್ಷ ಕನ್ನಳ್ಳಿ ಲಕ್ಷ್ಮಣ, ಮುಖಂಡರಾದ ಬಸವಣ್ಣ ಮಾದೇವ ಸ್ವಾಮಿ, ಜಯಪ್ಪ ಇದ್ದರು.

ನಾಡಿಗೆ ಬಸವಾದಿ ಶರಣರ ಕೊಡುಗೆ ಅಪಾರ

ಸುತ್ತೂರು ಶ್ರೀಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಅಭಿಪ್ರಾಯ

ನಂಜನಗೂಡು, ಮೇ 12– ಬಸವಣ್ಣನವರು 12ನೇ ಶತಮಾನದಲ್ಲಿ ಸ್ಥಾಪಿಸಿದ ಅನುಭವ ಮಂಟಪ ಪ್ರಸ್ತುತ ಜಗತ್ತಿನ ಹಲವು ರಾಷ್ಟ್ರಗಳ ಪ್ರಜಾಪ್ರಭುತ್ವ ವ್ಯವಸ್ಥೆಗೆ ಬುನಾದಿಯಾಗಿದೆ ಎಂದು ಸುತ್ತೂರು ಶ್ರೀವೀರಸಿಂಹಾಸನಾ ಮಹಾಸಂಸ್ಥಾನ ಮಠಾಧ್ಯಕ್ಷ ಶ್ರೀಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ತಿಳಿಸಿದರು.



ಬಸವೇಶ್ವರ ಜಯಂತಿಯನ್ನು ಸುತ್ತೂರು ಶ್ರೀಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಉದ್ಘಾಟಿಸಿದರು.

ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಹಾಗೂ ವೀರಶೈವ ಲಿಂಗಾಯತ ಸಂಘ ಸಂಸ್ಥೆಗಳ ಸಹಯೋಗದೊಂದಿಗೆ ನಗರದ ಜೆಎಸ್‌ಎಸ್ ಮಂಗಳ ಮಂಟಪದಲ್ಲಿ ಮಂಗಳವಾರ ಆಯೋಜಿಸಿದ್ದ ವಿಶ್ವಗುರು ಬಸವೇಶ್ವರ ಜಯಂತಿಯಲ್ಲಿ ಮಾತನಾಡಿದ ಅವರು, ನಾಡಿಗೆ ಬಸವಾದಿ ಶರಣರಕೊಡುಗೆಗಳು ಅಭೂತ ಪೂರ್ವವಾಗಿದ್ದು, ಮನುಷ್ಯ ಧಾರ್ಮಿಕ ಮತ್ತು ಆಧ್ಯಾತ್ಮಿಕ ಚಿಂತನೆಯಿಂದ ಯಾವುದೇ ಸೇವೆ ಮಾಡಿದಾಗ ಅದು ಸಮಾಜಕ್ಕೆ ನೆರವಾಗಲಿದೆ. ಬಸವಣ್ಣನವರು ಕೈಗೊಂಡ ಸಮಾಜ ಸುಧಾರಣೆಯಿಂದಾಗಿ ಅವರು ಇಂದಿಗೂ ಪ್ರಸ್ತುತರಾಗಿದ್ದಾರೆ. ಇಂತಹ ಮಹಾತ್ಮರ ಸ್ಮರಣೆ ಬದುಕಿಗೆ ಹೊಸ ಚೈತನ್ಯವನ್ನುಂಟು ಮಾಡುತ್ತದೆ. ಹೀಗಾಗಿ ಮಹನೀಯರ ಸಂದೇಶಗಳನ್ನು ಪ್ರತಿಯೊಬ್ಬರೂ ಜೀವನದಲ್ಲಿ ಅಳವಡಿಸಿಕೊಳ್ಳುವ ಮೂಲಕ ಸಾರ್ಥಕ ಬದುಕು ಕಟ್ಟಿಕೊಳ್ಳಬೇಕು ಎಂದು ತಿಳಿಸಿದರು.

ಇದಕ್ಕೂ ಮುನ್ನ ನಗರದ ಶ್ರೀಕಂಠೇಶ್ವರಸ್ವಾಮಿ ದೇವಾಲಯದ ಮುಂಭಾಗ ಬೆಳ್ಳಿ ರಥದಲ್ಲಿ ಪ್ರತಿಷ್ಠಾಪಿಸಿದ್ದ ಬಸವೇಶ್ವರರ ಪುತ್ಥಳಿ, ಮಂಗಳ ವಾದ್ಯ, ನಂದಿಧ್ವಜ, ವೀರಗಾಸೆ ಕುಣಿತ, ಭಜನೆ ಹಾಗೂ ಜಾನಪದ ಕಲಾ ತಂಡಗಳ ಭವ್ಯ ಮೆರವಣಿಗೆಗೆ ಚಾಲನೆ ನೀಡಿದ ನವಿಲೂರು ಚುಂಚನಹಳ್ಳಿ ಮಠಾಧ್ಯಕ್ಷ ಶ್ರೀಚನ್ನಬಸವ ಸ್ವಾಮೀಜಿ ಮಾತನಾಡಿ, ಮನುಷ್ಯನಿಗೆ ಬೇಕಾಗಿರುವುದು ಶಾಂತಿ ಹಾಗೂ ನೆಮ್ಮದಿ. ಇದಕ್ಕಾಗಿ ಬಸವಣ್ಣನ ತತ್ವಾದರ್ಶಗಳನ್ನು ಪ್ರತಿಯೊಬ್ಬರೂ ಅಳವಡಿಸಿಕೊಳ್ಳಬೇಕಾಗಿದೆ ಎಂದರು. ಈ ಸಂದರ್ಭ ಶಾಸಕ ದರ್ಶನ್ ಧ್ರುವನಾರಾಯಣ್, ಮಾಜಿ ಶಾಸಕ ಕಳಲೆ ಕೇಶವಮೂರ್ತಿ ಮೆರವಣಿಗೆಯಲ್ಲಿ ಭಾಗಿಯಾದರು.

ಸಮಾರಂಭದಲ್ಲಿ ದೇವನೂರು ಗುರುಮಲ್ಲೇಶ್ವರ ದಾಸೋಹ ಮಠಾಧ್ಯಕ್ಷ ಶ್ರೀಮಹಾಂತ ಸ್ವಾಮೀಜಿ, ಮಲ್ಲನಮೂಲೆ ಮಠಾಧ್ಯಕ್ಷ ಶ್ರೀಇಮ್ಮಡಿ ಸಿದ್ಧಲಿಂಗ ಸ್ವಾಮೀಜಿ, ಶರಣ ಸಂಗಮ ಮಠಾಧ್ಯಕ್ಷ ಶ್ರೀನಾಗರಾಜೇಂದ್ರ ಸ್ವಾಮೀಜಿ, ಹುಲ್ಲಹಳ್ಳಿ ಮಠದ ಶ್ರೀಇಮ್ಮಡಿ ಚೆನ್ನಮಲ್ಲ ದೇಶಿಕೇಂದ್ರ ಸ್ವಾಮೀಜಿ, ಮಾಜಿ ಶಾಸಕ ಬಿ.ಹರ್ಷವರ್ಧನ್, ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ರಾಜ್ಯ ನಿರ್ದೇಶಕ ಚೆನ್ನಪ್ಪ, ತಾಲೂಕು ಅಧ್ಯಕ್ಷ ಕೆಂಪಣ್ಣ, ಪ್ರಧಾನ ಕಾರ್ಯದರ್ಶಿ ಶಿವಪ್ಪ ದೇವರು, ಖಜಾಂಚಿ ನಟೇಶ್, ಬಿಜೆಪಿ ಜಿಲ್ಲಾಧ್ಯಕ್ಷ ಸುಬ್ಬಣ್ಣ, ಜೆಡಿಎಸ್ ಮಾಜಿ ಜಿಲ್ಲಾಧ್ಯಕ್ಷ ನರಸಿಂಹಸ್ವಾಮಿ, ಎಸ್.ಮಹದೇವಯ್ಯ, ಎಪಿಎಂಸಿ ಮಾಜಿ ಸದಸ್ಯ ಗುರುಸ್ವಾಮಿ, ಮುಖಂಡರಾದ ಎನ್.ಸಿ.ಬಸವಣ್ಣ, ಎನ್.ಮಹೇಶ್, ವಕೀಲರಾದ ಬೊಮ್ಮಾಯಿ, ನಾಗೇಂದ್ರಪ್ಪ, ಮಹೇಶ್, ಬಿ.ಎಸ್.ಮಹದೇವಪ್ಪ, ವೀರಶೈವ ಮಹಾಸಭಾ ಯುವ ಘಟಕ ಅಧ್ಯಕ್ಷ ಮಹದೇವಸ್ವಾಮಿ ಮತ್ತಿತರರಿದ್ದರು.

> ನಮ್ಮ ಬದುಕಿನ ಮೌಲ್ಯಗಳನ್ನು ಹೆಚ್ಚಿಸಿಕೊಳ್ಳುವ ಸಲುವಾಗಿ ಬಸವ ಜಯಂತಿ ಆಚರಣೆ ಅವಶ್ಯಕವಾಗಿದೆ. ಜಗತ್ತಿನಲ್ಲಿ ಹಲವು ಮಂದಿ ಧರ್ಮ ಸ್ಥಾಪಕರು ಹಾಗೂ ದಾರ್ಶನಿಕರಿದ್ದರೂ ಬಸವಣ್ಣವರು ತಮ್ಮ ಅಸಾಧಾರಣ ಸೇವೆಯ ಮೂಲಕ ಸಮಾಜದಲ್ಲಿ ಅತ್ಯಂತ ದೊಡ್ಡ ಸ್ಥಾನವನ್ನು ಪಡೆದುಕೊಂಡಿದ್ದಾರೆ. – ಶ್ರೀಶರತ್ಚಂದ್ರ ಸ್ವಾಮೀಜಿ, ಮೈಸೂರಿನ ಕುಂದೂರು ಮಠ.

ಸರ್ಕಾರಿ ಶಾಲೆಗಳನ್ನು ಮುಚ್ಚುತ್ತಿರುವುದನ್ನು ವಿರೋಧಿಸಿ

ಕೋಟೆಯಲ್ಲಿ ವಿವಿಧ ಸಂಘಟನೆಗಳಿಂದ ಪ್ರತಿಭಟನೆ

ಹೆಚ್.ಡಿ.ಕೋಟೆ, ಮೇ 12– ರಾಜ್ಯ ಸರ್ಕಾರವು ಮ್ಯಾಗ್ನೆಟ್ ಯೋಜನೆ ಅಡಿ ಕೋಟೆ ಮತ್ತು ಸರಗೂರಿನಲ್ಲಿ 40ಕ್ಕೂ ಹೆಚ್ಚು ಸರ್ಕಾರಿ ಶಾಲೆಗಳನ್ನು ಮುಚ್ಚುತ್ತಿರುವುದನ್ನು ವಿರೋಧಿಸಿ ಪಟ್ಟಣದಲ್ಲಿ ವಿವಿಧ ಸಂಘಟನೆಗಳ ಮುಖಂಡರು ಪ್ರತಿಭಟನೆ ನಡೆಸಿದರು.



ವಿವಿಧ ಸಂಘಟನೆಗಳ ಮುಖಂಡರು ಪ್ರತಿಭಟನೆ ನಡೆಸಿದರು.

ಪಟ್ಟಣದ ತಾಲೂಕು ಕಚೇರಿ ಎದುರು ಜಮಾಯಿಸಿದ ಎಐಡಿಎಸ್‌ಓ ಅಖಿಲ ಭಾರತ ಪ್ರಜಾ ತಾಂತ್ರಿಕ ವಿದ್ಯಾರ್ಥಿ ಸಂಘಟನೆ ಮತ್ತು ಸಾರ್ವಜನಿಕ ಶಿಕ್ಷಣ ಉಳಿಸಿ ಸಮಿತಿ, ಪೋಷಕರು, ವಿದ್ಯಾರ್ಥಿಗಳು ಹಾಗೂ ಗ್ರಾಮಸ್ಥರು ಪ್ರತಿಭಟನೆ ನಡೆಸಿ ಆಕ್ರೋಶ ವ್ಯಕ್ತಪಡಿಸಿದರು.

ಎಐಡಿಎಸ್‌ಓ ರಾಜ್ಯ ಉಪಾಧ್ಯಕ್ಷೆ ಅಪೂರ್ವ ಮಾತನಾಡಿ, 2025ರ ಅ.15, ಡಿ.30ರಂದು ರಾಜ್ಯ ಸರ್ಕಾರ ಬಿಡುಗಡೆ ಮಾಡಿರುವ ಆದೇಶಗಳ ಪ್ರಕಾರ, ರಾಜ್ಯಾದ್ಯಂತ ಗ್ರಾಪಂಗೆ ಒಂದು ಸರ್ಕಾರಿ ಶಾಲೆಯಂತೆ, ಕೇವಲ 6 ಸಾವಿರ ಶಾಲೆಗಳನ್ನು ತೆರೆದು 40 ಸಾವಿರ ಸರ್ಕಾರಿ ಶಾಲೆಗಳನ್ನು ಮುಚ್ಚಿ ಕೆಪಿಎಸ್ ಮ್ಯಾಗ್ನೆಟ್ ಶಾಲೆಯನ್ನು ಪ್ರಾರಂಭಿಸಿದ ನಂತರ ಸುತ್ತಲಿನ 5 ಕಿಲೋಮೀಟರ್ ವ್ಯಾಪ್ತಿಯ ಉಳಿದ ಎಲ್ಲಾ ಸರ್ಕಾರಿ ಶಾಲೆಗಳನ್ನು ಮುಚ್ಚುವ ಹುನ್ನಾರ ಸರ್ಕಾರದ್ದಾಗಿದೆ. ರಾಜ್ಯದ ಎಲ್ಲಾ ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಒಂದನೇ ತರಗತಿಯಿಂದಲೇ ಆಂಗ್ಲ ಮಾಧ್ಯಮವನ್ನು ಆರಂಭಿಸಲು ಸರ್ಕಾರವು ಆದೇಶ ನೀಡಿದೆ. ಈ ಮೂಲಕ ಕನ್ನಡ ಶಾಲೆಗಳನ್ನು ಮುಚ್ಚಲು ಸರ್ಕಾರ ತಯಾರಿ ನಡೆಸುತ್ತಿದೆ ಎಂದು ಆರೋಪಿಸಿದರು.

ಮೈಸೂರು ಜಿಲ್ಲೆಯಲ್ಲಿ ಆರ್ಥಿಕ ಮತ್ತು ಶೈಕ್ಷಣಿಕವಾಗಿ ತಾಲೂಕು ಹಿಂದುಳಿದಿದ್ದು, ಹೀಗಿರುವಾಗ ಶಾಲೆಗಳನ್ನು ಮುಚ್ಚಿದರೆ ಮಕ್ಕಳ ಪರಿಸ್ಥಿತಿ ಏನಾಗಬೇಕು. ತಾಲೂಕಿನಲ್ಲಿ ಬಡವರು, ದಲಿತರು ಮತ್ತು ಆದಿವಾಸಿಗಳೇ ಹೆಚ್ಚಾಗಿ ವಾಸಿಸುತ್ತಾರೆ. ಇನ್ನೂ ಈ ಭಾಗಗಳಲ್ಲಿ ಮೂಲ ಸೌಕರ್ಯಗಳಿಲ್ಲದೆ ಈಗಾಗಲೇ ಹಲವಾರು ಸಮಸ್ಯೆಗಳಿಂದ ಬಹುತೇಕ ವಿದ್ಯಾರ್ಥಿಗಳು ತಮ್ಮ ಪ್ರೌಢ ಶಿಕ್ಷಣವನ್ನು ಮುಗಿಸದೆ ದುಡಿಮೆ ಕಡೆ ಮುಖ ಮಾಡುತ್ತಿದ್ದಾರೆ ಎಂದರು.

ರೈತ ಸಂಘದ ಜಿಲ್ಲಾ ಉಪಾಧ್ಯಕ್ಷ ಪಳನಿ ಸ್ವಾಮಿ ಮಾತನಾಡಿ, ಸರ್ಕಾರ ಕಾಲ ಕ್ರಮೇಣ ಸರ್ಕಾರಿ ಶಾಲೆಗಳ ಸಂಖ್ಯೆ ಕಡಿಮೆ ಮಾಡಿ, ಸರ್ಕಾರಿ ಶಾಲೆಗಳನ್ನು ನಿರ್ನಾಮ ಮಾಡಲು ಟೊಂಕಕಟ್ಟಿ ನಿಂತಿದೆ. ಹೀಗಾಗಿ ನಮ್ಮ ರೈತ ಸಂಘಟನೆಯಿಂದ ಕೆಪಿಎಸ್ ಮ್ಯಾಗ್ನೆಟ್ ಯೋಜನೆಗೆ ತೀವ್ರ ವಿರೋಧವಿದೆ ಎಂದರು.

ಪ್ರತಿಭಟನೆಗೂ ಮುನ್ನ ಬಿಇಓ ಕಚೇರಿಯಿಂದ ಪ್ರತಿಭಟನಾಕಾರರು ಮೆರವಣಿಗೆ ಮೂಲಕ ಪಟ್ಟಣದ ಆಡಳಿತಸೌಧ ತಲುಪಿ ತಾಲೂಕು ಶಿರಸ್ತೇದಾರ್ ಮಹೇಶ್, ಬಿಇಓ ಕಚೇರಿಯ ಸಿಇಓ ನಂಜರಾಜು ಅವರಿಗೆ ಮನವಿ ಸಲ್ಲಿಸಿದರು.

ಪ್ರತಿಭಟನೆಯಲ್ಲಿ ಎಐಕೆಕೆಎಂಎಸ್ ರೈತ ಸಂಘಟನೆಯ ರಾಜ್ಯ ನಾಯಕ ಹೆಚ್.ಪಿ.ಶಿವಪ್ರಕಾಶ್, ಎಐಯುಟಿಯುಸಿ ಕಾರ್ಮಿಕ ಸಂಘಟನೆಯ ಮುಖಂಡ ಹರೀಶ್, ಎಐಎಂಎಸ್‌ಎಸ್ ಮಹಿಳಾ ಹೋರಾಟಗಾರರಾದ ಸೀಮಾ, ಆದಿವಾಸಿ ಸಂಘಟನೆಯ ಸುನಿಲ್, ಯುವಜನ ಸಂಘಟನೆಯ ಸುಮಾ, ಮಹಾರಾಣಿ ಕಾಲೇಜಿನ ನಿವೃತ್ತ ಪ್ರಾಧ್ಯಾಪಕಿ ಲತಾ, ನಿತಿನ್, ಸ್ವಾತಿ, ಚಂದನ, ಚಂದ್ರಿಕಾ, ಅಭಿಷೇಕ್, ದೀಕ್ಷಿತ, ಪೂರ್ಣಿಮಾ, ನೀತುಶ್ರೀ, ಬಸವರಾಜು ಸೇರಿದಂತೆ ಇತರರಿದ್ದರು.

ಅಂತಾರಾಷ್ಟ್ರೀಯ ಶುಶ್ರೂಷಕ ದಿನಾಚರಣೆ



ಹೆಚ್.ಡಿ.ಕೋಟೆ, ಮೇ 12– ಪಟ್ಟಣದ ಸಾರ್ವಜನಿಕ ಆಸ್ಪತ್ರೆಯಲ್ಲಿ ಅಂತಾರಾಷ್ಟ್ರೀಯ ಶುಶ್ರೂಷಕ ದಿನಾಚರಣೆ, ಫ್ಲಾರೆನ್ಸ್ ನೈಟಿಂಗೇಲ್ ಅವರ ಜಯಂತಿ ಆಚರಿಸಲಾಯಿತು.

ಈ ವೇಳೆ ಶುಶ್ರೂಷಕ ಅಧಿಕಾರಿ ಪದ್ಮಾವತಿ ಅವರನ್ನು ಆಸ್ಪತ್ರೆಯ ಆಡಳಿತ ವೈದ್ಯಾಧಿಕಾರಿ ಡಾ.ಪೂರ್ಣಿಮಾ, ಶುಶ್ರೂಷಕ ಜಿಲ್ಲಾ ಸಂಘದ ಅಧ್ಯಕ್ಷ ಪ್ರಶಾಂತ್ ಕುಮಾರ್ ಗಂಗೊಳ್ಳಿ, ವೈದ್ಯರಾದ ಡಾ.ಶಿವಕುಮಾರ್, ಡಾ.ರಶ್ಮಿ, ಡಾ.ಧನಲಕ್ಷ್ಮಿ, ಸಂಘದ ಪದಾಧಿಕಾರಿಗಳಾದ ಮಧು, ರಘುಕುಮಾರ್, ಸರೋಜಿನಿ, ಅಂಬಿಕಾ ಹಾಗೂ ಇತರರು ಸನ್ಮಾನಿಸಿದರು.

ಸ್ನೇಹ, ಕಾಲದ ಪರೀಕ್ಷೆ ಗೆಲ್ಲುವ ಅಮೂಲ್ಯ ಬಾಂಧವ್ಯ

ಹಳೆಯ ವಿದ್ಯಾರ್ಥಿಗಳ ಸಂಘದ ಟಿ.ಎಸ್.ಲೋಕೇಶ್

ತಿ.ನರಸೀಪುರ, ಮೇ 12– ಸ್ನೇಹ ಕಾಲದ ಪರೀಕ್ಷೆಯನ್ನು ಗೆಲ್ಲುವ ಅಮೂಲ್ಯ ಬಾಂಧವ್ಯ. 50 ವರ್ಷಗಳ ನಂತರವೂ ನಮ್ಮ ಹೃದಯಗಳು ಒಂದಾಗಿರುವುದು ಇದಕ್ಕೆ ಜೀವಂತ ಸಾಕ್ಷಿ ಎಂದು ಹಳೆಯ ವಿದ್ಯಾರ್ಥಿಗಳ ಸಂಘದ ಟಿ.ಎಸ್.ಲೋಕೇಶ್ ತಿಳಿಸಿದರು.



ಹಳೆಯ ವಿದ್ಯಾರ್ಥಿಗಳ ಸಮ್ಮಿಲನ ಕಾರ್ಯಕ್ರಮದಲ್ಲಿ ಹಿರಿಯ ಶಿಕ್ಷಕರನ್ನು ಆತ್ಮೀಯವಾಗಿ ಸನ್ಮಾನಿಸಲಾಯಿತು.

ತಾಲೂಕಿನ ತುರುಗನೂರು ಗ್ರಾಮದ ಎನ್‌ಸಿಆರ್ ಶಾಲೆ ಆವರಣದಲ್ಲಿ 1991, 1992ನೇ ಸಾಲಿನ ಶ್ರೀಮಲ್ಲಿಕಾರ್ಜುನ ಪ್ರೌಢಶಾಲೆ, ತುರಗನೂರು ಸಹಪಾಠಿಗಳ ಸ್ನೇಹ ಬಳಗದಿಂದ ಆಯೋಜಿಸಿದ್ದ ಹಳೆಯ ವಿದ್ಯಾರ್ಥಿಗಳ ಸಮ್ಮಿಲನ ಕಾರ್ಯಕ್ರಮದಲ್ಲಿ ಹಿರಿಯ ಶಿಕ್ಷಕರಿಗೆ ಗೌರವ ಸಲ್ಲಿಸಿ ಅವರು ಮಾತನಾಡಿದರು.

ಇಂದು ನಾವು ಸೇರಿರುವ ಈ ಕ್ಷಣ ಕೇವಲ ಒಂದು ಕಾರ್ಯಕ್ರಮವಲ್ಲ. ಇದು 50 ವರ್ಷಗಳ ಸ್ನೇಹದ ಸುವರ್ಣ ಮಹೋತ್ಸವ. ಅರ್ಧ ಶತಮಾನ ಕಳೆದರೂ ನಮ್ಮ ಹೃದಯಗಳಲ್ಲಿ ಶಾಲಾ ದಿನಗಳ ನೆನಪುಗಳು ಇನ್ನೂ ಹಸಿರಾಗಿವೆ. ಕಾಲವು ನಮ್ಮ ಕೂದಲನ್ನು ಬೆಳ್ಳಗಾಗಿಸಿದ್ದರೂ, ನಮ್ಮ ಮನಸ್ಸಿನ ಸ್ನೇಹದ ಬಣ್ಣವನ್ನು ಮಸುಕಾಗಿಸಲು ಸಾಧ್ಯವಾಗಿಲ್ಲ. ಶಾಲೆಯ ಆ ದಿನಗಳು ನಮ್ಮ ಜೀವನದ ಅತ್ಯಂತ ಸುಂದರ ಅಧ್ಯಾಯ. ಅಲ್ಲಿ ನಾವು ಕೇವಲ ಪಾಠಗಳನ್ನು ಕಲಿತಿಲ್ಲ. ಬದುಕನ್ನು ಕಲಿತೆವು. ಸ್ನೇಹವನ್ನು ಅರಿತೆವು. ಒಗ್ಗಟ್ಟಿನ ಮಹತ್ವವನ್ನು ತಿಳಿದೆವು. ಪರಸ್ಪರ ಸಹಕಾರ, ಗೌರವ ಮತ್ತು ಪ್ರೀತಿಯ ಮೌಲ್ಯಗಳನ್ನು ನಮ್ಮ ಗುರುಗಳು ನಮ್ಮೊಳಗೆ ಬಿತ್ತಿದರು. ಶಾಲೆಯ ಆವರಣ, ತರಗತಿಯ ಆ ಕುರ್ಚಿಗಳು, ಶಿಕ್ಷಕರ ಮಾರ್ಗದರ್ಶನ, ಸ್ನೇಹಿತರೊಡನೆ ಹಂಚಿಕೊಂಡ ಸಂತೋಷದ ಕ್ಷಣಗಳು ಇವೆಲ್ಲವೂ ನಮ್ಮ ಜೀವನದ ಅತ್ಯಂತ ಅಮೂಲ್ಯ ಸಂಪತ್ತಾಗಿವೆ. 50 ವರ್ಷಗಳ ನಂತರವೂ ನಮ್ಮ ಸ್ನೇಹದ ನಂಟು ಅಷ್ಟೇ ಗಟ್ಟಿಯಾಗಿ ಉಳಿದಿರುವುದು ನಿಜಕ್ಕೂ ಹೆಮ್ಮೆಯ ವಿಷಯ. ಈ ಸಮ್ಮಿಲನವು ಕೇವಲ ಹಳೆಯ ನೆನಪುಗಳನ್ನು ಮೆಲುಕು ಹಾಕುವ ಸಂದರ್ಭವಲ್ಲ. ಮುಂದಿನ ಪೀಳಿಗೆಗೆ ಸ್ನೇಹ, ಬಾಂಧವ್ಯ ಮತ್ತು ಒಗ್ಗಟ್ಟಿನ ಮಹತ್ವ ಸಾರುವ ಸಂದೇಶವಾಗಿದೆ. ನಾವೆಲ್ಲರೂ ಜೀವನದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ್ದರೂ, ನಮ್ಮ ಮೂಲ, ನಮ್ಮ ಶಾಲೆ, ನಮ್ಮ ಸ್ನೇಹಿತರನ್ನು ಎಂದಿಗೂ ಮರೆಯಲಿಲ್ಲ. ಈ ಸುವರ್ಣ ಕ್ಷಣದಲ್ಲಿ ನಮ್ಮನ್ನು ರೂಪಿಸಿದ ಗುರುಗಳನ್ನು ಕೃತಜ್ಞತೆಯಿಂದ ಸ್ಮರಿಸೋಣ. ಅವರು ನೀಡಿದ ಶಿಕ್ಷಣ, ಸಂಸ್ಕಾರ, ಮತ್ತು ಮೌಲ್ಯಗಳೇ ನಮ್ಮ ಬದುಕಿನ ದಾರಿದೀಪವಾಗಿವೆ. ಮುಂದಿನ ದಿನಗಳಲ್ಲಿಯೂ ಇದೇ ಸ್ನೇಹ, ಇದೇ ಒಗ್ಗಟ್ಟು, ಇದೇ ಪ್ರೀತಿ ನಮ್ಮೆಲ್ಲರ ನಡುವೆ ಸದಾ ಉಳಿಯಲಿ. ಇಂತಹ ಸಮ್ಮಿಲನಗಳು ನಮ್ಮ ಬಾಂಧವ್ಯವನ್ನು ಇನ್ನಷ್ಟು ಗಟ್ಟಿಗೊಳಿಸಲಿ ಎಂದು ಆಶಿಸಿದರು.

ಶಾಲೆಯ ದಿನಗಳಲ್ಲಿ ನಾವು ಹಂಚಿಕೊಂಡ ಆ ಸಂತಸದ ಕ್ಷಣಗಳು ಇಂದು ಮತ್ತೆ ನಮ್ಮ ಮುಂದೆ ಜೀವಂತವಾಗಿ ನಿಂತಿವೆ. ತರಗತಿಯಲ್ಲಿ ನಡೆದ ತುಂಟಾಟಗಳು, ಆಟದ ಮೈದಾನದಲ್ಲಿ ಕಳೆಯುತ್ತಿದ್ದ ಸಮಯ, ಪರೀಕ್ಷೆಯ ಆತಂಕ, ಫಲಿತಾಂಶದ ನಂತರದ ಹರ್ಷ ಈ ಎಲ್ಲಾ ನೆನಪುಗಳು ನಮ್ಮ ಮನಸ್ಸನ್ನು ಮತ್ತೊಮ್ಮೆ ಬಾಲ್ಯದ ದಿನಗಳಿಗೆ ಕರೆದೊಯ್ಯುತ್ತವೆ ಎಂದರು.

ಹಿರಿಯ ನಿವೃತ್ತ ಶಿಕ್ಷಕರಾದ ಗೋವಿಂದೇಗೌಡ ಹಾಗೂ ಸುರೇಶ್ ಅವರನ್ನು ಆತ್ಮೀಯವಾಗಿ ಸನ್ಮಾನಿಸಲಾಯಿತು. ಕಾರ್ಯಕ್ರಮದಲ್ಲಿ ಅಗಲಿದ ಶಿಕ್ಷಕರಾದ ದೇವರಸೇಗೌಡ್ರು, ಎಲ್.ಸುಂದರ್ ರಾಜ್, ಹೆಚ್.ನಾಗರಾಜ್, ಸಿ.ಚಾಮಯ್ಯ, ಶ್ರೀಗೋಪಾಲ್ ಅವರ ಕುಟುಂಬದವರು, ಹಳೇ ವಿದ್ಯಾರ್ಥಿಗಳಾದ ಬೃಂದ, ಪದ್ಮ, ದೊಡ್ಡಸ್ವಾಮಿ, ರಾಜೇಶ್, ಮಲ್ಲೇಶ್, ಸಿದ್ದರಾಜು, ಲೋಕೇಶ್, ನಾಗೇಂದ್ರ, ಪುಟ್ಟೇಗೌಡ, ರವಿ, ಸಂತೋಷ್, ಚಂದ್ರಪ್ಪ, ಚಂದ್ರ, ಮನೋಜ್ ಕುಮಾರ್, ಸುಬ್ಬೇಗೌಡ, ಶಿವನಂಜು ಇತರರಿದ್ದರು.

ದೇವರಸನಹಳ್ಳಿ ಗ್ರಾಪಂನಲ್ಲಿ ಕೋಟ್ಯಾಂತರ ರೂ. ಅವ್ಯವಹಾರ

ತಪ್ಪಿತಸ್ಥರ ವಿರುದ್ಧ ಕ್ರಮಕ್ಕೆ ಒತ್ತಾಯಿಸಿ ಗ್ರಾಮಸ್ಥರ ಪ್ರತಿಭಟನೆ

ನಂಜನಗೂಡು, ಮೇ 12– ತಾಲೂಕಿನ ದೇವರಸನಹಳ್ಳಿ ಗ್ರಾಪಂನಲ್ಲಿ 2 ಕೋಟಿಗೂ ಹೆಚ್ಚು ಅವ್ಯವಹಾರ ನಡೆದಿದ್ದು, ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿ ಗ್ರಾಮಸ್ಥರು ನಗರದಲ್ಲಿ ಪ್ರತಿಭಟನೆ ನಡೆಸಿ ತಾಪಂ ಇಓಗೆ ಮನವಿ ಸಲ್ಲಿಸಿದರು.



ಅವ್ಯವಹಾರ ಸಂಬಂಧ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿ ಗ್ರಾಮಸ್ಥರು ಪ್ರತಿಭಟನೆ ನಡೆಸಿದರು.

ನಗರದ ತಾಪಂ ಎದುರು ಮಂಗಳವಾರ ಜಮಾಯಿಸಿದ ಪ್ರತಿಭಟನಾಕಾರರು ಗ್ರಾಪಂನಲ್ಲಿ ಅವ್ಯವಹಾರ ನಡೆಸಿರುವ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಗ್ರಾಪಂ ಮಾಜಿ ಸದಸ್ಯ ಮಹದೇವ್ ಮಾತನಾಡಿ, ಗ್ರಾಪಂ ವ್ಯಾಪ್ತಿಯ ಗೋಳೂರು, ದೇವರಸನಹಳ್ಳಿ, ಹೊಸೂರು, ಕೆಬ್ಬೇಪುರ, ಉಪ್ಪಿನಹಳ್ಳಿ ಹಾಗೂ ಕೋಡಿ ನರಸೀಪುರ ಗ್ರಾಮಗಳ ಅಭಿವೃದ್ಧಿಗೆ 2020ರಿಂದ 25ನೇ ಸಾಲಿನವರೆಗೆ ಬಿಡುಗಡೆಯಾಗಿರುವ ಅನುದಾನ ದುರ್ಬಳಕೆಯಾಗಿದ್ದು, ಗ್ರಾಪಂನಲ್ಲಿ 2 ಕೋಟಿಗೂ ಹೆಚ್ಚು ಅವ್ಯವಹಾರ ನಡೆದಿದೆ ಎಂದು ಪಂಚಾಯತ್ ರಾಜ್ ಇಲಾಖೆ ಹಿರಿಯ ಅಧಿಕಾರಿಗಳಿಗೆ ಸಾಕಷ್ಟು ಬಾರಿ ದೂರು ನೀಡಿದರೂ ಯಾವುದೇ ಪ್ರಯೋಜನವಾಗಿಲ್ಲ. ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳುವ ಬದಲಿಗೆ ಅಧಿಕಾರಿಗಳು ಅವರನ್ನು ರಕ್ಷಿಸುತ್ತಿದ್ದಾರೆ. 14 ಮತ್ತು 15ನೇ ಹಣಕಾಸು ಯೋಜನೆಯ ಅನುದಾನದಲ್ಲಿ ಒಂದೇ ಕಾಮಗಾರಿಗೆ ಎರಡು ಬಿಲ್ ಮಂಜೂರು ಮಾಡಲಾಗಿದೆ. ರಸ್ತೆ ಕಾಮಗಾರಿ, ವಿದ್ಯುತ್ ಬಲ್ಬ್ ಖರೀದಿ, ಡಸ್ಟ್ ಬಿನ್ ಖರೀದಿ ಹಾಗೂ ಕುಡಿಯುವ ನೀರು ಪೂರೈಕೆಗೆ ಸಾಮಾಗ್ರಿಗಳ ಖರೀದಿಯಲ್ಲಿ ನಕಲಿ ಬಿಲ್ ತಯಾರಿಸಿ ಹಣ ಮಂಜೂರು ಮಾಡಲಾಗಿದೆ ಎಂದರು.

ಗ್ರಾಪಂ ವ್ಯಾಪ್ತಿಯ ವಿವಿಧ ಹಳ್ಳಿಗಳಲ್ಲಿ ಸ್ಮಶಾನದ ಅಭಿವೃದ್ಧಿ ಹೆಸರಿನಲ್ಲಿ ಬೋಗಸ್ ಬಿಲ್ ಮಾಡಲಾಗಿದೆ. ಅಲ್ಲದೇ ಖಾಸಗಿ ಸಂಸ್ಥೆಯವರು ಸಿಎಸ್‌ಆರ್ ಅನುದಾನದಲ್ಲಿ ಮಾಡಿರುವ ಕೆರೆ ಅಭಿವೃದ್ಧಿ ಹಾಗೂ ಶಾಲಾಭಿವೃದ್ಧಿಗೂ ಪಂಚಾಯತ್‌ನಲ್ಲಿ ನಕಲಿ ಬಿಲ್ ತಯಾರಿಸಿ ಹಣ ಮಂಜೂರು ಮಾಡಲಾಗಿದೆ. ದೇವರಸನಹಳ್ಳಿ ಗ್ರಾಮದ ರಸ್ತೆ ಅಭಿವೃದ್ಧಿ ಕಾಮಗಾರಿ ಸಹ ಕಳಪೆಯಿಂದ ಕೂಡಿದ್ದು, ಹಿರಿಯ ಅಧಿಕಾರಿಗಳ ನೇತೃತ್ವದಲ್ಲಿ ಗುಣಮಟ್ಟ ಪರಿಶೀಲನೆ ಮಾಡಬೇಕು. ಈ ಎಲ್ಲಾ ಬೇಡಿಕೆಗಳ ಗಮನ ಸೆಳೆಯುವ ಸಲುವಾಗಿ ತಾಪಂ ಎದುರು ಪ್ರತಿಭಟನೆ ನಡೆಸಲಾಗಿದ್ದು, ಸೂಕ್ತ ತನಿಖೆ ನಡೆಸಿ ತಪ್ಪಿತಸ್ಥರ ವಿರುದ್ಧ ಕ್ರಮಕ್ಕೆ ಮುಂದಾಗದಿದ್ದಲ್ಲಿ ಮುಂಬರುವ ದಿನಗಳಲ್ಲಿ ಹೋರಾಟ ತೀವ್ರಗೊಳಿಸುವುದಾಗಿ ಎಚ್ಚರಿಸಿದರು.

ಈ ವೇಳೆ ಸ್ಥಳಕ್ಕಾಗಮಿಸಿದ ತಾಪಂ ಇಓ ಜೆರಾಲ್ಡ್ ರಾಜೇಶ್ ಪ್ರತಿಭಟನಾಕಾರರಿಂದ ಮನವಿ ಸ್ವೀಕರಿಸಿ ಮಾತನಾಡಿ, ಈ ಸಂಬಂಧ ಹಿರಿಯ ಅಧಿಕಾರಿಗಳ ಗಮನ ಸೆಳೆದು ತ್ವರಿತವಾಗಿ ಕ್ರಮ ಕೈಗೊಳ್ಳುವ ಭರವಸೆ ನೀಡಿದ ಬಳಿಕ ಪ್ರತಿಭಟನಾಕಾರರು ಧರಣಿ ಹಿಂತೆಗೆದುಕೊಂಡರು.

ಪ್ರತಿಭಟನೆಯಲ್ಲಿ ಗ್ರಾಮ ಪಂಚಾಯತ್ ಮಾಜಿ ಸದಸ್ಯರಾದ ಮಹದೇವ್, ನಿಧಿ ಸುರೇಶ್, ನಾಗಯ್ಯ, ರಾಜು, ಮಹದೇವಸ್ವಾಮಿ, ಕರಿಯಯ್ಯ, ಕೆಲ್ಲಯ್ಯ ಇತರರಿದ್ದರು.

ಯುವಜನರಲ್ಲಿ ಭಾರತದ ಭವಿಷ್ಯ ಅಡಗಿದೆ

• ಮಾಜಿ ಸಚಿವೆ ಉಮಾಶ್ರೀ ಅಭಿಮತ • ಸಂವಿಧಾನದ ಆಶಯದಂತೆ ಎಲ್ಲಾ ಒಗ್ಗೂಡಬೇಕು

ಮೈಸೂರು,ಮೇ.12(ಎಂಟಿವೈ)– ಯುವ ಸಮೂಹ ಸಂವಿಧಾನದ ಆಶಯಗಳನ್ನು ಈಡೇರಿಸುವ ಪ್ರಬಲ ಶಕ್ತಿಯಾಗಿರುವುದರಿಂದ ಯುವ ಜನರ ಮೇಲೆ ಹೆಚ್ಚಿನ ಜವಾಬ್ದಾರಿ ಇದೆ ಎಂದು ಮಾಜಿ ಸಚಿವೆ ಉಮಾಶ್ರೀ ಅಭಿಪ್ರಾಯಪಟ್ಟರು.

ಮೈಸೂರು ವಿಶ್ವವಿದ್ಯಾನಿಲಯದ ಕುವೆಂಪು ಕನ್ನಡ ಅಧ್ಯಯನ ಕೇಂದ್ರದ ಬಿಎಂಶ್ರೀ ಸಭಾಂಗಣದಲ್ಲಿ ಡಾ. ಬಿ.ಆರ್.ಅಂಬೇಡ್ಕರ್ ಜಯಂತಿ ಅಂಗವಾಗಿ 'ಅರಿವು' ಸಂಶೋಧನಾ ವಿದ್ಯಾರ್ಥಿ ಆಯೋಜಿಸಿದ್ದ ಡಾ.ಅಂಬೇಡ್ಕರ್ ವಿಚಾರಗಳು: ಚಿಂತನ–ಮಂಥನ' ವಿಚಾರ ಗೋಷ್ಠಿಯನ್ನು ಉದ್ಘಾಟಿಸಿ ಮಾತನಾಡಿದ ಅವರು, ವಿಶ್ವವಿದ್ಯಾನಿಲಯಗಳಲ್ಲಿ ಉನ್ನತ ಶಿಕ್ಷಣ ಪಡೆಯುತ್ತಿರುವ ವಿದ್ಯಾರ್ಥಿಗಳೇ ದೇಶದ ಮುಂದಿನ ಪ್ರಜೆಗಳಾಗಿದ್ದು, ಇವರ ಮೇಲೆ ಜವಾಬ್ದಾರಿ ಹೆಚ್ಚಾಗಿದೆ. ಯುವ ಸಮೂಹ ದೇಶದ ಸಮಗ್ರತೆ, ಐಕ್ಯತೆ, ಸಹಿಷ್ಣುತೆಯಂತಹ ಆಶಯಗಳನ್ನು ಈಡೇರಿಸಬೇಕಾದ ಜವಾಬ್ದಾರಿ ನಿಭಾಯಿಸಬೇಕು. ಸಂವಿಧಾನದ ಮೂಲಕವೇ ಬದುಕನ್ನು ಕಟ್ಟಿಕೊಂಡು, ಭಾರತ ದೇಶವನ್ನು ಇನ್ನಷ್ಟು ಸದೃಢಗೊಳಿಸಿ, ನಾಡಿನ ಅಸ್ಮಿತೆಯನ್ನು ಉಳಿಸಬೇಕು ಎಂದು ಸಲಹೆ ನೀಡಿದರು.

ನಮ್ಮ ಸಂವಿಧಾನವು ಸುಂದರ, ವೈವಿಧ್ಯಮಯವಾದ ಸಂಸ್ಕೃತಿ, ಭಾಷೆ, ಜನ ಎಲ್ಲವನ್ನೂ ಒಳಗೊಂಡಿದೆ. ಇದರಿಂದಾಗಿ ಸಮಾಜದಲ್ಲಿ ಶಾಂತಿ, ನೆಮ್ಮದಿಯಿಂದ ತಮ್ಮ ಹಕ್ಕುಗಳನ್ನು ಪಡೆದುಕೊಂಡು ಬದುಕುವಂತಹ ಸಮಗ್ರತೆಯ ವಾತಾವರಣವನ್ನು ಯುವ ಸಮೂಹ ಸೃಷ್ಟಿಸಬೇಕು. ಸಂವಿಧಾನದ ಆಶಯಗಳಂತೆ ಎಲ್ಲರನ್ನೂ ಒಂದುಗೂಡಿಸಿ ಒಟ್ಟಾಗಿ ಹೋಗಬೇಕಾದ ಅನಿವಾರ್ಯತೆ ಇದೆ ಎಂದರು.



ಮೈಸೂರು ವಿಶ್ವವಿದ್ಯಾನಿಲಯದ ಕುವೆಂಪು ಕನ್ನಡ ಅಧ್ಯಯನ ಕೇಂದ್ರದ ಬಿಎಂಶ್ರೀ ಸಭಾಂಗಣದಲ್ಲಿ ನಡೆದ 'ಡಾ.ಅಂಬೇಡ್ಕರ್ ವಿಚಾರಗಳು: ಚಿಂತನ–ಮಂಥನ' ವಿಚಾರ ಗೋಷ್ಠಿಯನ್ನು ಮಾಜಿ ಸಚಿವೆ ಉಮಾಶ್ರೀ ಅವರು ಡಾ.ಅಂಬೇಡ್ಕರ್ ಪ್ರತಿಮೆಗೆ ಪುಷ್ಪಾರ್ಚನೆ ಮಾಡುವ ಮೂಲಕ ಉದ್ಘಾಟಿಸಿದರು.

ಕಲಿಯುವಲ್ಲಿ ಜಾತಿ,ಧರ್ಮವಿಲ್ಲ: ಧರ್ಮ ಮತ್ತು ಸಂವಿಧಾನ ಎರಡು ಬೇರೆ ಬೇರೆ. ಧರ್ಮ, ಧಾರ್ಮಿಕತೆ, ಆಚಾರ ವಿಚಾರ, ಸಂಪ್ರದಾಯ ಇವೆಲ್ಲವೂ ಬೇರೆ. ಜಾತಿಯೂ ಒಂದು ವ್ಯವಸ್ಥೆ ಅಲ್ಲ. ಜಾತಿ– ಧರ್ಮ ಎನ್ನುವುದು ಮನೆಯ ಬಾಗಿಲ ಒಳಗಡೆ ಇರಬೇಕೇ ಹೊರತು ಹೊರಗಡೆ ಅಲ್ಲ. ಶಿಕ್ಷಣ ಕಲಿಯಲು ಬಂದಿರುವವರೆಲ್ಲ ಸ್ನೇಹಿತರು ಅಷ್ಟೇ. ಇಲ್ಲಿ ಜಾತಿಗೆ, ಧರ್ಮಕ್ಕೆ ಸಂಬಂಧ ಇಲ್ಲ. ಹೀಗಾಗಿ ಎಲ್ಲರೂ ಒಟ್ಟಾಗಿ ಕಲಿಯುವ ಶಿಕ್ಷಣವು ಇಡೀ ದೇಶದ ಹಣೇ ಬರಹವನ್ನು ಬರೆಯುತ್ತದೆ ಎನ್ನುವುದನ್ನು ಅರ್ಥಮಾಡಿಕೊಳ್ಳಬೇಕು. ಭಾರತ ಶಾಂತಿ, ಅಹಿಂಸಾ ನೀತಿಯನ್ನು ಪ್ರತಿಪಾದನೆ ಮಾಡುವ ದೇಶ. ಆದ್ದರಿಂದ ಯುದ್ಧಕ್ಕೆ, ಭಯೋತ್ಪಾದನೆಗೆ, ಕೋಮುವಾದಕ್ಕೆ ವಿರುದ್ಧವಾದಂತಹ ತತ್ವಗಳ ಪರಿಪಾಲನೆಯನ್ನು ಮಾಡುವ ಮೂಲಕ ದೇಶದ ಅಭಿವೃದ್ಧಿಗೆ ಮಹನೀಯರು ಕೊಟ್ಟ ಕೊಡುಗೆಗಳಿಗೆ ಯುವ ಸಮೂಹ ಗೌರವವನ್ನು ಕೊಟ್ಟು, ಅವುಗಳನ್ನು ಪಾಲಿಸುವತ್ತ ಗಮನ ಹರಿಸಬೇಕು ಎಂದು ಸಲಹೆ ನೀಡಿದರು.

ರಾಜಕೀಯ ಮೀಸಲಾತಿ ಎನ್ನುವುದು ತಳ ಸಮುದಾಯಗಳಿಗೆ ತಮ್ಮ ಶಕ್ತಿಯನ್ನು ತೋರಿಸಲು ಇರುವ ಪ್ರಬಲ ಅಸ್ತ್ರ. ಈ ಮೀಸಲಾತಿಯಿಂದಾಗಿ ಸಂಸತ್ತಿನಲ್ಲಿ, ವಿಧಾನ ಮಂಡಲದಲ್ಲಿ ತಳ ಸಮುದಾಯಗಳು ತಮ್ಮ ಹಕ್ಕಿನ ಪರವಾಗಿ ಹೋರಾಡಲು ಅವಕಾಶ ಮಾಡಿಕೊಟ್ಟಿದೆ. ಇದಲ್ಲದೇ ಮಹಿಳೆಯರಿಗೂ ಶಾಸನ ಸಭೆಯಲ್ಲಿ ಅವಕಾಶ ನೀಡಿರುವುದು ಡಾ.ಅಂಬೇಡ್ಕರ್ ಸಂವಿಧಾನವೇ ಎನ್ನುವುದನ್ನು ಮನಗಾಣಬೇಕು ಎಂದರು.

ಅಂಬೇಡ್ಕರ್ ಭಾರತಕ್ಕೆ ಸೀಮಿತರಲ್ಲ : ಶೋಷಣೆ ಮತ್ತು ತುಳಿತಕ್ಕೆ ಒಳಗಾಗುವುದು ಎಂಬ ಎರಡು ಪದಗಳನ್ನು ನಾವು ಹೇಳುತ್ತೇವೆ .ಆದರೆ ಅದನ್ನು ನೇರವಾಗಿ ಅನುಭವಿಸಿ, ಕಣ್ಣಾರೆ ಕಂಡಿದ್ದು ಬಾಬಾ ಸಾಹೇಬ ಅಂಬೇಡ್ಕರ್ ಮಾತ್ರ. ವಿದ್ಯಾವಂತರಾಗಿ, ಸಮಾಜ ಸಂಘಟಕರಾಗಿ, ಅಧ್ಯಾಪಕರಾಗಿ ಮತ್ತು ರಾಜಕೀಯದಲ್ಲಿ ತಮ್ಮದೇ ಆದ ತತ್ವ, ತಮ್ಮದೇ ಆದ ಧ್ಯೇಯ ಗುರಿಗಳನ್ನು ಹೊಂದಿದ್ದ ಅವರ ಚಿಂತನೆಗಳು ಕೇವಲ ಭಾರತಕ್ಕೆ ಮಾತ್ರ ಸೀಮಿತವಲ್ಲ. ಇಡೀ ಪ್ರಪಂಚದ ಶೋಷಣೆಗೆ ಒಳಗಾದ ಎಲ್ಲಾ ಸಮುದಾಯಗಳಿಗೆ, ತುಳಿತಕ್ಕೊಳಗಾದ ಮಾನವ ಸಮುದಾಯಕ್ಕೆ ಅವರ ಚಿಂತನೆಗಳು ಬಹು ದೊಡ್ಡ ಕೊಡುಗೆಯನ್ನು ಕೊಟ್ಟಿವೆ. ಆದ್ದರಿಂದ ಅವರನ್ನು ನಾವು ಕೇವಲ ಭಾರತಕ್ಕೆ ಅಥವಾ ಒಂದು ಸಮುದಾಯಕ್ಕೆ ಮಾತ್ರ ಸೀಮಿತವಾಗಿರಿಸದೆ, ವಿಶ್ವ ಜ್ಞಾನಿ ಎನ್ನುವ ಪರಿಧಿಯಲ್ಲಿ ನೋಡಬೇಕು ಎಂದರು.

ಇದೆ ವೇಳೆ ಸಂಸ್ಕೃತಿ ಚಿಂತಕ ಶಂಕರ ದೇವನೂರು ಅವರು 'ಅಂಬೇಡ್ಕರ್ ಚಿಂತನೆ– ಸಮಕಾಲೀನ ಪ್ರಸ್ತುತತೆ' ಕುರಿತು ಹಾಗೂ ಬೆಂಗಳೂರು ಅಪರಾಧ ತನಿಖಾ ವಿಭಾಗದ ಎಸ್ಪಿ ಡಾ.ಬಿ.ಟಿ.ಕವಿತಾ ಅವರು 'ಅಂಬೇಡ್ಕರ್ ಚಿಂತನೆ– ಮಹಿಳಾ ಸುರಕ್ಷತೆ' ಕುರಿತು ಮಾತನಾಡಿದರು. ಕಾರ್ಯಕ್ರಮದಲ್ಲಿ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕರಾದ ಲೋಲಾಕ್ಷಿ ಉಪಸ್ಥಿತರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಕರ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ರೆಬೆಲ್ (ತೆ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಡಕಾಯಿಟ್ (ಹಿ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಕೆಡಿ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಕೋಟಿಗೊಬ್ಬ (ಕ)	4 ಪ್ರದರ್ಶನಗಳು
ರಾಜಕಮಲ್	
ಪೆಟ್ರಿಯೋಟ್ (ಮ)	4 ಪ್ರದರ್ಶನಗಳು
ಸಂಗಂ	
ಕರ (ತ)	4 ಪ್ರದರ್ಶನಗಳು
ಲಿಡೋ	
ಮಾಣಿಕ್ಯ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಪುನೀತ್ ನಿವಾಸ (ಕ)	4 ಪ್ರದರ್ಶನಗಳು

ಬೀರೇಶ್ವರಸ್ವಾಮಿ ದೇವಾಲಯದ ಬಸವನ ಶಾಸ್ತ್ರೋಕ್ತ ಅಂತ್ಯಕ್ರಿಯೆ



ವರಕೋಡು ಬೀರೇಶ್ವರ ದೇವಾಲಯದ ಬಸವನ ಮೃತದೇಹವನ್ನು ಅಪಾರ ಭಕ್ತರ ಸಮ್ಮುಖದಲ್ಲಿ ಅಂತ್ಯಕ್ರಿಯೆ ನೆರವೇರಿಸುತ್ತಿರುವುದು.

ಮೈಸೂರು, ಮೇ 12(ಎಂಟಿವೈ)– ವಯೋಸಹಜ ಸಮಸ್ಯೆಯಿಂದ ಮೃತಪಟ್ಟ ಮೈಸೂರು ತಾಲೂಕಿನ ವರಕೋಡು ಬೀರೇಶ್ವರಸ್ವಾಮಿ ದೇವಾಲಯದ ಬಸವನ ಅಂತ್ಯಕ್ರಿಯೆ ಶಾಸ್ತ್ರೋಕ್ತವಾಗಿ ಸಾಂಪ್ರದಾಯಿಕ ಪೂಜೆಯೊಂದಿಗೆ ಬೀರೇಶ್ವರಸ್ವಾಮಿ ದೇವಾಲಯ ಬಳಿ ಅಪಾರ ಭಕ್ತರ ಸಮ್ಮುಖದಲ್ಲಿ ನೆರವೇರಿತು.

ವರಕೋಡು ಬೀರೇಶ್ವರ ದೇವಾಲಯದ ಆವರಣದಲ್ಲಿಯೇ ಸೋಮವಾರ ಸಂಜೆ ಕುಸಿದು ಅಸುನೀಗಿದ ಬಸವನ ಕಳೇಬರಕ್ಕೆ ಇಂದು ಬೆಳಗ್ಗೆ ಪೂಜೆ ಸಲ್ಲಿಸಿ, ಹೂವು, ಆಭರಣದಿಂದ ಅಲಂಕಾರ ಮಾಡಿ ತೆರೆದ ವಾಹನದಲ್ಲಿಟ್ಟು ಗಡಿ ಗ್ರಾಮಗಳಾದ ವರಕೋಡು, ಬಡಗಲಹುಂಡಿ, ಕೆಂಪೇಗೌಡನಹುಂಡಿ, ಹೊಸಹುಂಡಿ ಹಾಗೂ ಮೂಡಲಹುಂಡಿಯಲ್ಲಿ ಮೆರವಣಿಗೆ ಮಾಡಲಾಯಿತು. ಕಂಸಾಳೆ, ಮಂಗಳವಾದ್ಯ, ತಮಟೆ, ವೀರಮಕ್ಕಳ ತಂಡದೊಂದಿಗೆ ಐದು ಗ್ರಾಮಗಳಲ್ಲಿ ಮೆರವಣಿಗೆ ಮಾಡಲಾಯಿತು. ಈ ವೇಳೆ ಗ್ರಾಮದ ನಿವಾಸಿಗಳು ಪೂಜೆ ಸಲ್ಲಿಸಿ ನೆಚ್ಚಿನ ಬಸವನಿಗೆ ವಿದಾಯ ಹೇಳಿದರು.

ಬಳಿಕ ಮತ್ತೆ ವರಕೋಡು ಗ್ರಾಮದ ಮೂಲಕ ಬೀರೇಶ್ವರಸ್ವಾಮಿ ದೇವಾಲಯಕ್ಕೆ ತಂದು ಸಾಂಪ್ರದಾಯಿಕ ಪೂಜೆ ಸಲ್ಲಿಸಲಾಯಿತು. ಅರ್ಚಕ ಗಣೇಶ್ ದೀಕ್ಷಿತ್, ಗುರುಮಠದ ಗುರುಸ್ವಾಮಿ, ಬೀರೇಶ್ವರ ದೇಗುಲದ ಗುಡ್ಡಪ್ಪಗಳಾದ ಶಿವು, ಚಿಕ್ಕಣ್ಣ, ಮಹದೇವ, ಬೀರೇಶ, ಸಿದ್ದರಾಮನಹುಂಡಿ, ದುದ್ದಗೆರೆ, ತಾಯೂರು ಸೇರಿದಂತೆ ಗಡಿಗ್ರಾಮಗಳ ಬೀರೇಶ್ವರ ದೇವಾಲಯದ ಗುಡ್ಡಪ್ಪರು ಪೂಜೆ ಸಲ್ಲಿಸಿ, ಅಂತ್ಯಕ್ರಿಯೆ ನೆರವೇರಿಸಲಾಯಿತು.

ಮಂಡಲ ಪೂಜಾ ಮಹೋತ್ಸವದಲ್ಲಿ ಭಾಗಿಯಾಗಿದ್ದ ಬಸವ: ಬೀರೇಶ್ವರ, ಬನ್ನಿ ಮಹಾಕಾಳೇಶ್ವರಿ ದೇವಾಲಯದ ಬಸಪ್ಪ ಕಳೆದ ಎರಡು ತಿಂಗಳಿಂದ ವಯೋ ಸಹಜ ಸಮಸ್ಯೆಯಿಂದ ಬಳಲಿತ್ತು ಆದರೂ, ಪುನರ್ ನಿರ್ಮಿಸಲಾಗಿದ್ದ ಬೀರೇಶ್ವರ ದೇವಾಲಯದ ಕಳಸ ಪ್ರತಿಷ್ಠಾಪನಾ ಜಾತ್ರಾ ಮಹೋತ್ಸವ ಹಾಗೂ 48 ದಿನಗಳ ಮಂಡಲ ಪೂಜಾ ಕೈಂಕರ್ಯದಲ್ಲಿ ಮೇ.2ರವರೆಗೂ ಪಾಲ್ಗೊಂಡು ಗಮನ ಸೆಳೆದಿತ್ತು. ದೇವಾಲಯದ ಪೂಜಾ ಮಹೋತ್ಸವ ಪೂರ್ಣಗೊಂಡ ಬಳಿಕ ದಿಡೀರ್ ಸಾವಿಗೀಡಾಗಿದೆ.

ಮೇ.15ರಿಂದ ಮೂರು ದಿನ ಮೈಸೂರಲ್ಲಿ ಮಾವು ಮೇಳ



ಮೈಸೂರು,ಮೇ.12(ಎಂಟಿವೈ)– ಮೈಸೂರಿನ ಕುಪ್ಪಣ್ಣ ಪಾರ್ಕ್‌ನಲ್ಲಿ ಮೇ.15ರಿಂದ 17ರವರೆಗೆ ತೋಟಗಾರಿಕಾ ಇಲಾಖೆ ಮಾವು ಮೇಳ ಆಯೋಜಿಸಿದ್ದು, ಈ ಬಾರಿ 30 ಮಳಿಗೆಗಳಲ್ಲಿ ವಿವಿಧ ಬಗೆಯ ಮಾವಿನಹಣ್ಣು ಗ್ರಾಹಕರ ನಾಲಿಗೆ ರುಚಿ ತಣಿಸಲಿವೆ.

ಈಗಾಗಲೇ ಮಾವಿನಹಣ್ಣು ಮಾರುಕಟ್ಟೆಗೆ ಪ್ರವೇಶಿಸಿದ್ದು, ಬೇಡಿಕೆ, ಬೆಲೆ ಕುಸಿತ ಕಂಡಿದೆ. ಮೇ ತಿಂಗಳ ಎರಡನೇ ವಾರದ ನಂತರ ಮಾವಿನಹಣ್ಣಿನ ಬೆಲೆ ಹೆಚ್ಚಳದ ನಿರೀಕ್ಷೆಯಿದ್ದು, ಈ ನಿಟ್ಟಿನಲ್ಲಿ ಎಂದಿನಂತೆ ಈ ಬಾರಿಯೂ ಮೂರು ದಿನಗಳ ಕಾಲ ಮಾವು ಮೇಳ ನಡೆಸಲು ತೋಟಗಾರಿಕಾ ಇಲಾಖೆ ನಿರ್ಧರಿಸಿದೆ. ಮೈಸೂರು, ಮಂಡ್ಯ, ರಾಮನಗರ, ಬೆಳಗಾವಿ, ಧಾರವಾಡ, ಕೊಪ್ಪಳ ಸೇರಿದಂತೆ ವಿವಿಧೆಡೆಯಲ್ಲಿ ಉತ್ತಮ ತಳಿಯ ಮಾವು ಬೆಳೆದಿರುವ ರೈತರೊಂದಿಗೆ ತೋಟಗಾರಿಕಾ ಇಲಾಖೆ ಅಧಿಕಾರಿಗಳು ಸಮಾಲೋಚಿಸಿದ್ದಾರೆ.

ಈ ಬಾರಿ 30 ಮಳಿಗೆಗಳಲ್ಲಿ ಬಾದಾಮಿ, ರಸಪುರಿ, ಇಮಾಮ್ ಪಸಂದ್, ದಶೇರಿ, ಮಲ್ಲಿಕಾ, ಮಲಗೋವಾ ಸಕ್ಕರೆಗುತ್ತಿ, ಸೇಂದೂರ ಸೇರಿದಂತೆ ವಿವಿಧ ಬಗೆಯ ಮಾವಿನ ಹಣ್ಣುಗಳನ್ನು ಮಾವು ಮೇಳದಲ್ಲಿ ಮಾರಾಟ ಮಾಡಲು ನಿರ್ಧರಿಸಲಾಗಿದೆ. ಅಲ್ಲದೆ, ಯಾವುದೇ ರಾಸಾಯನಿಕ ವಸ್ತು ಬಳಸದೆ ಮಾಗಿಸಿರುವ ಹಣ್ಣನ್ನೇ ಮೇಳಕ್ಕೆ ತರುವಂತೆ ಸಲಹೆ ನೀಡಲಾಗಿದೆ. ಎಂದಿನಂತೆ ಪ್ಲಾಸ್ಟಿಕ್ ಬಳಕೆ ನಿಷೇಧಿಸಿ, ಗ್ರಾಹಕರಿಗೆ ಬಟ್ಟೆ ಬ್ಯಾಗ್ ಅಥವಾ ಪೇಪರ್ ಬ್ಯಾಗ್‌ನಲ್ಲಿ ಮಾವಿನಹಣ್ಣು ನೀಡಲು ವ್ಯವಸ್ಥೆ ಮಾಡುವಂತೆ ಸಲಹೆ ನೀಡಲಾಗಿದೆ.

ಸಸ್ಯ ಮಾರಾಟ: ಮಾವು ಮೇಳದಲ್ಲಿ ಈ ಬಾರಿಯೂ ತೋಟಗಾರಿಕಾ ಇಲಾಖೆಯ ನರ್ಸರಿಯಲ್ಲಿ ಬೆಳೆದಿರುವ ಹೂವು, ಹಣ್ಣಿನ ಗಿಡಗಳನ್ನು ಮಾರಾಟ ಮಾಡಲು ಉದ್ದೇಶಿಸಲಾಗಿದೆ. ಅದರಲ್ಲೂ ಅಲಂಕಾರಿಕ ಗಿಡಗಳು ಮೇಳದಲ್ಲಿ ಮಾರಾಟ ಮಾಡುವ ಉದ್ದೇಶ ಹೊಂದಲಾಗಿದೆ.

ಉಚಿತ ಕಣ್ಣಿನ ಶಸ್ತ್ರ ಚಿಕಿತ್ಸಾ ಶಿಬಿರ



ಮೈಸೂರು,ಮೇ 12– ಮೈಸೂರಿನ ಎನ್‌ಜೆಎಸ್ ಚಾರಿಟಬಲ್ ಟ್ರಸ್ಟ್, ಮೈಸೂರು ವೀರಶೈವ ಸಜ್ಜನ ಸಂಘ, ಅರವಿಂದ ಕಣ್ಣಿನ ಆಸ್ಪತ್ರೆ, ಕೊಯಮತ್ತೂರು ಸಹಯೋಗದಲ್ಲಿ ಉಚಿತ ಕಣ್ಣಿನ ಶಸ್ತ್ರ ಚಿಕಿತ್ಸಾ ಶಿಬಿರವನ್ನು, ಮೇ 17 ರಂದು ಬೆಳಗ್ಗೆ 7.30 ರಿಂದ ಮಧ್ಯಾಹ್ನ 12.30 ಗಂಟೆಯವರೆಗೆ ಮೈಸೂರಿನ ಮಂಡಿಮೊಹಲ್ಲಾದ ಕಬೀರ್ ರಸ್ತೆಯಲ್ಲಿರುವ ಕಂಠಿ ಮಲ್ಲಣ್ಣ ಕಲ್ಯಾಣ ಮಂದಿರದಲ್ಲಿ ಏರ್ಪಡಿಸಲಾಗಿದೆ. ಹೆಚ್ಚಿನ ಮಾಹಿತಿಗೆ ಮೊ: 9448753597, 9916155453, 9448738657 ಮೂಲಕ ಸಂಪರ್ಕಿಸಲು ಶಿಬಿರದ ಆಯೋಜಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೈಸೂರು ಅರಮನೆ ಸೌಂದರ್ಯಕ್ಕೆ ಮರುಳಾದ ವಿವಿಧ ರಾಜ್ಯಗಳ ವಿಧಾನಸಭಾ ಸಭಾಧ್ಯಕ್ಷರು



ಅರಮನೆ ಮುಂಭಾಗ ವಿವಿಧ ರಾಜ್ಯಗಳ ವಿಧಾನಸಭಾ ಸಭಾಧ್ಯಕ್ಷರು ಫೋಟೋ ಕ್ಲಿಕ್ಕಿಸಿಕೊಂಡು ಸಂಭ್ರಮಿಸಿದರು.

ಮೈಸೂರು, ಮೇ 12(ವಿವಿಹೆಚ್)– ಸಾಂಸ್ಕೃತಿಕ ನಗರಿ ಮೈಸೂರಿನ ಹೆಮ್ಮೆಯ ಪ್ರತೀಕವಾಗಿರುವ ಮೈಸೂರು ಅರಮನೆಯ ಸೌಂದರ್ಯಕ್ಕೆ ವಿವಿಧ ರಾಜ್ಯಗಳ ವಿಧಾನಸಭಾ ಸಭಾಧ್ಯಕ್ಷರು ಮಾರು ಹೋದರು. ಅರಮನೆಯ ವೈಭವ, ಕಲಾತ್ಮಕ ಶೈಲಿ ಹಾಗೂ ಐತಿಹಾಸಿಕ ಹಿನ್ನೆಲೆಯನ್ನು ವೀಕ್ಷಿಸಿ ಪುಳಕಿತರಾದರು.

ಎಲ್ಲಾ ರಾಜ್ಯದ ವಿಧಾನಸಭೆಗಳ ಕಾರ್ಯವಿಧಾನ ಹಾಗೂ ನಡಾವಳಿಯ ಏಕರೂಪತೆ ತರುವ ನಿಟ್ಟಿನಲ್ಲಿ ಆರು ರಾಜ್ಯಗಳ ವಿಧಾನಸಭೆಯ ಸಭಾಧ್ಯಕ್ಷರುಗಳನ್ನೊಳಗೊಂಡ ಸಮಿತಿ ಮೈಸೂರಿನಲ್ಲಿಂದು (ಮಂಗಳವಾರ) ಪ್ರಾರಂಭಿಕ ಸಭೆ ನಡೆಸಿತ್ತು. ಇದಾದ ಬಳಿಕ ವಿವಿಧ ರಾಜ್ಯಗಳ ಸಭಾಧ್ಯಕ್ಷರು ಸಂಜೆ ಅರಮನೆಗೆ ಭೇಟಿ ನೀಡಿದ್ದರು. ಅರಮನೆ ಪ್ರವೇಶ ದ್ವಾರದಿಂದಲೆ ಕೆತ್ತನೆಗಳು, ಬಣ್ಣದ ಗಾಜಿನ ಅಲಂಕಾರ, ದರ್ಬಾರ್ ಹಾಲ್, ಕಂಬಗಳ ವಿನ್ಯಾಸ ಹಾಗೂ ಗೋಡೆಗಳ ಮೇಲಿನ ಚಿತ್ರಕಲೆಗಳನ್ನು ಆಸಕ್ತಿಯಿಂದ ವೀಕ್ಷಿಸಿದರು.

ಅರಮನೆ ಮಂಡಳಿ ಅಧಿಕಾರಿಗಳು ಹಾಗೂ ಮಾರ್ಗದರ್ಶಕರು ಅರಮನೆಯ ಇತಿಹಾಸ, ಒಡೆಯರ್ ಅರಸರ ಆಡಳಿತ ವೈಶಿಷ್ಟ್ಯಗಳು ಹಾಗೂ ದಸರಾ ಮಹೋತ್ಸವದ ಮಹತ್ವದ ಕುರಿತು ವಿವರಿಸಿದರು.

ಸಂಜೆ ವೇಳೆಗೆ ಅರಮನೆ ಸುತ್ತಮುತ್ತ ಪ್ರವಾಸಿಗರ ಸಂಚಾರ ಹೆಚ್ಚಾಗಿದ್ದು, ಸಭಾಧ್ಯಕ್ಷರ ಭೇಟಿ ಹಿನ್ನೆಲೆಯಲ್ಲಿ ಪೊಲೀಸ್ ಬಂದೋಬಸ್ತ್ ಕೂಡ ಕಟ್ಟುನಿಟ್ಟಾಗಿ ಕೈಗೊಳ್ಳಲಾಗಿತ್ತು.

ಈ ವೇಳೆ ಸಮಿತಿಯ ಅಧ್ಯಕ್ಷರು ಹಾಗೂ ಉತ್ತರ ಪ್ರದೇಶದ ವಿಧಾನ ಸಭೆಯ ಸಭಾಧ್ಯಕ್ಷರಾದ ಸತೀಶ್ ಮಹನಾ, ಕರ್ನಾಟಕದ ಯು.ಟಿ ಖಾದರ್, ನಾಗಾಲ್ಯಾಂಡ್‌ನ ಸಭಾಧ್ಯಕ್ಷ ಶ್ಯಾರಿಗ್ಯಾನ್ ಲಾಂಗ್ಕುಮೇರ್, ಹಿಮಾಚಲ ಪ್ರದೇಶದ ಸಭಾಧ್ಯಕ್ಷ ಕುಲ್ ದೀಪ್ ಸಿಂಗ್ ಪಠಾನೀಯ ಹಾಗೂ ದೆಹಲಿಯ ವಿಜೇಂದರ್ ಗುಪ್ತ ಅವರನ್ನು ಮೈಸೂರು ಅರಮನೆ ಉಪ ನಿರ್ದೇಶಕ ಟಿ.ಎಸ್.ಸುಬ್ರಮಣ್ಯ ಅವರು ಆತ್ಮೀಯವಾಗಿ ಬರಮಾಡಿಕೊಂಡು, ಅರಮನೆ ಆಡಳಿತ ಮಂಡಳಿ, ವತಿಯಿಂದ ಸನ್ಮಾನಿಸಿ, ಗೌರವಿಸಿದರು.

ಮೈಸೂರು ಅರಮನೆಯಲ್ಲಿರುವ ವರ್ಣ ಚಿತ್ರ, ಕಲಾಕೃತಿಗಳು, ಕಲ್ಯಾಣ ಮಂಟಪ. ಪಬ್ಲಿಕ್ ದರ್ಬಾರ್, ಖಾಸಗಿ ದರ್ಬಾರ್ ಹಾಲ್‌ಗಳನ್ನು ವೀಕ್ಷಿಸಿ ಸಂತೋಷಗೊಂಡರು. ಅರಮನೆ ವೀಕ್ಷಿಸಿದ ಗಣ್ಯರು ಅರಮನೆಯ ವಾಸ್ತುಶಿಲ್ಪದ ಅದ್ಭುತ ವೈಶಿಷ್ಟ್ಯ ಮತ್ತು ಪ್ರಾಚೀನ ಇತಿಹಾಸ ಹಾಗೂ ಅತ್ಯದ್ಭುತ ವೈಭವಯುತವಾದ ಅರಮನೆ ಇದಾಗಿದೆ ಎಂದು ಕೊಂಡಾಡಿದರು.

ಅಪ್ರೆಂಟಿಸ್‌ಶಿಪ್ ತರಬೇತಿಗೆ ಕ್ಯಾಂಪಸ್ ಡ್ರೈವ್

ಮೈಸೂರು, ಮೇ 12– ಟೊಯೋಟ ಕಿರ್ಲೋಸ್ಕರ್ ಸಂಸ್ಥೆಯ ವತಿಯಿಂದ ಅಪ್ರೆಂಟಿಸ್‌ಶಿಪ್ ತರಬೇತಿಗೆ 18 ರಿಂದ 25 ವರ್ಷದ ಒಳಗೆ ಇರುವ ಅಭ್ಯರ್ಥಿಗಳನ್ನು ಆಯ್ಕೆ ಮಾಡಲು ಕ್ಯಾಂಪಸ್ ಡ್ರೈವ್ ಅನ್ನು ಮೇ 25 ರಂದು ಬೆಳಗ್ಗೆ 8.30 ಗಂಟೆಗೆ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ, ಎನ್.ಆರ್.ಮೊಹಲ್ಲಾ, ಮೈಸೂರು–07 ಇಲ್ಲಿನ ಆವರಣದಲ್ಲಿ ಹಮ್ಮಿಕೊಳ್ಳಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಸಂಸ್ಥೆಯ ಉಪ ಪ್ರಾಚಾರ್ಯ ಬೋಪಯ್ಯ, ಮೊ.ಸಂ.9945711787 ಸಂಪರ್ಕಿಸಬಹುದೆಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೈಸೂರು ವಿಮಾನ ನಿಲ್ದಾಣದಲ್ಲಿ ಆ್ಯಂಟಿ ಹೈಜಾಕ್ ತುರ್ತು ಕಾರ್ಯಾಚರಣೆಯ ಅಣಕು ಪ್ರದರ್ಶನ

ಮೈಸೂರು, ಮೇ12(ಬಿಎಲ್ ಯು, ಬಿಸಿಟಿ)– ವಿಮಾನ ಅಪಹರಣ ಅಥವಾ ಹೈಜಾಕ್ ಮಾಡಿದ ಸಂದರ್ಭದಲ್ಲಿ ತುರ್ತು ಕಾರ್ಯಾಚರಣೆ ಕೈಗೊಳ್ಳಲು ಹಾಗೂ ವಿವಿಧ ಇಲಾಖೆಗಳ ನಡುವಿನ ಸಮನ್ವಯತೆಯನ್ನು ಖಚಿತಪಡಿಸಿಕೊಳ್ಳಲು ಮೈಸೂರು ವಿಮಾನ ನಿಲ್ದಾಣದಲ್ಲಿ ಸೋಮವಾರ ಆ್ಯಂಟಿ ಹೈಜಾಕ್ ತುರ್ತು ಕಾರ್ಯಾಚರಣೆಯ ಅಣಕು ಪ್ರದರ್ಶನ ನಡೆಯಿತು.





ಮೈಸೂರು ವಿಮಾನ ನಿಲ್ದಾಣದಲ್ಲಿ ಆ್ಯಂಟಿ ಹೈಜಾಕ್ ತುರ್ತು ಕಾರ್ಯಾಚರಣೆಯ ಅಣಕು ಪ್ರದರ್ಶನ ನಡೆಯಿತು.

ಮೈಸೂರು ವಿಮಾನ ನಿಲ್ದಾಣದಲ್ಲಿ ಸೋಮವಾರ ಸಂಜೆ 4.20 ಗಂಟೆಗೆ ಆರಂಭವಾದ ಅಣಕು ಪ್ರದರ್ಶನದಲ್ಲಿ ವಿಮಾನ ನಿಲ್ದಾಣದ ಅಧಿಕಾರಿಗಳು, ಕರ್ನಾಟಕ ರಾಜ್ಯ ಕೈಗಾರಿಕಾ ಭದ್ರತಾ ಪಡೆ, ಕರ್ನಾಟಕ ರಾಜ್ಯ ಪೊಲೀಸ್, ಜಿಲ್ಲಾ ಆಡಳಿತ, ರಾಷ್ಟ್ರೀಯ ಭದ್ರತಾ ಸಿಬ್ಬಂದಿ (ಎನ್‌ಎಸ್ ಜಿ), ಗುಪ್ತಚರ ಇಲಾಖೆ, ವೈದ್ಯಕೀಯ ತಂಡಗಳು, ವಿಮಾನಯಾನ ಪ್ರತಿನಿಧಿಗಳು, ಓರಿಯಂಟ್ ಫ್ಲೈಯಿಂಗ್ ಶಾಲೆ ಹಾಗೂ ಇಂಡಿಗೋ ಏರ್ ಲೈನ್ಸ್ ಸೇರಿದಂತೆ ಹಲವು ಸಂಸ್ಥೆಗಳ ಪ್ರತಿನಿಧಿಗಳು ಭಾಗವಹಿಸಿದ್ದರು.

ಮೈಸೂರು ವಿಮಾನ ನಿಲ್ದಾಣದ ನಿರ್ದೇಶಕಿ ಪಿ.ವಿ.ಉಷಾಕುಮಾರಿ ಈ ಕುರಿತಂತೆ ಮಾಹಿತಿ ನೀಡಿದ್ದು, ವಿಮಾನ ಅಪಹರಣವಾದ ಸಂದರ್ಭದಲ್ಲಿ ತುರ್ತು ಕಾರ್ಯಾಚರಣೆ ಕೈಗೊಳ್ಳಲು ಹಾಗೂ ವಿವಿಧ ಇಲಾಖೆಗಳ ನಡುವೆ ಸಮನ್ವಯತೆ ಖಚಿತಪಡಿಸಿಕೊಳ್ಳಲು ನಡೆಸಿದ ಅಣಕು ಪ್ರದರ್ಶನ ಯಶಸ್ವಿಯಾಗಿದೆ ಎಂದು ತಿಳಿಸಿದ್ದಾರೆ.

ವಾಯುಯಾನದ ಭದ್ರತಾ ಶಿಷ್ಟಾಚಾರಕ್ಕೆ ಅನುಗುಣವಾಗಿ ತುರ್ತು ಪರಿಸ್ಥಿತಿಯನ್ನು ಎದುರಿಸಲು ಹಲವು ಇಲಾಖೆಯನ್ನು ಒಳಗೊಂಡಂತೆ ಸಂಘಟಿತವಾಗಿ ಅಣಕು ಪ್ರದರ್ಶನ ಕೈಗೊಳ್ಳಲಾಯಿತು ಎಂದು ಮಾಹಿತಿ ನೀಡಿದ್ದಾರೆ.

ವಿಮಾನದ ಹೈಜಾಕ್ ಆದ ಸಂದರ್ಭದಲ್ಲಿ ಭದ್ರತಾ ಸಿಬ್ಬಂದಿಯ ನಿಯೋಜನೆ, ಬಿಕ್ಕಟ್ಟು ನಿರ್ವಹಣೆ, ಅಪಹರಣಕಾರರನ್ನು ಸೆರೆ ಹಿಡಿಯುವುದು ಸೇರಿದಂತೆ ವಿವಿಧ ಪರಿಣಾಮಕಾರಿ ಕಾರ್ಯಾಚರಣೆಯ ವಿಧಾನಗಳ ಅಣಕು ಪ್ರದರ್ಶನ ಯಶಸ್ವಿಯಾಗಿದ್ದು, ಹಿರಿಯ ಪೊಲೀಸ್ ಅಧಿಕಾರಿಗಳು ಹಾಗೂ ರಾಜ್ಯ ಮಟ್ಟದ ಅಧಿಕಾರಿಗಳ ಮೇಲ್ವಿಚಾರಣೆಯಲ್ಲಿ ಪೂರ್ವಾಭ್ಯಾಸ ಮಾಡಲಾಯಿತು ಎಂದು ಹೇಳಿದ್ದಾರೆ.

ಅಣಕು ಕಾರ್ಯಾಚರಣೆಗೆ ಆಗಮಿಸಿದ್ದ ಸ್ವತಂತ್ರ ವೀಕ್ಷಕರು ಮೇಲ್ವಿಚಾರಣೆ ನಡೆಸಿದರು. ವಿವಿಧ ಇಲಾಖೆಗಳ ನಡುವಿನ ಸಮನ್ವಯತೆ ಬಗ್ಗೆ ಕೆಲವು ಸಲಹೆಗಳನ್ನು ನೀಡಿದರು ಎಂದು ತಿಳಿಸಿದ್ದಾರೆ.

ಮೈಸೂರು ವಿಮಾನ ನಿಲ್ದಾಣದಲ್ಲಿ ಸಾಮಾನ್ಯ ವಿಮಾನಗಳ ಹಾರಾಟಕ್ಕೆ ಯಾವುದೇ ರೀತಿಯಲ್ಲೂ ಅಡ್ಡಿಯಾಗದಂತೆ ಅಣಕು ಪ್ರದರ್ಶನ ನಡೆಸಲಾಯಿತು. ವಿಮಾನದಲ್ಲಿ ಪ್ರಯಾಣ ಮಾಡುವ ಪ್ರಯಾಣಿಕರ ಸುರಕ್ಷತೆ ಹಾಗೂ ಭದ್ರತೆಯನ್ನು ಖಚಿತಪಡಿಸಿಕೊಳ್ಳಲು ತುರ್ತು ಪರಿಸ್ಥಿತಿಯಲ್ಲಿ ಯಾವ ರೀತಿ ಪರಿಣಾಮಕಾರಿ ಕಾರ್ಯಾಚರಣೆ ಕೈಗೊಳ್ಳುವುದು ಎಂಬುದನ್ನು ಈ ಮೂಲಕ ಖಚಿತಪಡಿಸಿಕೊಳ್ಳಲಾಗಿದೆ ಎಂದು ಹೇಳಿದ್ದಾರೆ.

ಮೈಸೂರು ಮಾತ್ರವಲ್ಲದೆ ಇಡೀ ದೇಶದ ಎಲ್ಲಾ ವಿಮಾನ ನಿಲ್ದಾಣಗಳಲ್ಲಿ ಪ್ರತಿ ವರ್ಷ ಇಂತಹ ಅಣಕು ಪ್ರದರ್ಶನವನ್ನು ನಡೆಸಲಾಗುತ್ತದೆ. ಅದರಂತೆ ಮೈಸೂರಿನಲ್ಲಿ ಕೂಡ ಇದನ್ನು ಆಯೋಜಿಸಲಾಗಿದೆ ಎಂದಿದ್ದಾರೆ.


ವಿಮಾನಯಾನದ ಸುರಕ್ಷತಾ ವ್ಯವಸ್ಥೆಯನ್ನು ಬಲಪಡಿಸಲು ಹಾಗೂ ವಿಮಾನ ನಿಲ್ದಾಣದ ಭದ್ರತಾ ಮೂಲಸೌಕರ್ಯದಲ್ಲಿ ಸಾರ್ವಜನಿಕರ ವಿಶ್ವಾಸವನ್ನು ಹೆಚ್ಚಿಸಲು ಇಂತಹ ಅಣಕು ಪ್ರದರ್ಶನ ನಿರ್ಣಾಯಕ ಪಾತ್ರ ವಹಿಸುತ್ತದೆ ಎಂದು ಉಷಾ ಕುಮಾರಿ ಅವರು ಅಭಿಪ್ರಾಯಪಟ್ಟಿದ್ದಾರೆ.

ದೇವರಾಜ ಮಾರುಕಟ್ಟೆ, ಲ್ಯಾನ್ಸ್‌ಡೌನ್ ಕಟ್ಟಡ ನವೀಕರಣಕ್ಕೆ ಸರ್ಕಾರ ಶೀಘ್ರ ಕ್ರಮ ವಹಿಸಲಿ

ಎಂಜಿಪಿ ಪರವಾಗಿ ಸ್ಥಾಪಕ ಕಾರ್ಯಾಧ್ಯಕ್ಷ ಭಾಮಿ ಶೆಣೈ ಮನವಿ

ಮೈಸೂರು, ಮೇ 12– ಮೈಸೂರಿನ ದೇವರಾಜ ಮಾರುಕಟ್ಟೆ ಹಾಗೂ ಲ್ಯಾನ್ಸ್‌ಡೌನ್ ಪಾರಂಪರಿಕ ಕಟ್ಟಡಗಳ ಸಂರಕ್ಷಣೆ ನಿಟ್ಟಿನಲ್ಲಿ ವಿಳಂಬ ಮಾಡದೆ ಸುಪ್ರೀಂಕೋರ್ಟ್ ನಿರ್ದೇಶನವನ್ನು ಪಾಲಿಸಬೇಕು ಎಂದು ಮೈಸೂರು ಗ್ರಾಹಕರ ಪರಿಷತ್(ಎಂಜಿಪಿ) ಒತ್ತಾಯಿಸಿದೆ.

ಈ ಸಂಬಂಧ ಪತ್ರಿಕಾ ಹೇಳಿಕೆ ನೀಡಿರುವ ಎಂಜಿಪಿ ಸ್ಥಾಪಕ ಕಾರ್ಯಾಧ್ಯಕ್ಷ ಭಾಮಿ ವಿ.ಶೆಣೈ, ಈ ಎರಡು ಪಾರಂಪರಿಕ ಕಟ್ಟಡಗಳ ವಿಚಾರವಾಗಿ ಯಾವುದೇ ಮೇಲ್ಮನವಿ ಸಲ್ಲಿಸದೆ ಅವುಗಳ ಸಂರಕ್ಷಣೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಕ್ರಮ ವಹಿಸಬೇಕು ಎಂದು ಮನವಿ ಮಾಡಿದ್ದಾರೆ.



ಭಾಮಿ ಶೆಣೈ


ಮೈಸೂರಿನ ಪರಂಪರೆಯ ಆಭರಣಗಳಂತಿರುವ ದೇವರಾಜ ಮಾರುಕಟ್ಟೆ ಹಾಗೂ ಲ್ಯಾನ್ಸ್‌ಡೌನ್ ಕಟ್ಟಡಗಳನ್ನು ಸಂಪೂರ್ಣವಾಗಿ ಧ್ವಂಸ ಮಾಡದೆ, ಸಂರಕ್ಷಿತ ನವೀಕರಣಕ್ಕೆ ಸುಪ್ರೀಂ ಕೋರ್ಟ್ ನಿರ್ದೇಶನ ನೀಡಿರುವುದು ಪರಂಪರೆಯ ಅಭಿಮಾನಿಗಳು ಮಾತ್ರವಲ್ಲದೆ ಬಹುತೇಕ ನಾಗರಿಕರು ಸ್ವಾಗತಿಸಿದ್ದಾರೆ. ಈ ಕಟ್ಟಡಗಳ ಉಳಿಸಲೆಂದು ನಡೆಯುತ್ತಿರುವ ನಾಗರಿಕರ ಚಳವಳಿಯಲ್ಲಿ ಭಾಗವಹಿಸಿರುವ ಎಂಜಿಪಿಗೆ ತುಂಬಾ ಸಂತೋಷ ತಂದಿದೆ ಎಂದು ತಿಳಿಸಿದ್ದಾರೆ.

ಈ ಎರಡೂ ಕಟ್ಟಡಗಳನ್ನು ಸಂರಕ್ಷಿಸಲು 2023ರ ಆಗಸ್ಟ್‌ನಲ್ಲಿ ರಾಜ್ಯ ಹೈಕೋರ್ಟ್ ಆದೇಶಿಸಿತ್ತು. ಸರ್ಕಾರವು ನ್ಯಾಯಾಲಯದ ತೀರ್ಪನ್ನು ಗೌರವದಿಂದ ಸ್ವೀಕರಿಸಿ, ತಕ್ಷಣವೇ ಪುನರ್ ಸ್ಥಾಪನಾ ಕಾರ್ಯವನ್ನು ಆರಂಭಿಸಬೇಕಾಗಿತ್ತು. ಆದರೆ, ನ್ಯಾಯಾಲಯದ ಆದೇಶ ಪ್ರಶ್ನಿಸಿ ಮೇಲ್ಮನವಿ ಸಲ್ಲಿಸಿದ್ದರ ಪರಿಣಾಮ ಮೂರು ವರ್ಷಗಳು ವಿಳಂಬವಾಯಿತು. ಇದರಿಂದ ಕಟ್ಟಡಗಳ ಸ್ಥಿತಿ ಮತ್ತಷ್ಟು ಹಾಳಾಗಿದೆ. ಈಗಲೂ ವಿಳಂಬ ಧೋರಣೆ ತಾಳದೆ ತ್ವರಿತ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದ್ದಾರೆ.

ಈಗಾಗಲೇ ಇಂಟಾಚ್ ಮತ್ತು ಐಐಟಿ ರೂರ್ಕಿ ತಂಡಗಳು ಅಧ್ಯಯನ ನಡೆಸಿ, ವರದಿ ನೀಡಿವೆ. ಈ ಕಟ್ಟಡಗಳ ಶೇ.70 ರಷ್ಟು ಭಾಗವನ್ನು, ಅಸ್ತಿತ್ವದಲ್ಲಿರುವ ಅಡಿಪಾಯವನ್ನು ಉಳಿಸಿಕೊಂಡೇ ದುರಸ್ತಿ ಮಾಡಿ, ಪುನರ್‌ಸ್ಥಾಪಿಸಬಹುದು ಎಂದು ಅಭಿಪ್ರಾಯಿಸಿವೆ. ಸಂಪೂರ್ಣವಾಗಿ ಹಾಳಾಗಿದ್ದ ಅಂಕೋರ್‌ವಾಟ್ ದೇವಾಲಯವನ್ನು ಪುನರ್ ಸ್ಥಾಪಿಸಲಾಗಿದ್ದು, ಅದರ ಬಗ್ಗೆ ಮಾಹಿತಿಯುಳ್ಳವರಿಗೆ ಮೈಸೂರಿನ ಈ ಎರಡು ಕಟ್ಟಡಗಳನ್ನೂ ಉಳಿಸುವುದು ಸಾಧ್ಯವೆಂಬುದನ್ನು ಸುಲಭವಾಗಿ ಅರ್ಥ ಮಾಡಿಕೊಳ್ಳಬಹುದು ಎಂದಿದ್ದಾರೆ.

ಪಾರಂಪರಿಕ ದೇವರಾಜ ಮಾರುಕಟ್ಟೆ ಹಾಗೂ ಲ್ಯಾನ್ಸ್‌ಡೌನ್ ಕಟ್ಟಡಗಳ ನವೀಕರಣ ಕಾಮಗಾರಿಯನ್ನು, ಕಷ್ಟಸಾಧ್ಯವಾದರೂ ವಿಶ್ವಮಟ್ಟದ ಪರಿಣಿತಿ ಹೊಂದಿರುವ ಅತ್ಯಂತ ಅರ್ಹ ಗುತ್ತಿಗೆದಾರರಿಗೆ ನೀಡಬೇಕು. ಇದಕ್ಕೂ ಮೊದಲು ಪರಿಶೀಲನೆಗೆ ಆಯೋಗವನ್ನು ನೇಮಿಸಬೇಕು. ಈ ನಡುವೆಯೇ ಎರಡೂ ಕಟ್ಟಡಗಳ ನೈಜ ಮಳಿಗೆದಾರರನ್ನು ಪಟ್ಟಿ ಮಾಡಿ, ಮಹಾನಗರ ಪಾಲಿಕೆಗೆ ನಷ್ಟವಾಗದಂತೆ ಸೂಕ್ತ ಬಾಡಿಗೆ ನಿಗದಿಪಡಿಸಬೇಕು. ಆಯೋಗವನ್ನು ಮುನ್ನಡೆಸಲು ಸರ್ಕಾರವು ಸಮರ್ಪಣಾ ಮನೋಭಾವವುಳ್ಳ ಸಮರ್ಥ ಅಧಿಕಾರಿಯನ್ನು ನೇಮಿಸಬೇಕು ಎಂದು ತಿಳಿಸಿದ್ದಾರೆ.

ಅಸ್ಸಾಂ ಮುಖ್ಯಮಂತ್ರಿಯಾಗಿ ಹಿಮಂತ ಬಿಸ್ವಾ ಶರ್ಮಾ ಪ್ರಮಾಣ ವಚನ



ಗುವಾಹಟಿ, ಮೇ 12– ಹಿಮಂತ ಬಿಸ್ವಾ ಶರ್ಮಾ ಅವರು ಸತತ ಎರಡನೇ ಬಾರಿಗೆ ಅಸ್ಸಾಂನ ಮುಖ್ಯ ಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಿದ್ದಾರೆ. ಅಸ್ಸಾಂನ ಗುವಾಹಟಿಯ ಖಾನಾಪಾರಾದಲ್ಲಿರುವ ಪಶುವೈದ್ಯಕೀಯ ಕಾಲೇಜು ಮೈದಾನದಲ್ಲಿ ನಡೆದ ಭವ್ಯ ಸಮಾರಂಭದಲ್ಲಿ ರಾಜ್ಯಪಾಲರಾದ ಲಕ್ಷ್ಮಣ್ ಪ್ರಸಾದ್ ಆಚಾರ್ಯ ಅವರು ಹಿಮಂತ ಬಿಸ್ವಾ ಶರ್ಮಾ ಮತ್ತು ಅವರ ಸಚಿವ ಸಂಪುಟಕ್ಕೆ ಪ್ರಮಾಣವಚನ ಬೋಧಿಸಿದರು.

ಸಮಾರಂಭದಲ್ಲಿ ಪ್ರಧಾನಿ ನರೇಂದ್ರ ಮೋದಿ ಕೇಂದ್ರ ಗೃಹ ಸಚಿವ ಅಮಿತ್ ಶಾ, ರಕ್ಷಣಾ ಸಚಿವ ರಾಜನಾಥ್ ಸಿಂಗ್ ಮತ್ತು ವಿವಿಧ ರಾಜ್ಯಗಳ ಮುಖ್ಯಮಂತ್ರಿಗಳು ಭಾಗವಹಿಸಿದ್ದರು.

ಶರ್ಮಾ ಅವರೊಂದಿಗೆ ನಾಲ್ವರು ಶಾಸಕರು ಸಚಿವರಾಗಿ ಪ್ರಮಾಣವಚನ ಸ್ವೀಕರಿಸಿದರು. ಅವರಲ್ಲಿ ಬಿಜೆಪಿಯ ಅಜಂತಾ ನಿಯೋಗ್ ಮತ್ತು ರಾಮೇಶ್ವರ್ ತೇಲಿ, ಎಜಿಪಿಯ ಅತುಲ್ ಬೋರಾ ಹಾಗೂ ಬಿಪಿಎಫ್‌ನ ಚರಣ್ ಬೋರೋ ಸೇರಿದ್ದಾರೆ.

ಅಸ್ಸಾಂನಲ್ಲಿ ಸತತ ಎರಡನೇ ಬಾರಿಗೆ ಮುಖ್ಯಮಂತ್ರಿ ಹುದ್ದೆಗೇರಿದ ಮೊದಲ ಕಾಂಗ್ರೆಸ್ಸೇತರ ನಾಯಕ ಎಂಬ ಹೆಗ್ಗಳಿಕೆಗೆ ಹಿಮಂತ ಬಿಸ್ವಾ ಶರ್ಮಾ ಪಾತ್ರರಾಗಿದ್ದಾರೆ.

ಬಿಜೆಪಿ ನೇತೃತ್ವದ ಎನ್‌ಡಿಎ ಮೈತ್ರಿಕೂಟವು ರಾಜ್ಯ ವಿಧಾನಸಭಾ ಚುನಾವಣೆಯಲ್ಲಿ 102 ಸ್ಥಾನಗಳನ್ನು ಗೆಲ್ಲುವ ಮೂಲಕ ಭರ್ಜರಿ ಜಯ ಸಾಧಿಸಿದ ನಂತರ ಈ ಸರ್ಕಾರ ರಚನೆಯಾಗಿದೆ.

ಬಿಳಿಗಿರಿರಂಗನಬೆಟ್ಟದಲ್ಲಿ ಜೀವನೋತ್ಸಾಹ ಶಿಬಿರ

ಮೈಸೂರು, ಮೇ 12– ಸುತ್ತೂರು ಶ್ರೀಮಠ, ಜೆಎಸ್‌ಎಸ್ ಮಹಾವಿದ್ಯಾಪೀಠ ಹಾಗೂ ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿಗಳ ಸಂಯುಕ್ತಾಶ್ರಯದಲ್ಲಿ ಬಿಳಿಗಿರಿರಂಗನಬೆಟ್ಟದಲ್ಲಿ ಜೀವನೋತ್ಸಾಹ ಶಿಬಿರವನ್ನು ಮೇ 13ರಿಂದ 19ರವರೆಗೆ ಆಯೋಜಿಸಲಾಗಿದೆ. 14ರಂದು ಬೆಳಗ್ಗೆ 10 ಗಂಟೆಗೆ ಉದ್ಘಾಟನೆಯನ್ನು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮೀಜಿಯವರ ದಿವ್ಯ ಸಾನ್ನಿಧ್ಯದಲ್ಲಿ ಏರ್ಪಡಿಸಲಾಗಿದೆ.

ಚಾಮರಾಜನಗರ ಜಿಲ್ಲಾಧಿಕಾರಿಗಳಾದ ಶ್ರೀಮತಿ ಶ್ರೀರೂಪ ಶಿಬಿರ ಉದ್ಘಾಟಿಸಲಿದ್ದು, ಹಿರಿಯ ಪತ್ರಕರ್ತ ಸುದರ್ಶನ್ ಚನ್ನಂಗಿಹಳ್ಳಿ ಅಧ್ಯಕ್ಷತೆ ವಹಿಸಲಿದ್ದಾರೆ. ಚಾಮರಾಜನಗರ ಜಿಲ್ಲಾ ಪೊಲೀಸ್ ಅಧೀಕ್ಷಕ ಎಂ. ಮುತ್ತುರಾಜ್ ಮುಖ್ಯ ಅತಿಥಿಗಳಾಗಿರುತ್ತಾರೆ.

ಶಿಬಿರದಲ್ಲಿ ಡಾ. ಪೂರ್ವಿಜಯರಾಜ್, ಪಿ.ಆರ್. ರಾಹುಲ್ ಶ್ರೀವತ್ಸನ್, ಕೆ. ಸುಚೇಂದ್ರ ಪ್ರಸಾದ್, ವೀರೇಶ್ ಜಿ. ಪಾಟೀಲ್, ಚಂದ್ರಶೇಖರ್, ಕಂಜಪಾಡಿ ಸುಬ್ರಹ್ಮಣ್ಯ ಭಟ್, ಡಾ. ಅಮೃತವರ್ಷಿಣಿ ಉಮೇಶ್, ಹೆಚ್.ಕೆ.ಮಹಾನಂದ, ಮೈಸೂರು ಆನಂದ್, ಶ್ರೀಮತಿ ಬಿ.ಎಸ್. ಉಮಾ ಪ್ರಕಾಶ್, ಕೆ.ಜಿ. ಸತೀಶ್ ಅವರು ಕ್ರಮವಾಗಿ 'ನಿಸರ್ಗ ಚಿಕಿತ್ಸೆ, ಪ್ರಾಣಿಕ್ ಹೀಲಿಂಗ್, ಸ್ಥಿತ ಪ್ರಜ್ಞತೆ, ಭಾರತೀಯ ಸಂಸ್ಕೃತಿ, ಜೀವಜಗತ್ತು ನೆಮ್ಮದಿ ಕುಟುಂಬ, ಜೀವನೋತ್ಸಾಹ, ಅಂತರ್ಜಾಲ ಚಕ್ರವ್ಯೂಹ, ನಗು ದಿವ್ಯೌಷಧ, ಪೌಷ್ಠಿಕಾಂಶಗಳ ಪ್ರಾಮುಖ್ಯತೆ, ಕಾನೂನು ಅರಿವು'– ಈ ವಿಷಯಗಳನ್ನು ಕುರಿತು ಉಪನ್ಯಾಸ ನೀಡಲಿದ್ದಾರೆ. 18ರಂದು ಪ್ರವಾಸ ಏರ್ಪಡಿಸಲಾಗಿದೆ. 19ರಂದು ಶಿಬಿರದ ಸಮಾರೋಪವಿರುತ್ತದೆ.

ಪಿಹೆಚ್.ಡಿ ಪದವಿ



ಮೈಸೂರು, ಮೇ 12– ಡಾ.ಪ್ರೇಮ್ ಕುಮಾರ್ ರಾಜೇ ಅರಸ್.ಎಂ.ಎನ್. ಅವರ ಮಾರ್ಗದರ್ಶನದಲ್ಲಿ ಸಂದೀಪ್.ಎಸ್.ಜೆ ಅವರು ನಿರ್ವಹಣೆ ವಿಜ್ಞಾನ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾ ಪ್ರಬಂಧವನ್ನು ಮೈಸೂರು ವಿಶ್ವ ವಿದ್ಯಾನಿಲಯ ಪಿಹೆಚ್.ಡಿ ಪದವಿಗೆ ಅಂಗೀಕರಿಸಿದೆ.

ಗೌರವಾನ್ವಿತ 3ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ, ಹಿರಿಯ ಶ್ರೇಣಿ ವಿಭಾಗ, ಮೈಸೂರು
ಓ.ಎಸ್.ಸಂಖ್ಯೆ: 877/2025

ವಾದಿ : ಆಯುಕ್ತರು, ಮೈಸೂರು ಮಹಾನಗರ ಪಾಲಿಕೆ, ಮೈಸೂರು.

ವಿರುದ್ಧ

ಪ್ರತಿವಾದಿಗಳು : 7. ಎಸ್.ಆಂತೋಣಿ, ಗುತ್ತಿಗೆದಾರರು, #1640, 3ನೇ ಕ್ರಾಸ್, ಮಾರುತಿ ಟೆಂಟ್ ರಸ್ತೆ, ಜನತಾನಗರ, ಮೈಸೂರು– 570 009.

9. ಎಂ.ಎಸ್. ಲಕ್ಷ್ಮೀನಾರಾಯಣ, ಗುತ್ತಿಗೆದಾರರು, #512, ಬಿ.ಕೆ. ರಸ್ತೆ, ದೇವರಾಜ ಮೊಹಲ್ಲಾ, ಮೈಸೂರು– 570 001.

15. ಕೆ.ಸನ್ಮತಿ ಹಿಜಾರಿ, ಗುತ್ತಿಗೆದಾರರು, #19, ಸೋನಾರ್ ರಸ್ತೆ, ಚಾಮರಾಜ ಮೊಹಲ್ಲಾ, ಮೈಸೂರು– 570 023.

16. ರಮೇಶ್ ಕುಮಾರ್, ಬಿನ್ ಮಂಜೇಗೌಡ, ಗುತ್ತಿಗೆದಾರರು, #36, ಆಲನಹಳ್ಳಿ ಲೇಔಟ್, ಮೈಸೂರು – 570 010.

ಪತ್ರಿಕಾ ಪ್ರಕಟಣೆ

ವಾದಿಯು ಪ್ರತಿವಾದಿಗಳ ವಿರುದ್ಧ ಮಹಾನಗರ ಪಾಲಿಕೆಯಿಂದ ಟೆಂಡರ್ ಹಣ ದುರುಪಯೋಗಪಡಿಸಿಕೊಂಡಿರುವ ಬಗ್ಗೆ ವಸೂಲಾತಿಗಾಗಿ ಈ ಮೇಲ್ಕಂಡ ದಾವೆಯನ್ನು ಹೂಡಿದ್ದು, ಸದರಿ ದಾವೆಯ 7, 9, 15 ಮತ್ತು 16ನೇ ಪ್ರತಿವಾದಿಗಳು ತಮ್ಮ ವಿಳಾಸದಲ್ಲಿ ವಾಸವಿಲ್ಲವೆಂದು, ಸ್ಪೀಡ್ ಪೋಸ್ಟ್ ವಾಪಸ್ಸು ಬಂದಿರುತ್ತದೆ. ಆದ್ದರಿಂದ ವಾದಿಯು, ಮೇಲ್ಕಂಡ ಪ್ರತಿವಾದಿಗಳಾದ 7, 9, 15 ಮತ್ತು 16ರವರು ಘನ ನ್ಯಾಯಾಲಯವು ನಿಗದಿಪಡಿಸುವ ದಿನಾಂಕ: 16/7/26ರಂದು ಗಂಟೆಗೆ ತಾವು ಖುದ್ದು ಅಥವಾ ವಕೀಲರ ಮೂಲಕ ಹಾಜರಾಗತಕ್ಕದ್ದು. ಇಲ್ಲವಾದಲ್ಲಿ ಘನ ನ್ಯಾಯಾಲಯವು ನಿಮ್ಮ ವಿರುದ್ಧ ಏಕಪಕ್ಷೀಯವಾಗಿ ತೀರ್ಮಾನ ತೆಗೆದುಕೊಳ್ಳಲಾಗುತ್ತದೆ. 2026ರ 30/4/26 ತಿಂಗಳಿನ 4 ನೇ ದಿನದಂದು ಇದನ್ನು ನನ್ನ ಸಹಿಯೊಡನೆ ಮತ್ತು ನ್ಯಾಯಾಲಯದ ಮೊಹರಿನೊಡನೆ ಕೊಡಲಾಗಿದೆ.

By Order of the Court
Sd/- Chief Ministerial Officer
Court of Senior Civil Judge and CJM., Mysuru

ವಾದಿಯ ಪರ ವಕೀಲರು
ಸಹಿ/– ಶ್ರೀ ಎನ್. ಮಧುಸೂದನ್, ವಕೀಲರು, ನಂ. 27, ಹಾರಂಗಿ ರಸ್ತೆ, ಕಾವೇರಿನಗರ, ಎಸ್.ಬಿ.ಎಂ.ಲೇಔಟ್ ಒಳಗೆ, ಬೋಗಾದಿ, ಮೈಸೂರು–570 026

PUBLIC NOTICE

My client Mr. D Honnappa S/o Late Dasappa, aged about 74 years, Aadhar No. 8408 9821 6446, Residing at No. 34, 7th Cross, 7th Main, Near Vinayaka Temple, Nobonagar, B.G Road, Bengaluru 560 076 informs the General Public that, he has lost original document of Allotment Letter dated 20.03.1989, Possession Certificate dated 20.03.1989, Sanction letter dated 20.04.1989 and Completion Certificate dated 15.06.1993 issued by the Mysore Development Authority in respect of the schedule property mentioned herein below. In this regard my client had lodged a Police Complaint on 12.05.2026 vide Lost Report No. 2198863/2026. If any person/s who can trace/finds the same may please hand over it to the aforesaid owner/ undersigned advocate within 5 days from the date of this notice.

Schedule Property: All that piece and parcel of immovable property bearing Site No.3999, PID No. 34-10-946-709 formed by the Mysore Urban Development Authority, situated Near Hampi Circle, Vijayanagar 2nd Stage, Mysore, measuring East to West: 18.00Mtrs. and North to South: 12.00 Mtrs. in all measuring 216 Square Mtrs and bounded on the East by: Road, West by: House No. 3976, North by:- 3998 and South by: House No. 4000.

Sd/- Anil Kumar H, Advocate
LEX AVENUE, Advocates & Solicitors, No.34, 7th Cross, 7th Main road, Near Vinayaka Temple, Nobonagar, B.G. Road, Bangalore-560076,
Place: Bangalore Mobile : 9886698898/ 8073072084
Dated: 12.05.2026

ಸಾರ್ವಜನಿಕರ ಗಮನಕ್ಕೆ

ಈ ಕೆಳಕಂಡ ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ನಮ್ಮ ಕಕ್ಷಿದಾರರು ಪ್ರತಿವಾದಿಯ ವಿರುದ್ಧ ನಿರ್ದಿಷ್ಟ ಪರಿಹಾರ ಅಧಿನಿಯಮದಡಿ ಮೈಸೂರಿನ 7ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯದಲ್ಲಿ ಅಸಲು ಸಂಖ್ಯೆ 552/2020ರ ದಾವೆ ಹೂಡಿದ್ದು, ಸದರಿ ದಾವೆಯು ರಾಜೀ ಮೂಲಕ ಇತ್ಯರ್ಥಗೊಂಡಿದ್ದು, ಸದರಿ ರಾಜೀ ಡಿಕ್ರಿಯಂತೆ ನಮ್ಮ ಕಕ್ಷಿದಾರರು ಪ್ರತಿವಾದಿಗಳಿಗೆ ಕ್ರಯದ ಮೊಬಲಗನ್ನು ಪಾವತಿಸಿದ್ದು, ಪ್ರತಿವಾದಿಗಳು ಈ ಕೆಳಕಂಡ ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಮೂಲ ದಾಖಲಾತಿಗಳನ್ನು ಒದಗಿಸಿದ ನಂತರ ಶುದ್ಧ ಕ್ರಯಪತ್ರ ಬರೆಸಿ ನೋಂದಣಿ ಮಾಡಿಸಿಕೊಳ್ಳಲು ನಮ್ಮ ಕಕ್ಷಿದಾರರು ಸಿದ್ಧರಿರುವ ಕಾರಣ, ಈ ಕೆಳಕಂಡ ಸ್ವತ್ತಿಗೆ ಸಂಬಂಧಿಸಿದಂತೆ ಸಾರ್ವಜನಿಕರು ಪ್ರತಿವಾದಿಗಳಿಂದ ಯಾವುದೇ ರೀತಿಯ ಕ್ರಯ/ಪರಭಾರೆ ಇತ್ಯಾದಿ ವ್ಯವಹಾರಗಳನ್ನು ನಡೆಸದಂತೆ ಈ ಸಾರ್ವಜನಿಕ ಪ್ರಕಟಣೆ ಮೂಲಕ ತಿಳಿಸಲಾಗಿದೆ. ತಪ್ಪಿದಲ್ಲಿ ಅಂತಹ ಸಂಧರ್ಭದಲ್ಲಿ ಉಂಟಾಗಬಹುದಾದ ಯಾವುದೇ ಕಷ್ಟ ನಷ್ಟಗಳಿಗೆ ನಮ್ಮ ಕಕ್ಷಿದಾರರು ಜವಾಬ್ದಾರರಲ್ಲ ಎಂದು ಈ ಸಾರ್ವಜನಿಕ ಪ್ರಕಟಣೆ ಮೂಲಕ ತಿಳಿಸಲಾಗಿದೆ.

ಷೆಡ್ಯೂಲ್ ಸ್ವತ್ತಿನ ವಿವರ

ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ವರುಣಾ ಹೋಬಳಿ, ಸರ್ಕಾರಿ ಉತ್ತನಹಳ್ಳಿ ಗ್ರಾಮದ ಸರ್ವೆ ನಂ.59/2ರ ಒಟ್ಟು ವಿಸ್ತೀರ್ಣ 3.00 ಎಕರೆ 08 ಗುಂಟೆ ಪೈಕಿ 2.00 ಎಕರೆ 20 ಗುಂಟೆ ಜಮೀನಿಗೆ ಚಕ್ಕುಬಂಧಿ: ಪೂರ್ವಕ್ಕೆ: ಖಾಸಗಿ ಸ್ವತ್ತು, ಪಶ್ಚಿಮಕ್ಕೆ : ಸರ್ವೆ ನಂ.59/1ರ ಜಮೀನು, ಉತ್ತರಕ್ಕೆ: ರಸ್ತೆ, ದಕ್ಷಿಣಕ್ಕೆ: ಖಾಸಗಿ ಸ್ವತ್ತು.

ಸಹಿ/– ಟಿ. ಪೂರ್ಣಕುಮಾರ್ ವಕೀಲರು
ನಂ. 2334, ಸಿಹೆಚ್–1, ಪಂಪಾಪತಿ ರಸ್ತೆ ಹಿಂಭಾಗ, ಜಯನಗರ, ಮೈಸೂರು –14
ಮೊ.ನಂ. 9844243750 / 9480380188